
# ರಂಗಭೂಮಿ ಜೀವ-ಜೀವಾಳ

# ಶ್ರೀಧರ ಹೆಗಡೆ

- ಗವೀಶ ಹಿರೇಮಠ



ಕರ್ನಾಟಕ ನಾಟಕ ಅಕಾಡೆಮಿ

ರಂಗಸಂಪನ್ನರು ಮಾಲಿಕೆ

ರಂಗಭೂಮಿ ಜೀವ-ಜೀವಾಳ

# ಶ್ರೀಧರ ಹೆಗಡೆ

ಗವೀಶ ಹಿರೇಮಠ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦೦೦೨.

**Shreedhara Hegade**
A Monographi in Kannada by **Gavish Hiremath**
Published by **B. Manjunath Aradhya,** Registrar, Karnataka Nataka Academy, Kannada Bhavana, J.C. Road, Bengaluru-560 002.
Phone:080-22237484

| | | |
|---|---|---|
| ಹಕ್ಕುಗಳು | : | ಕರ್ನಾಟಕ ನಾಟಕ ಅಕಾಡೆಮಿ |
| ಮೊದಲ ಮುದ್ರಣ | : | ೨೦೧೬ |
| ಪ್ರತಿಗಳು | : | ೧೦೦೦ |
| ಬಳಸಿದ ಪೇಪರ್ | : | ೭೦ ಜಿಎಸ್ಎಂ ಮ್ಯಾಪ್ಲಿಥೋ |
| ಪುಟಗಳು | : | viii + ೧೦೧ |
| ಬೆಲೆ | : | ರೂ. ೬೦/- |

ಪ್ರಕಾಶಕರು
**ಬಿ. ಮಂಜುನಾಥ ಆರಾಧ್ಯ**
ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦೦೦೨
ದೂರವಾಣಿ:೦೮೦-೨೨೨೩೭೪೮೪

ಮುದ್ರಣ:
ಎಂ.ಎಸ್. ಗ್ರಾಫಿಕ್ಸ್
ಬೆಂಗಳೂರು-೫೬೦ ೦೭೯.
ಮೊ.: ೯೮೪೫೭೮೧೫೧೧

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಬಾಗಲಕೋಟೆ ಜಿಲ್ಲೆ ಇಳಕಲ್ ನಲ್ಲಿ ೩೦ ದಿನಗಳ ವೃತ್ತಿರಂಗಭೂಮಿ ತರಬೇತಿ ಶಿಬಿರ, ಮುಂಬೈ, ದೆಹಲಿ ಹಾಗೂ ಕೇರಳದ ತ್ರಿಷ್ಯೂರಿನಲ್ಲಿ ಹೊರರಾಜ್ಯ ನಾಟಕೋತ್ಸವ, ಕಾಸರಗೋಡಿನಲ್ಲಿ ಗಡಿನಾಡು ಬಹುಭಾಷಾ ನಾಟಕೋತ್ಸವ ಮತ್ತು ಮೈಂದರ್ಗಿಯಲ್ಲಿ ಗಡಿನಾಟಕ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ ೨೦೧೫ ಸೆ.೨೪ರಿಂದ ೩೦ರವರೆಗೆ ನಡೆದ ರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗಭೂಮಿ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್.ಅರಿಶಿಣಗೋಡಿ ಅವರಿಗೆ ಇಳಕಲ್ಲಲ್ಲಿ ಹಾಗೂ ಎಲ್.ಬಿ.ಕೆ.ಅಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೨೧ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ೨ ದಿನ ಹಾಗೂ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ೭ ದಿನಗಳ ಕಾಲ ನಡೆದ ವೃತ್ತಿರಂಗಭೂಮಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು, ವಿಶೇಷಘಟಕ ಯೋಜನೆಯಡಿ ೩೦ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ವಿಶೇಷಘಟಕ ಯೋಜನೆಯಡಿ ಐದು ಕಲಾವಿದರ ಮತ್ತು ಗಿರಿಜನ ಯೋಜನೆಯಲ್ಲಿ ಇಬ್ಬರು ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ ಮಾಡಲಾಗಿದೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಅದರಂತೆ ೧೨ ವೃತ್ತಿ ಕಂಪನಿಗಳ ಸಾಕ್ಷ್ಯಚಿತ್ರಗಳನ್ನು ನಿರ್ಮಿಸಲಾಗುತ್ತಿದೆ. ಸರಿಸುಮಾರು ಕಳೆದ ೨೦ ವರ್ಷಗಳಿಂದ ಸ್ಥಗಿತಗೊಂಡಿದ್ದ ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ "ಸಂವಾದ" ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟಣೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟಣೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ೧೯೫೯ರಿಂದ ೨೦೧೬ರವರೆಗಿನ ನಾಟಕ ಅಕಾಡೆಮಿಯ ಎಲ್ಲಾ ಪ್ರಶಸ್ತಿ ಪುರಸ್ಕೃತರ ಪರಿಚಯದ ಪುಸ್ತಕವನ್ನು ಹೊರತರಲು ಕ್ರಮವಹಿಸಲಾಗುತ್ತಿದೆ. ಈ ಎಲ್ಲಾ ಕನಸು ಸಾಕಾರಗೊಳ್ಳಲು ಶ್ರಮಿಸಿದ ಪ್ರಕಟಣಾ ಸಮಿತಿಯ ಸದಸ್ಯರು/ನಾಟಕ ಅಕಾಡೆಮಿಯ ಸದಸ್ಯರು ಹಾಗೂ ಜಿಲ್ಲಾರಂಗಮಾಹಿತಿ

ಮಾಲಿಕೆಯಡಿ ಸರಿಸುಮಾರು ೨೦ ಹಾಗೂ ರಂಗಸಂಪನ್ನರು ಮಾಲಿಕೆಯಡಿ ೧೫ ಜನ ಕಲಾವಿದರ ಪುಸ್ತಕಗಳನ್ನು ಬರೆದುಕೊಟ್ಟ ಎಲ್ಲಾ ಲೇಖಕರಿಗೆ ಹಾಗೂ ಸಂವಾದ ಪತ್ರಿಕೆಯ ಸಂಪಾದಕರಾದ ಶ್ರೀ ಶಶಿಧರ ಭಾರಿಘಾಟ್, ಈ ಪುಸ್ತಕವನ್ನು ಹೊರತರಲು ಸಹಕರಿಸಿದ ಶ್ರೀಧರ ಹೆಗಡೆ, ಲೇಖಕರಾದ ಶ್ರೀ ಗವೀಶ್ ಹಿರೇಮಠ್, ಸಕಾಲಕ್ಕೆ ಪುಸ್ತಕವನ್ನು ಮುದ್ರಿಸಿಕೊಟ್ಟ ಎಂ.ಎಸ್. ಗ್ರಾಫಿಕ್ಸ್ ಅವರಿಗೂ, ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಜಿ.ಮಂಜುನಾಥ ಆರಾಧ್ಯ ಹಾಗೂ ಅಕಾಡೆಮಿಯ ಎಲ್ಲಾ ಸಿಬ್ಬಂದಿವರ್ಗದವರಿಗೂ ಕೃತಜ್ಞತೆಗಳು.

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ಪ್ರವೇಶಕ್ಕೆ ಮೊದಲು...

ವೃತ್ತಿರಂಗಭೂಮಿಯ ಹಿರಿಯ ಕಲಾವಿದರಾದ ಶ್ರೀಧರ ಹೆಗಡೆ ಅವರು ಜನಪ್ರಿಯ ಹಾಗೂ ಗೌರವಾನ್ವಿತ ವ್ಯಕ್ತಿ.

ಕಳೆದ ಮೂವತ್ತು ವರ್ಷಗಳಿಂದ ಶ್ರೀ ಎಲ್.ಬಿ. ಶೇಖಮಾಸ್ತರ ಅವರ "ಶ್ರೀ ಗುರುಕುಮಾರೇಶ್ವರ ನಾಟ್ಯ ಸಂಘ" ಹಾನಗಲ್ ಕಂಪನಿಯ ಸಂಚಾಲಕರಾಗಿ ರಂಗ ರಥವನ್ನು ಎಳೆದುಕೊಂಡುಬಂದವರು. ಶೇಖಮಾಸ್ತರ ಹಾಗೂ ಶ್ರೀಧರ ಹೆಗಡೆ ಅವರ ಸ್ನೇಹ ಮೆಚ್ಚುವಂಥದ್ದು. ಅವರೀರ್ವರಲಿ, ಏನೇ ಭಿನ್ನಾಭಿಪ್ರಾಯಗಳಿರಲಿ, ಏನೇ ತಪ್ಪುಗಳಾಗಲಿ ಅವುಗಳಿಂದ ಸ್ನೇಹಕ್ಕೆ ಧಕ್ಕೆ ಬಂದಿಲ್ಲ.

ಕಳೆದ ನಲವತ್ತೆರಡು ವರ್ಷಗಳ ಹಿಂದೆ ಉದ್ಯೋಗಕ್ಕಾಗಿ ಮನೆಬಿಟ್ಟು ಬದುಕುವದಾರಿ ಹುಡುಕಿಕೊಂಡು ಬಂದು ರಂಗಭೂಮಿ ಸೇರಿದ ಶ್ರೀಧರ ಅವರು ರಂಗದೀಕ್ಷೆತೊಟ್ಟು ಸಾಧಿಸಿದ್ದು ಅಪಾರ. ನಟರಾಗಿ, ನಿರ್ದೇಶಕರಾಗಿ, ಮಾಲಿಕರಾಗಿ, ಸಂಚಾಲಕರಾಗಿ ನಿಷ್ಠೆಯಿಂದ ದುಡಿಯುತ್ತ ರಂಗಾಸಕ್ತರು ಅಭಿಮಾನ ಪಡುವಂತೆ ಬೆಳೆದವರು. ರಂಗಭೂಮಿಗಾಗಿ ತಮ್ಮನ್ನು ಸಂಪೂರ್ಣ ಅರ್ಪಿಸಿಕೊಂಡು ಇಡೀ ಜೀವನವನ್ನೇ ಗಂಧದ ಕೊರಡಿನಂತೆ ತೆಯ್ದುಕೊಂಡು ಸೌಗಂಧಬೀರಿದವರು.

ಶ್ರೀಧರ ಹೆಗಡೆಯವರ ಕಲಾ ಬದುಕಿನ ಇನ್ನೊಂದು ಪ್ರಮುಖ ಅಂಶವೆಂದರೆ ತಾವು ಬೆಳೆಯುತ್ತ ಬೆಳೆಯುತ್ತ ಅನೇಕರನ್ನು ಬೆಳೆಸಿದರು. ತಮ್ಮ ತಿಳುವಳಿಕೆ, ತಮ್ಮ ಅನುಭವ ಧಾರೆ ಎರೆದು ಮಾರ್ಗದರ್ಶನ ಮಾಡುತ್ತ ನೂರಾರು ಕಲಾವಿದರನ್ನು ನಿರ್ಮಿಸಿದ್ದು ಬಹುದೊಡ್ಡ ಕೊಡುಗೆ. ಇಂದು ಅವರ ಶಿಷ್ಯ ಬಳಗ ನಾಡಿನತುಂಬ ಇದ್ದು ಅವರಷ್ಟೇ ಹೆಸರು ಮಾಡಿದ್ದಾರೆ.

ಕಳೆದ ನಾಲ್ಕು ದಶಕಗಳಿಂದ ಶ್ರೀಧರ ಅವರ ಪರಿಚಯ ನನಗೆ. ಕಳೆದ ಹದಿನೈದು ವರ್ಷಗಳಿಂದ ತೀರ ಹತ್ತಿರದಿಂದ ಅವರನ್ನು ಬಲ್ಲೆ. ತಮ್ಮ ಬದುಕಿನ ಅನೇಕ ಸಂಗತಿಗಳನ್ನು ಮುಕ್ತವಾಗಿ ಹಂಚಿಕೊಂಡವರು. ಅವರ ಸಮಗ್ರ ಬದುಕನ್ನು, ಜೀವನದ ಎಲ್ಲಾ ಘಟನೆಗಳನ್ನು ಇಲ್ಲಿ ಹೇಳಲು ಸಾಧ್ಯವಾಗದಿದ್ದರೂ ಬದುಕಿನ ಪ್ರಮುಖ ಘಟನೆಗಳನ್ನು ಸಾಧನೆಯನ್ನು ಹೇಳಲು ಪ್ರಯತ್ನಿಸಿದ್ದೇನೆ.

ಇಂಥ ಒಬ್ಬ ಧೀಮಂತ ಕಲಾವಿದರ ಚರಿತ್ರೆಯನ್ನು ಹೊರತಂದು ಸಾರಸ್ವತ ಪ್ರಪಂಚಕ್ಕೆ ಅವರ ಶ್ರಮ–ಸಾಧನೆ ಪರಿಚಯಿಸುತ್ತಿರುವ ನಾಟಕ ಅಕಾಡೆಮಿಯ ಕಾರ್ಯ  ಮೆಚ್ಚುವಂಥದ್ದು.

ಶ್ರೀಧರ ಅವರನ್ನು ಕುರಿತು ಬರೆಯುವ ಅವಕಾಶ ಕಲ್ಪಿಸಿಕೊಟ್ಟ ನಾಟಕ ಅಕಾಡೆಮಿ ಅಧ್ಯಕ್ಷರಿಗೆ,  ಸದಸ್ಯರಿಗೆ, ರಿಜಿಸ್ಟ್ರಾರ್ ಅವರಿಗೆ ನಾನು ಋಣಿಯಾಗಿದ್ದೇನೆ.

ಮಾಹಿತಿ ನೀಡಿದ ಶ್ರೀಧರ ಅವರಿಗೆ ಅವರ ಬಾಳ ಸಂಗಾತಿ ಶ್ರೀಮತಿ ರಾಜಮ್ಮನವರಿಗೆ, ಡಿ.ಟಿ.ಪಿ. ಮಾಡಿಕೊಟ್ಟ ಆನಂದರಾವ್ ಬಿರಾದರ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿಕೊಟ್ಟ ಎಂ.ಎಸ್. ಗ್ರಾಫಿಕ್ಸ್ ಅವರಿಗೆ ಧನ್ಯವಾದಗಳು.

**ಗವೀಶ ಹಿರೇಮಠ**

ಮೊ.:೯೪೪೮೬೫೧೬೩೪

## ಕರ್ನಾಟಕ ನಾಟಕ ಅಕಾಡೆಮಿ

### ಅಕಾಡೆಮಿಗೆ ಆಯ್ಕೆಯಾಗಿರುವ ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿ

ಶ್ರೀ ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ, ಬಿಜಾಪುರ ಜಿಲ್ಲೆ

ಸದಸ್ಯರು, ಕರ್ನಾಟಕ ನಾಟಕ ಅಕಾಡೆಮಿ

ಶ್ರೀ ಎನ್.ಕೆ.ರಾಮಕೃಷ್ಣ, ಬೆಂಗಳೂರು
ಶ್ರೀ ವಿ.ಎನ್.ಅಕ್ಕಿ, ರಾಯಚೂರು
ಶ್ರೀಮತಿ ಕಲ್ಪನಾ ನಾಗನಾಥ್, ಬೆಂಗಳೂರು
ಶ್ರೀ ಬಿ.ಎಂ.ರಾಮಚಂದ್ರ, ಮೈಸೂರು
ಉಮೇಶ್ ಸಾಲಿಯಾನ, ಕಾಸರಗೋಡು
ಶ್ರೀ ಪಿ.ತಿಪ್ಪೇಸ್ವಾಮಿ, ಚಿತ್ರದುರ್ಗ ಜಿಲ್ಲೆ
ಶ್ರೀ ಹೆಚ್.ಷಡಾಕ್ಷರಪ್ಪ ಹೊಸಮನಿ, ದಾವಣಗೆರೆ ಜಿಲ್ಲೆ
ಶ್ರೀ ಎಸ್.ಕೆ.ಕೊನೆಸಾಗರ, ಬಾಗಲಕೋಟೆ ಜಿಲ್ಲೆ
ಶ್ರೀಮತಿ ಅನ್ನಪೂರ್ಣ ಸಾಗರ್, ಶಿವಮೊಗ್ಗ ಜಿಲ್ಲೆ
ಶ್ರೀಮತಿ ಎ.ವರಲಕ್ಷ್ಮಿ, ಬಳ್ಳಾರಿ
ಶ್ರೀ ಹಾಲ್ಕುರಿಕೆ ಶಿವಶಂಕರ್, ಕೊಪ್ಪಳ ಜಿಲ್ಲೆ
ಶ್ರೀ ರಾಜಪ್ಪ ಕಿರಗಸೂರು, ಮೈಸೂರು ಜಿಲ್ಲೆ
ಶ್ರೀ ಎಂ.ಎಸ್.ಗುಣಶೀಲನ್, ಬೆಂಗಳೂರು
ಶ್ರೀ ಮುದ್ದಣ್ಣ ರಟ್ಟೆಹಳ್ಳಿ, ಬೆಂಗಳೂರು
ಶ್ರೀ ಕೆ.ಜಗುಚಂದ್ರ, ಧಾರವಾಡ

ಸಹಸದಸ್ಯರು

ಡಾ.ಶ್ರೀಪಾದ ಭಟ್,ಉತ್ತರ ಕನ್ನಡ ಜಿಲ್ಲೆ
ಶ್ರೀ ಗುಡಿಹಳ್ಳಿ ನಾಗರಾಜ, ಬೆಂಗಳೂರು
ಶ್ರೀ ಎಲ್.ಹೆಚ್.ರಂಗನಾಥಪ್ಪ, ತುಮಕೂರು ಜಿಲ್ಲೆ

ರಿಜಿಸ್ಟ್ರಾರ್ : ಬಿ. ಮಂಜುನಾಥ್ ಆರಾಧ್ಯ
ಯೋಜನಾ ಸಹಾಯಕರು : ಕೆ. ರೇವಣ್ಣ
ಕಛೇರಿ ಸಿಬ್ಬಂದಿ : ಸೌಭಾಗ್ಯಲಕ್ಷ್ಮೀ, ಎಂ. ಭೋಜಣ್ಣ, ಸುಶೀಲಮ್ಮ

ಪ್ರಕಟಣಾ ಸಮಿತಿ ಸದಸ್ಯರು

ಶ್ರೀ ಮುದ್ದಣ್ಣ ಶಿರಹಟ್ಟಿ, ಹಾವೇರಿ
ಶ್ರೀ ಎಂ.ಎಸ್.ಗುಣಶೀಲನ್, ಬೆಂಗಳೂರು
ಶ್ರೀ ಎಸ್.ಕೆ.ಕೊನೆಸಾಗರ, ಬಾಗಲಕೋಟೆ

# ರಂಗಭೂಮಿ ಜೀವ-ಜೀವಾಳ
# ಶ್ರೀಧರ ಹೆಗಡೆ

– ಗವೀಶ ಹಿರೇಮಠ

ಶ್ರೀಧರ ಹೆಗಡೆ ಬಣ್ಣದ ಲೋಕದಲ್ಲೊಂದು ಆಕರ್ಷಕ ಹೆಸರು. ತಮ್ಮ ಪ್ರತಿಭೆಯಿಂದ, ತಮ್ಮ ತಪಸ್ಸಿನಿಂದ ಕಲಾಕ್ಷೇತ್ರ ವಿಸ್ತರಿಸಿಕೊಂಡವರು. ಹೊಸಗಾಳಿ, ಹೊಸ ಬೆಳಕು ಪಡೆದು ತಮ್ಮ ಕನಸುಗಳನ್ನು ರಂಗದಲ್ಲಿ ನನಸು ಮಾಡಿಕೊಂಡವರು. ರಂಗ ಕರ್ಮಿಯಾಗಿ, ನಟರಾಗಿ, ನಿರ್ದೇಶಕರಾಗಿ, ಸಂಚಾಲಕರಾಗಿ, ಮಾಲೀಕರಾಗಿ ರಂಗದ ಆಳ ವಿಸ್ತಾರವನ್ನರಿತು ಹೊಸ ಪೀಳಿಗೆಗೆ ಮಾರ್ಗದರ್ಶಕರಾದವರು. ತ್ಯಾಗ, ಹೋರಾಟ, ಪ್ರತಿಭೆಯಿಂದ ಬದುಕಿಗೊಂದು ಅರ್ಥ ಪಡೆದವರು ಶ್ರೀಧರ ಹೆಗಡೆ ಇದೀಗ ನಾಡೇ ಗುರುತಿಸುವಂತಹ ರಂಗ ಪ್ರತಿಭೆ.

ಶ್ರೀಧರ ಹೆಗಡೆಯವರ ಬಗ್ಗೆ ಯೋಚಿಸಿದಾಗಲೆಲ್ಲ ರಂಗ ಭೂಮಿಯ ಚಿಂತನೆಗಳಲ್ಲಿ, ಸತ್ಯ ಶೋಧನೆಗಳಲ್ಲಿ ಹೊಸ ಕಲಾ ಪ್ರಪಂಚವನ್ನು ತೋರಿಸಿಕೊಟ್ಟ ಒಬ್ಬ ಧೀಮಂತ ನಟ. ಅವರ ಬದುಕಿನ ಅನೇಕ ಘಟನೆಗಳನ್ನು ಆಘಾತಗಳನ್ನು, ಕಷ್ಟನಷ್ಟಗಳನ್ನು ಕೇಳಿದಾಗ ಬದುಕು ರೋಮಾಂಚಕವಾಗಿ ಕಾಣುತ್ತಿದೆ. ಕಷ್ಟ-ನಷ್ಟಗಳು, ಬದುಕಿನ ಅವಿಭಾಜ್ಯ ಅಂಗಗಳೆಂದುಕೊಂಡವರು. ಬದುಕಿನಲ್ಲಿ ಅವುಗಳ ಅಸ್ತಿತ್ವವೂ ಬದುಕಿನಷ್ಟೇ ನಿಶ್ಚಿತವೆಂದು ತಿಳಿದವರು. ನೋವು, ದು:ಖ ಅವರ ಬದುಕಿನಲ್ಲಿ ಪವಿತ್ರವಾದ ಅನುಭವಗಳು.

ಶ್ರೀಧರ ಹೆಗಡೆಯವರು ರಂಗಲೋಕದಲ್ಲಿ ಬೆಳೆಯುತ್ತ ಬೆಳೆಯುತ್ತ ರಂಗಭೂಮಿಯನ್ನು ಬೆಳೆಸಿದರು. ತಮ್ಮ ಆಲೋಚನೆಗಳನ್ನು, ತಮ್ಮ ಚಿಂತನೆಗಳನ್ನು, ತಮ್ಮ ಸಿದ್ಧಾಂತವನ್ನು ದೃಢೀಕರಿಸಿದರು. ಅವುಗಳಿಂದ ಅವರು ರಂಗದಲ್ಲಿ ಇಂದಿನ - ನಾಳಿನ ಬೆಳಕು.

ಶ್ರೀಧರ ಹೆಗಡೆಯವರು ಸಧ್ಯದ ವೃತ್ತಿ ರಂಗ ಕಲಾವಿದರಲ್ಲಿಯೇ ಉತ್ತಮ ನಟರೆನ್ನುವುದರಲ್ಲಿ ಎರಡು ಮಾತಿಲ್ಲ. ವೃತ್ತಿ ಹಾಗೂ ಹವ್ಯಾಸಿ ಕಲಾವಿದರೆಲ್ಲರ ಮೆಚ್ಚುಗೆ ಪಡೆದ ಶ್ರೀಧರ ಹೆಗಡೆಯವರು ನಲವತ್ತು ವರ್ಷಗಳ ದೀರ್ಘ ರಂಗ ಬದುಕಿನಲ್ಲಿ ಅನೇಕ ಏರಿಳಿತ ಕಂಡವರು. ಶ್ರಮ, ಶ್ರದ್ಧೆ, ನಿಷ್ಠೆಯಿಂದ ರಂಗಭೂಮಿಯಲ್ಲಿ ದುಡಿದವರು. ಥೇಟರ ಕಟ್ಟುವುದರಿಂದ ಹಿಡಿದು ನಿರ್ದೇಶನದವರೆಗೂ ಕಾರ್ಯನಿರ್ವಹಿಸಿ ಕಳೆದ ಎರಡು ದಶಕಗಳಿಂದ "ಶ್ರೀ ಗುರುಕುಮಾರೇಶ್ವರ ನಾಟ್ಯ ಸಂಘ" ಹಾನಗಲ್ ಕಂಪನಿಯ ಸಂಚಾಲಕರು. ಶೇಖ ಮಾಸ್ತರ ಕಂಪನಿಯ ಮಾಲಿಕರಾಗಿದ್ದರೂ ಬಹುಪಾಲು ರಂಗ ಜವಬ್ದಾರಿಯನ್ನು ಶ್ರೀಧರ ಹೆಗಡೆಯವರೇ ನಿಭಾಯಿಸುತ್ತ ಬಂದವರು. "ಶ್ರೀಗುರು ಕುಮಾರೇಶ್ವರ ನಾಟ್ಯ ಸಂಘ" ಹಾನಗಲ್ ಕಂಪನಿ ಕಲಬುರಗಿಯಲ್ಲಿಯೇ ಬೀಡು ಬಿಟ್ಟು ದಾಖಲಿಸುವುದರಲ್ಲಿಯೂ ಹೆಗಡೆಯವರ ಪಾತ್ರವಿದೆ.

ನಲವತ್ತು ವರ್ಷಗಳ ರಂಗದ ಬದುಕಿನಲ್ಲಿ ಕಂಡ ಅನುಭವ ಹಿರಿದು. ಜೀವನದುದ್ದಕ್ಕೂ ಎದುರಾಗುತ್ತ ಬಂದ ಅನೇಕ ಸಮಸ್ಯೆಗಳನ್ನು ಎದುರಿಸುತ್ತ ರಂಗಭೂಮಿಗೆ ದೀಕ್ಷೆ ತೊಟ್ಟವರು. ಅವರ ಉಸಿರೇ ರಂಗಭೂಮಿ ಗಂಧದ ಕೊರಡಿನಂತೆ ತೆಯ್ದುಕೊಂಡು ಸೌಗಂಧ ಬೀರಿದ್ದಾರೆ. ತಮ್ಮನ್ನೇ ಉರಿಸಿಕೊಂಡು ಬೆಳಕು ಹರಡಿದ್ದಾರೆ. ಅವರ ತ್ಯಾಗ, ಅವರ ಹೋರಾಟ ಅವರ ಅರ್ಪಣಾ ಭಾವದ ದುಡಿಮೆ ಎಲ್ಲವೂ ಪರಿಗಣಿಸುವಂತಹವು. ರಂಗ ಭೂಮಿಗೆ ಜೀವನ ಸವೆಸಿ ಅದರ ಜೀವ- ಜೀವಾಳವಾದವರು.

ಶ್ರೀಧರ ಹೆಗಡೆ ಒಬ್ಬ ನಟ, ನಿರ್ದೇಶಕ, ಸಂಘಟಕ ಇವೆಲ್ಲವುಗಳ ಜೊತೆ ಒಬ್ಬ ಸ್ನೇಹಜೀವಿ. ಅವರ ಅಭಿನಯದ ಬಗ್ಗೆ ಹೇಳುವುದಾದರೆ ಸಧ್ಯ ಅವರನ್ನು ಸರಿಗಟ್ಟುವ ಕಲಾವಿದರು ತೀರ ಕಡಿಮೆ. ಬಹಳ ಜನ ಉತ್ತಮ ನಟರು ಒಂದೇ ಪಾತ್ರದ ಅಂದರೆ ನಾಯಕ, ಖಳನಾಯಕ, ಹಾಸ್ಯ ಯಾವುದಾದರೊಂದರಲ್ಲಿ ಯಶಸ್ವಿ ಪಡೆದು ಪ್ರಸಿದ್ಧಿ ಹೊಂದಿರುತ್ತಾರೆ. ಶ್ರೀಧರ ಹೆಗಡೆಯವರು ಎಲ್ಲಾ ಬಗೆಯ ಪಾತ್ರದಲ್ಲಿ ಯಶಸ್ಸು ಹೊಂದಿ ಆಕರ್ಷಿಸಿಸುತ್ತಾರೆ. ಆಲ್ ರೌಂಡ ನಟರೆನ್ನುವುದರಲ್ಲೂ ಎರಡು ಮಾತಿಲ್ಲ. "**ಕಿವುಡ ಮಾಡಿದ ಕಿತಾಪತಿ**"ಯಲ್ಲಿ ಹಾಸ್ಯ ಗುಕ್ಕನ ಪಾತ್ರ "**ಬದುಕು ಬಂಗಾರವಾಯ್ತು**" ನಾಟಕದಲ್ಲಿ ಮುಕ್ಕಣ್ಣನ ನಾಯಕ ಪಾತ್ರ" **ಮುರಿಯದ ಮನೆ** "ನಾಟಕದಲ್ಲಿ ಖಳನಾಯಕ ಮಹೇಂದ್ರ ವರ್ಮಾ ಪಾತ್ರ ಹೀಗೆ ಎಲ್ಲಾ ಪಾತ್ರಗಳನ್ನು ನಾನು ನೋಡಿ ಖುಷಿ ಪಟ್ಟಿದ್ದೇನೆ. ನನ್ನಂತೆ ನೂರಾರು ಪ್ರೇಕ್ಷಕರ ಮೆಚ್ಚಿಗೆಯ ಮಾತುಗಳೂ ಹೌದು.

ಶ್ರೀಧರ ಹೆಗಡೆಯವರು ವೃತ್ತಿ ರಂಗ ಅಭಿನಯ ಪರಂಪರೆಯಲ್ಲಿಯೇ ಅಭಿನಯಿಸಿದರೂ ತಮ್ಮದೇ ಆದ ಕಲ್ಪನೆಗಳಲ್ಲಿ, ಅನುಭವಗಳಲ್ಲಿ ಪಾತ್ರಗಳನ್ನು ವಿಶಿಷ್ಟಗೊಳಿಸಿ ವಿಭಿನ್ನವಾಗಿ ಕಾಣುವಂತೆ ಮಾಡುತ್ತಾರೆ. ಅವರ ಪಾತ್ರಗಳು ಎಂದೂ ಸಪ್ಪೆಯಾಗಿ ಕಂಡೇಯಿಲ್ಲ. ಶಶಕ್ತವಾಗಿ ಮೂಡಿ ಬಂದಿವೆ. ಇದೇ ಅವರ ಪ್ರಜ್ಞಾವಂತಿಕೆ. ಎಲ್ಲಾ ಪಾತ್ರಗಳಲ್ಲಿ ಅವರು ಯಶಸ್ವಿಯಾಗಿದ್ದರೂ ಜನರು ಅವರನ್ನು ಹಾಸ್ಯ ಪಾತ್ರಗಳಲ್ಲಿಯೇ ಕಾಣಲಿಚ್ಛಿಸುತ್ತಾರೆ.

ಶ್ರೀಧರ ಹೆಗಡೆಯವರು **"ಕಿವುಡ ಮಾಡಿದ ಕಿತಾಪತಿ"** ನಾಟಕದಲ್ಲಿ ಪಾರ್ಥ ಸಾರಥಿ ಹಾಸ್ಯ ಪಾತ್ರ ಸಾವಿರ ಸಾವಿರ ಜನರನ್ನು ರಂಜಿಸಿದೆ. ಗಂಭಿರವಾಗಿ ಕಾಣುವ ಬುದ್ಧಿವಂತನಲ್ಲವೆಂದರೂ ಬುದ್ಧಿವಂತನಾಗಿ ವರ್ತಿಸುವ ವಿಶಿಷ್ಟ ವ್ಯಕ್ತಿತ್ವದ ಪಾತ್ರವಿದು ಸ್ಪಷ್ಟವಾಗಿ ಮಾತನಾಡದ ಗುಕ್ಕ. ಈ ಪಾತ್ರಕ್ಕೆ ಪೋಷಕವಾಗಿ ಬರುವ ಇನ್ನೊಂದು ಪಾತ್ರ ಕಿವುಡ. ಕಿವುಡ, ಗುಕ್ಕ ನಾಟಕದ ಬಲು ಜೋಡಿ ಪಾತ್ರಗಳು. ಇಲ್ಲಿ ಗಮನ ಸೆಳೆಯುವುದು ಶ್ರೀಧರ ಹೆಗಡೆ ಯವರ ಗುಕ್ಕು ಶೈಲಿಯ ಮಾತುಗಾರಿಕೆ. ನಾಟಕದ ಕೊನೆಯವರೆಗೂ ಗುಕ್ಕು ಮಾತುಗಳಲ್ಲಿ ವ್ಯತ್ಯಾಸವಾಗದೇ ಹೋಗುವುದು. ಇಂಥ ಪಾತ್ರದಲ್ಲಿ ಮಾತುಗಾರಿಕೆ, ಅಭಿನಯವೇ ಯಶಸ್ಸಿನ ಹೆಗ್ಗಳಿಕೆ.

ಒಬ್ಬ ಪ್ರಜ್ಞಾವಂತ ಕಲಾವಿದ ಪ್ರಪಂಚದಲ್ಲಿ ತಾನು ಕಾಣುವ ನಿತ್ಯ ಸತ್ಯ ಘಟನೆಗಳನ್ನು ಓರೆಕೋರೆಗಳನ್ನು ಗಮನಿಸಿ ರಾತ್ರಿ ತನ್ನ ಅಭಿನಯದಲ್ಲಿ ಪಾತ್ರಕ್ಕೆ, ಕಥೆಗೆ ಧಕ್ಕೆಯಾಗದಂತೆ ಸಂದಾರ್ಭಾನುಸಾರ ಅವುಗಳನ್ನು ಅಳವಡಿಸಿಕೊಳ್ಳುತ್ತಾನಲ್ಲ ಅದೇ ಕಲಾವಿದನ.ಬುದ್ಧಿವಂತಿಕೆ. ಮಾಸ್ತರ ಹಿರಣ್ಯನವರು ಇದನ್ನೇ ಮಾಡಿದ್ದು. ಅಂಥ ಮಾತುಗಳು ಹಾಸ್ಯದ ಜೊತೆ ಜೊತೆ ಜಾಗ್ರತೆ ಮೂಡಿಸುತ್ತವೆ.

ಹಾಸ್ಯದಷ್ಟೇ ಗಂಭೀರ ಪಾತ್ರಗಳಲ್ಲಿಯೂ ಗಮನ ಸೆಳೆಯುವ ಶ್ರೀಧರ ಹೆಗಡೆಯವರು ಆ ಪಾತ್ರಗಳಿಂದ ಪರಿಣಾಮ ಬೀರುತ್ತಾರೆ, ಗಂಭೀರ ಪಾತ್ರಗಳೆಲ್ಲ ಅಂತಃಸತ್ವವನ್ನು ಸ್ಪಂದಿಸಿ ಪ್ರೇಕ್ಷಕರ ಮೆಚ್ಚುಗೆ ಪಡೆಯುತ್ತವೆ. ದಾರಿದೀಪ ನಾಟಕದ "ಬಾಪು" ಬದುಕು ಬಂಗಾರವಾಯ್ತು ನಾಟಕದ ಮುಕ್ಕಣ್ಣ ಯಶಸ್ವಿ ಪಾತ್ರಗಳು. ಅದರಲ್ಲೂ ಮುಕ್ಕಣ್ಣ ಒಬ್ಬ ಹಳ್ಳಿಯ ಮುಗ್ಧ, ಪ್ರಮಾಣಿಕ ಮನುಷ್ಯ, ನಿಷ್ಕಪಟ್ಟಿ ಈ ಪಾತ್ರದಲ್ಲಿ ಅಭಿನಯಕ್ಕೆ ಹೆಚ್ಚು ಆಸ್ಪದವಿದೆ. ರೇಣುಕಾ ಮಹಾತ್ಮೆಯಲ್ಲಿಯ "ಪರಶುರಾಮ" ವಿಭಿನ್ನ ಪಾತ್ರ. ಈ ಪಾತ್ರದಲ್ಲಿ ಶ್ರೀಧರ ತಮ್ಮ ಪ್ರತಿಭೆಯನ್ನೆಲ್ಲ ಎರಕಹೊಯ್ದು ಪಾತ್ರವನ್ನು ಬಹು ಎತ್ತರಕ್ಕೆ ತಂದು ಪ್ರೇಕ್ಷಕರೆದುರು ನಿಲ್ಲುಸುತ್ತಾರೆ, ನಿರಂತರ ಪಾತ್ರವನ್ನು ಉಳಿಸುತ್ತಾರೆ. ಈ ಪಾತ್ರದ ಅಭಿನಯದಲ್ಲಿ ಅವರ ಪ್ರೌಢಮೆ ಎದ್ದು ಕಾಣುತ್ತದೆ.

ಶ್ರೀಧರ ಹೆಗಡೆ ಅವರು ಇದೀಗ ಅರವತ್ತರ ಗಡಿದಾಟಿದ್ದಾರೆ. ದೀರ್ಘ ಬದುಕಿನಲ್ಲಿ ಬದುಕಿನ ಎಲ್ಲಾ ಮಜಲು ಕಂಡಿದ್ದಾರೆ. ನೋವು, ನಲಿವು, ಸುಖ ದು:ಖ, ಕಷ್ಟ–ನಷ್ಟ, ಮಾನ–ಅಪಮಾನ ಎಲ್ಲವುಗಳನ್ನು ಶಿವ ಪ್ರಸಾದವೆಂದು ಸ್ವೀಕರಿಸಿದ್ದಾರೆ. ಸುಖಬಂದಾಗ ಹಿಗ್ಗದೆ ದು:ಖ ಬಂದಾಗ ಕುಗ್ಗದೇ ಸಮನ್ವಯವಾಗಿ ಸ್ವೀಕರಿಸಿದ್ದಾರೆ.

ಶ್ರೀಧರ ಹೆಗಡೆ ರಂಗಭೂಮಿಗೆ ಬಂದುದು ಬದುಕುವ ದಾರಿ ಹುಡಿಕಿಕೊಂಡು ಬಂದ ಮೇಲೆ ನಿಷ್ಠೆಯಿಂದ ದುಡಿದು ಯಶಸ್ಸು ಪಡೆದಿದ್ದಾರೆ. ಅವರ ಸಾರ್ಥಕ ಬದುಕಿನಲ್ಲಿ ಕಲೆ, ಸಾಹಿತ್ಯದ ಜೊತೆ ಜೊತೆ ಸಂಸ್ಕೃತಿ – ಸಂಸ್ಕಾರವಿದೆ.

ಇಂಥ ಒಬ್ಬ ರಂಗ ಆರಾಧಕ, ರಂಗಕರ್ಮಿ ಜನ್ಮತಾಳಿದ್ದು ಮಲೆನಾಡ ಪ್ರದೇಶದ ಕಾರವಾರ ಜಿಲ್ಲೆಯ ಸಿದ್ಧಾಪುರ ತಾಲೂಕಿನ ಕೆರೆಹೊಂಡ ಚಿಕ್ಕ ಗ್ರಾಮದ ದೊಡ್ಡ ಕುಟುಂದಲ್ಲಿ ಬ್ರಹ್ಮಣ ದಂಪತಿಗಳಾದ ಗಣಪತಿ ಹೆಗಡೆ ಗಂಗಾದೇವಿ ದಂಪತಿಗಳ ಮಗನಾಗಿ ನಿಸರ್ಗ ನಾಡಿನಲ್ಲಿ ಕೃಷಿಯ ಕೆಲಸದಲ್ಲಿ ತೊಡಗಿಸಿಕೊಂಡು ಬೆಳೆದ ಶ್ರೀಧರ ಹೆಗಡೆ ಬಯಲು ನಾಡಿನ ನಾಟಕ ಕಂಪನಿಗಳಿಗೆ ಮಾರು ಹೋಗಿ ರಂಗದಲ್ಲಿ  ನಟರಾಗಿ, ನಿರ್ದೇಶಕರಾಗಿ, ಸಂಚಾಲಕರಾಗಿ ಜೀವನದ ದೀರ್ಘ ಅವಧಿ ಬಯಲು ನಾಡಿನಲ್ಲಿ ಕಳೆಯುತ್ತಾರೆಂದು ಯಾರೂ ನಿರೀಕ್ಷಿಸಿರಲಿಲ್ಲ, ಅವರ ಬದುಕೊಂದು  ಸಾಹಸದ ಕಥೆ.

**ಪ್ರಾದೇಶಿಕ ಹಿನ್ನಲೆ:**

ಕಾರವಾರ ಜಿಲ್ಲೆಯ ಸಿದ್ಧಾಪುರ ತಾಲೂಕಿನ ಕೆರೆಹೊಂಡ ಗ್ರಾಮ ನಿಸರ್ಗದ ಮಡಿಲಿನಲ್ಲಿದೆ. ಕಾರವಾರ ಜಿಲ್ಲೆಯಿಂದ ನೂರೆಂಭತ್ತು ಕಿ.ಮೀ. ದೂರದಲ್ಲಿ. ಈ ಗ್ರಾಮ ಸಿರ್ಸಿಗೆ ಐವತ್ತಾರು ಕಿಲೋಮೀಟರ ಹತ್ತಿರದ ಊರು. ಈ ಜನರ ಸಂತೆಯ ಪಟ್ಟಣ ಸಿರ್ಸಿಯೇ ಆಗಿದೆ. ಈ ಗ್ರಾಮಕ್ಕೆ ಹತ್ತಿರದಲ್ಲಿ ಅಘನಾಶಿನಿ ನದಿ ಹರಿಯುತ್ತಿದೆ. ಉಂಚಳ್ಳಿ ಫಾಲ್ಸ ಕೂಡ ಹತ್ತಿರದ್ದು. ಮೂವತ್ತು ಕಿಲೋ ಮೀಟರ ಅಂತರದಲ್ಲಿ ರಮಣೀಯ ಜೋಗಫಾಲ್ಸ ಇದೆ. ಕಾರವಾರ ಸಿರ್ಸಿ, ಸಿದ್ಧಾಪೂರ ಎಲ್ಲಾ ಪ್ರದೇಶ ನಿಸರ್ಗ ಸೌಂದರ್ಯದ ನಾಡು, ಗುಡ್ಡಗಳ ಸಾಲು, ತಗ್ಗು ದಿನ್ನೆಗಳು, ಗಿಡಮರಗಳು, ಹೂಬಳ್ಳಿಗಳು, ಭೂದೇವಿಯ ಸಿರಿವಂತಿಕೆಯನ್ನೇ ಸಾರುತ್ತಿವೆ. ಅಲ್ಲಿಯ ನೆಲ–ಜಲವೆಲ್ಲ ರಮಣೀಯ. ನೋಡಬೇಕು ಮತ್ತೆ ಮತ್ತೆ ನೋಡಬೇಕೆನ್ನುವ ಪ್ರದೇಶವದು. ಇಂಥ ನಾಡಿನಲ್ಲಿರುವವರೇ ಧನ್ಯರೆನಿಸುತ್ತಿದೆ. ಹಾಗಂತಲೇ ಕವಿ ಇಂಥ ನಿಸರ್ಗ ಸೌಂದರ್ಯ ಕಂಡೇ ಪ್ರಾರ್ಥಿಸಿರಬೇಕು **"ದೇವರೇ ಈ ನಾಡಿನಲ್ಲಿ ಮನುಷ್ಯನನ್ನಾಗಿ ಹುಟ್ಟಿಸು, ಹಾಗೆ ಹುಟ್ಟುವ ಅವಕಾಶ**

ದೊರೆಯದೇ ಹೋದರೆ ಕೊನೆಗೆ ಮರು ದುಂಬಿಯನ್ನಾಗಿಯಾದರೂ ಹುಟ್ಟಿಸೆಂದು" ಪ್ರಾರ್ಥಿಸರಬೇಕು.

ಈ ಕೆರೆಹೊಂಡ ಗ್ರಾಮ ಕೇವಲ ಎಪ್ಪತ್ತು, ಎಂಭತ್ತು ಮನೆಗಳ ಗ್ರಾಮವಾಗಿರಬೇಕು. ಒಂದೆರಡು ಕಿಲೋಮೀಟರ ಅಂತರದಲ್ಲಿ ಮತ್ತೊಂದು ಹಳ್ಳಿ, ಹೀಗೆ ಸುತ್ತು ಮುತ್ತಲು ಸುಮಾರು ೧೫೦ ಗ್ರಾಮಗಳಿರಬೇಕು ೧೫೦ ಗ್ರಮಾಗಳ ಸೇರಿಯೇ ಒಂದು ಗ್ರಾಮ ಪಂಚಾಯತ. ಪೋಷ್ಟ ಆಫೀಸ ಕೂಡ ಇಷ್ಟೆಲ್ಲ ಗ್ರಾಮಗಳು ಸೇರಿಯೇ ಒಂದಿದೆ. ಇಲ್ಲಿಯ ಮನೆಗಳೆಲ್ಲ ಒಂದರಿಂದ ಒಂದು ಅಂತರದಲ್ಲಿವೆ ಹತ್ತಿರ ಹತ್ತಿರ ಮನೆಗಳೇ ಇಲ್ಲ.

ಈ ಭಾಗದ ಜನರೆಲ್ಲರೂ ಪ್ರಕೃತಿ ಸೌಂದರ್ಯದಲ್ಲಿಯೇ ದೇವರನ್ನು, ಅನಂತ ಶಕ್ತಿಯನ್ನು ಕಂಡವರು. ಸಾಹಿತಿಗಳಿಗೆ ಕವಿಗಳಿಗಂತೂ ಈ ನಾಡು ಕಲ್ಪನೆಗಳಿಗೆ, ಭಾವನೆಗಳಿಗೆ, ಕನಸುಗಳಿಗೆ ಸಾಕಾರವಾಗುತ್ತದೆ. ಅಲ್ಲಿಯ ಜನರೆಲ್ಲ ಶ್ರಮ ಜೀವಿಗಳು. ಮಳೆ, ಚಳಿ ಲೆಕ್ಕಿಸದೇ ಕೃಷಿ ಕೆಲಸದಲ್ಲಿ ತೊಡಗಿಸಿಕೊಂಡಿರುತ್ತಾರೆ, ಧಾರಾಕಾರವಾಗಿ ಸುರಿಯುವ ಮಳೆಯನ್ನೂ ಅವರು ಲೆಕ್ಕಿಸುವುದಿಲ್ಲ.ಮಳೆಗಾಲದಲ್ಲಿ ಅಲ್ಲಿಯ ಜನರು ತಿಂಗಳುಗಟ್ಟಲೇ ಸೂರ್ಯನನ್ನು ನೋಡುವುದೇ ಅಪರೂಪ.

ಅಲ್ಲಿಯ ಬೆಳೆಗಳಲ್ಲಿ ಪ್ರಮುಖವಾಗಿ ಅಡಕೆ ನಂತರ ಯಾಲಕ್ಕಿ, ಕರಿಮೆಣಸು, ಬಾಳೆ. ವರ್ಷವಿಡೀ ದುಡಿದು ಬಂದ ಫಸಲನ್ನು ಮಾರಾಟ ಮಾಡಿ ವರ್ಷದ ಕಾಳು-ಕಡಿ, ಬಟ್ಟೆ-ಬರೆ ಹೀಗೆ ಬೇಕಾಗುವ ಎಲ್ಲಾ ಸಾಮಾನುಗಳನ್ನು ಖರೀದಿಸುವ ರೂಢಿ. ಅಲ್ಲಿಯ ಮನರಂಜನೆ ಎಂದರೆ ಪ್ರಮುಖವಾಗಿ ಯಕ್ಷಗಾನ ಆಗಾಗ ಸಿರ್ಸಿ, ಸಿದ್ಧಾಪುರಕ್ಕೆ ಬರುವ ಬಯಲುಸೀಮೆಯ ನಾಟಕ ಕಂಪನಿಗಳ ನಾಟಕ ಪ್ರದರ್ಶನ. ಕೆರೆಹೊಂಡಕ್ಕೆ ಸಮೀಪದಲ್ಲಿರುವ ಇಟಗಿ ಗ್ರಾಮದ ಈಶ್ವರ ದೇವಸ್ಥಾನ ಪ್ರಸಿದ್ಧ ವರ್ಷಕ್ಕೊಮ್ಮೆ ಜಾತ್ರೆ, ಜಾತ್ರೆಗೆ ಸುತ್ತಲೂ ಹಳ್ಳಿಗರು ಬರುವುದುಂಟು. ಧಾರ್ಮಿಕ ಕಾರ್ಯಗಳಲ್ಲಿಯೇ ಸಾಂಸ್ಕೃತಿಕ ಮನರಂಜನೆ ಕಾರ್ಯಕ್ರಮಗಳು ಅಲ್ಲಿ ಜರುಗುತ್ತವೆ. ಈ ಭಾಗದಲ್ಲಿ ನೀರಿಗೆ ಬರವಿಲ್ಲ ೨೦ ಅಡಿ ತೋಡಿದರಾಯತು ನೀರು. ಭಾವಿ ನೀರೇ ಎಲ್ಲದಕ್ಕೂ.

**ಕೌಟುಂಬಿಕ ಹಿನ್ನಲೆ**

ಹೆಗಡೆಯವರ ಕುಟುಂಬದ ಹಿನ್ನೆಲೆ ಗಮನಿಸಿದಾಗ ಮೂಲತ: ಭಟ್ಟರ ಮನೆತನ ಶ್ರೀಧರ ಹೆಗಡೆಯವರ ತಾತ ರಾಮಯ್ಯ ಹೆಗಡೆ ಸಾಗರ ಹತ್ತಿರದ ಗ್ರಾಮದವರು. ಭಟ್ಟರ ಮನೆತನಕ್ಕೆ ಅಳಿಯನಾಗಿ ಬಂದವರು. ಇವರ ಪತ್ನಿ

ಗಣಪಿ ಒಬ್ಬಳೇ ಮಗಳಾಗಿದ್ದರಿಂದ ರಾಮಯ್ಯ ಹೆಗಡೆ ಕೆರೆ-ಹೊಂಡ ಗ್ರಾಮದಲ್ಲಿ ಪತ್ನಿಯ ಮನೆಯಲ್ಲಿಯೇ ಬಾಳಿ ಬದುಕಿದಬೇಕಾಯಿತು. ರಾಮಯ್ಯ ಹೆಗಡೆ ಭಟ್ಟರ ಮನೆತನಕ್ಕೆ ಬಂದದ್ದರಿಂದ ವಾರಸುದಾರರಾಗಿ ಅದೇ ಹೆಸರು ಮುಂದುವರೆದು ಹೆಗಡೆ ಹೆಸರಿನಿಂದ ಆ ಮನೆತನಕ್ಕೆ ಮೂಲವಾದರು.

ರಾಮಯ್ಯ, ಗಣಪಿ ದಂಪತಿಗಳಿಗೆ ಆರು ಜನ ಗಂಡು ಮಕ್ಕಳು, ಮೂರು ಜನ ಹೆಣ್ಣು ಮಕ್ಕಳು, ದೇವರು ಹೆಗಡೆ, ಗಣಪತಿ ಹೆಗಡೆ, ಸುಬ್ರಾಯ ಹೆಗಡೆ, ತಿಮ್ಮಣ್ಣ ಹೆಗಡೆ, ನಾರಾಯಣ ಹೆಗಡೆ ಅನಂತ ಹೆಗಡೆ, ಮೂಕಾಂಬಿಕೆ, ಮಹಾಲಕ್ಷ್ಮೀ ಗಣಪಿ ಹೀಗೆ ಒಟ್ಟಿಗೆ ಒಂಭತ್ತು ಜನ ಮಕ್ಕಳು. ಶ್ರೀಧರ ಹೆಗಡೆಯವರಿಗೆ ನಾಲ್ಕು ಜನ ಸಹೋದರರು ಇಬ್ಬರು ಸಹೋದರಿಯರು, ರಾಮಚಂದ್ರ, ಪ್ರಭಾಕರ, ಮಹಾಬಲೇಶ್ವರ, ದಿವಾಕರ ಸಹೋದರರಾದರೆ ಶರಾವತಿ, ಭಾರತಿ ಸಹೋದರಿಯರು, ಶ್ರೀಧರ ಹೆಗಡೆಯವರ ದೊಡ್ಡಪ್ಪ ಬಹುಬೇಗ ಮನೆಯಿಂದ ಹೊರ ಹೋದ್ದರಿಂದ ಶ್ರೀಧರ ಹೆಗಡೆಯವರ ತಂದೆಯವರೇ ಇಡೀ ಮನೆಯ ಜವಬ್ದಾರಿ ನಿಬಾಯಿಸುತ್ತಿದ್ದರು.

ಇದೊಂದು ಅವಿಭಕ್ತಿ ಕುಟುಂಬ. ಮನೆಯಲ್ಲಿ ಮಕ್ಕಳನ್ನು ಹಿಡಿದು ಮೂವತ್ತು ಜನರು. ಈಗಿನ ಜನರಿಗೆ ಇದು ಆಶ್ಚರ್ಯವಾಗಿ ಕಂಡರೂ ಆ ದಿನಗಳಲ್ಲಿ ಅಂಥ ಕುಟುಂಬಗಳಿದ್ದುದು ನಾವು ಗಮನಿಸಬಹುದು. ಈ ಅವಿಭಕ್ತ ಕುಟುಂಬದಲ್ಲಿ ಎಲ್ಲರೂ ಪರಸ್ಪರ ಪ್ರೀತಿ, ವಿಶ್ವಾಸ, ಗೌರವಗಳೊಂದಿಗೆ ಬದುಕುತ್ತ ಬಂದುದು ಇಂದಿನ ಜನರಿಗೆ ಆಶ್ಚರ್ಯವಾಗಿ ಕಂಡೀತು.

ಗಣಪತಿ – ಗಂಗಮ್ಮ ದಂಪತಿಗಳು ಆಚಾರವಂತರು. ನೀತಿ, ನ್ಯಾಯವಂತರು. ಸಂಪ್ರದಾಯಿದ ಬ್ರಹ್ಮಣರು. ಆಗಿನ ದಿನಮಾನಗಳಂತೆ ಮಡಿವಂತಿಕೆ ಸಹಜವಾಗಿತ್ತು. ಎಲ್ಲರಿಗೂ ಒಳಿತನ್ನೇ ಬಯಸುತ್ತ ಬಂದ ಕುಟುಂಬವಿದು. ಮೋಸ, ವಂಚನೆ, ಎಂದೂ ಸುಳಿಯಲಿಲ್ಲ. ಮತ್ತೊಬ್ಬರದನ್ನು ಎಂದೂ ಬಯಸಿದವರಲ್ಲ ಇನ್ನೂ ತಮ್ಮದನ್ನೇ ಕಳೆದುಕೊಳ್ಳುವ ಗುಣ.

ಗಣಪತಿ ಹೆಗಡೆಯವರುದು ಸರಳ – ಸಾದಾ ಜೀವನ. ಅವರು ಸ್ಕೂಲಿನಲ್ಲಿ ಓದಲೇ ಇಲ್ಲ. ಓದುವುದು ಬರೆಯುವುದು ಗೊತ್ತಿತ್ತು ನಡುಗನ್ನಡದ ಕುಮಾರವ್ಯಾಸ ಭಾರತ ಕಂಠಪಾಠವಾಗಿತ್ತು. ಗಣಪತಿಯವರ ದೌರ್ಬಲ್ಯವೆಂದರೆ ಬಹುಬೇಗ ಸಿಟ್ಟಿಗೆ ಬಂದುಬಿಡುವುದು. ಪತ್ನಿ ಗಂಗಮ್ಮ ಅಷ್ಟೇ ಶಾಂತ ಸ್ವಭಾವದವರು. ವಿರುದ್ಧ ಗುಣಗಳಿದ್ದರೂ ಹೊಂದಾಣಿಕೆ ಇತ್ತು. ಗಂಗಮ್ಮನವರ ತಾಳ್ಮೆಯ

ಗುಣವೇ ಅವರ ಬದುಕಿನ ಯಶಸ್ಸು. ಮನೆಯಲ್ಲಿ ಹಿರಿಯವಳಾಗಿದ್ದರಿಂದ ಏನೇ ಬಂದರೂ ನಿಭಾಯಿಸುತ್ತ ಮನೆ ಮಂದಿಗೆಲ್ಲ ಆದರ್ಶವಾಗಿದ್ದರು. ಗ್ರಾಮೀಣ ಪ್ರದೇಶದಿಂದ ಬಂದ ಗಂಗಮ್ಮ ಬದುಕಿ ಬಾಳಿದ್ದೂ ಗ್ರಾಮೀಣ ಪ್ರದೇಶವೇ ಆಗಿದ್ದರಿಂದ ಗಿಡ ಮೂಲಿಕೆಗಳ ಔಷಧ ಬಲ್ಲವರಾಗಿದ್ದರು. ಅಲ್ಲಿಂದ ಆಸ್ಪತ್ರೆ ಮೂರು ಕಿಲೋಮೀಟರ ದೂರು, ನಡೆದುಕೊಂಡೇ ಜನರು ಹೋಗಬೇಕಿತ್ತು ಹೀಗಾಗಿ ಗಂಗಮ್ಮತಾಯಿಯ ಔಷಧವೇ ರೋಗಿಗಳಿಗೆ ಪ್ರಮುಖವಾಗಿತ್ತು ಆಗ.

## ಹುಟ್ಟು – ಬಾಲ್ಯ – ಶಿಕ್ಷಣ

ಗಣಪತಿ – ಗಂಗಮ್ಮ ದಂಪತಿಗಳ – ಮಗನಾಗಿ ದಿ ೩-೮-೧೯೫೫ ರಂದು ಜನ್ಮ ಪಡೆದ ಶ್ರೀಧರ ಅವರಿಗೆ ಈ ಮೊದಲೇ ಹೇಳಿದಂತೆ ಅವರಿಗೆ ನಾಲ್ಕು ಜನ ಸಹೋದರರು, ಇಬ್ಬರು ಸಹೋದರಿಯರು. ಶ್ರೀಧರ ಅವರ ಚಿಕ್ಕಪ್ಪನವರ ಮಕ್ಕಳು ಸೇರಿ ಹದಿನೆಂಟು ಜನ ಮಕ್ಕಳು ಆ ಮನೆಯಲ್ಲಿ, ಬಹುಶ: ಇಂಥ ಮನೆಯನ್ನು ನೋಡಿಯೇ ನಮ್ಮ ಗರತಿ ಹಾಡಿರಬೇಕು **"ಮಕ್ಕಳಿರಲೆವ್ವ ಮನಿತುಂಬ"** ಆ ಕಾಲನೇ ಅಂಥದ್ದು "ಎಲ್ಲಿ ಮಕ್ಕಳಿರುವರೋ ಅಲ್ಲಿ ಸುವರ್ಣ ಯುಗ" ಏದೆಯಂದು ಹೇಳುತ್ತಿದ್ದರು. ಮಕ್ಕಳೆಂದರೆ ಭೂಮಿಗೆ ಬಂದ ದೇವರೆನ್ನುತ್ತಿದ್ದರು. ಹೆಗಡೆಯವರ ಮನೆ ಆಗ ನಂದನವನ.

ಶ್ರೀಧರ ಆಗ ಎಲ್ಲರಿಗಿಂತ ಚಿಕ್ಕವನೆನ್ನುವದರಿಂದ (ಸಹೋದರ ದಿವಾಕರ ಹತ್ತು ವರ್ಷದ ನಂತರ ಹುಟ್ಟಿದವರು). ಹೀಗಾಗಿ ಎಲ್ಲರ ಪ್ರೀತಿ ತಂದೆ ತಾಯಿಗಿಂತ ಚಿಕ್ಕಪ್ಪ, ಚಿಕ್ಕಮ್ಮನವರ, ಸೋದರಿಯರ ಪ್ರೀತಿ ಹೆಚ್ಚು ಶ್ರೀಧರ ಅವರಿಗನೆ. ಹಾಗಂತಲೇ ಬಾಲದ್ಯಲ್ಲಿ ಹಠ, ಜಿದ್ದು, ಪ್ರಾಥಮಿಕ ಓದು ಅಲ್ಲಿಯೇ ಕೆರೆ ಹೊಂಡ ಗರಾಮದಲ್ಲಿ ಶ್ರೀಧರ ಒಂದನೇ ಕ್ಲಾಸಿನಲ್ಲಿದ್ದಾಗಲೇ ಹಿರಿಯಕ್ಕ ಶರಾವತಿಯ ಮದುವೆಯಾಯಿತು. ಅಕ್ಕನನ್ನು ಬಿಟ್ಟರಲಾರದ ಶ್ರೀಧರನನ್ನು ಸಂತೈಸುವುದು ಎಲ್ಲರಿಗೂ ಕಷ್ಟವಾಯಿತು. ಶ್ರೀಧರ ಈಗಲೂ ಹೇಳುತ್ತಾರೆ ಶರಾವತಿ ನನ್ನಕ್ಕ ಅಲ್ಲ ನಾನು ಪಡೆದ ತಾಯಿ. ತಾಯಿಯಷ್ಟೇ ಅಕ್ಕನ ಮೇಲೆ ಪ್ರೀತಿ. ಅವಳನ್ನು ಬಿಟ್ಟರಲು ಸಾಧ್ಯವೇ ಇಲ್ಲವೆನ್ನುವಷ್ಟು ಹಠಮಾಡಿದಾಗ ಅವಳೊಂದಿಗೆ ಶ್ರೀಧರನನ್ನೂ ಕಳಿಸಿ ಕೆಲವು ದಿವಸಗಳ ನಂತರ ಮರಳಿ ಕರೆತಂದದ್ದೂ ಒಂದು ಸಾಹಸವೇ ಆಗಿತ್ತು.

ಈ ಎಲ್ಲ ಘಟನೆ ನೋಡಿದಾಗ ಸ್ಪಷ್ಟವಾಗುವುದು. ಶರಾವತಿ ತಮ್ಮನನ್ನು ಎಷ್ಟು ಪ್ರೀತಿಸುತ್ತಿದ್ದಳು, ಎಷ್ಟು ಕಾಳಜಿ ಮಾಡುತ್ತಿದ್ದಳೆನ್ನುವುದು. ಮಕ್ಕಳು ಒಮ್ಮೆ ಹಚ್ಚಿಕೊಂಡರಾಯಿತು ಅವು ಆ ಸಂಬಂಧ ಕಳೆದುಕೊಳ್ಳುವುದಾಗಲಿ,

ಮರೆಯುವುದಾಗಲಿ ಸಾಧ್ಯವಿಲ್ಲ. ಶಾರಾವತಿ ಶ್ರೀಧರ ಅವರೊಂದಿಗೆ ಯಾವಾಗಲೂ ಖುಷಿಯೊಂದಿಗಿರುತ್ತಿದ್ದಳು. ಅವನನ್ನೂ ಖುಷಿಯಂದಿರುಸುತ್ತಿದ್ದಳು. ನಾವು ಮಕ್ಕಳನ್ನು ಗೆಲ್ಲುವುದಕ್ಕೆ ಒಂದೇ ಒಂದು ಹಾದಿ ಇದೆ. ನಾವು ಅವರಿಗೆ ಪ್ರೀತಿಯನ್ನು ಕೊಡವುದು. ನಾವು ಅವರಿಗೆ ಏನನ್ನೇ ಕೊಟ್ಟರೂ ಅವರು ಅದನ್ನು ಮೆಚ್ಚುವುದುಲ್ಲ. ಶ್ರೀಧರ ಅವರನ್ನು ಪ್ರೀತಿಯಿಂದ ಕಂಡ ಶರಾವತಿ ಅವನಿಗಿಂತ ಹತ್ತು ವರ್ಷ ದೊಡ್ಡವಳು ಶ್ರೀಧರನಿಗೆ ಅವಳೆಂದರೆ ಅಚ್ಚುಮೆಚ್ಚು, ಅವನ ಮನಸ್ಸನ್ನು ಗೆದ್ದಿದ್ದಳು ಆ ಮುಗ್ಧ ಮನಸ್ಸಿನ ಮೇಲೆ ತನ್ನ ಪ್ರೀತಿಯ ಮುದ್ರೆಯೊತ್ತಿದ್ದಳು. ಶ್ರೀಧರ ಆ ಪ್ರೀತಿ, ಆ ವಾತ್ಸಲ್ಯ ತುಂಬಿಕೊಂಡೇ ಬೆಳೆದರು ಅದುವೇ ಮಾತೃ ವಾತ್ಸಲ್ಯ.

ಶ್ರೀಧರ ಹೆಗಡೆಯವರು ಈಗಲೂ ಆ ದಿನಗಳನ್ನು ನೆನಪಿಸಿಕೊಂಡರೆ ಪುಳಕಿತರಾಗುತ್ತಾರೆ ಶಬ್ಧ ಮುಗ್ಧರಾಗುತ್ತಾರೆ. ಹೃದಯ ತುಂಬಿ ಹೇಳುತ್ತಾರೆ. ನನಗೆ ಇಬ್ಬರು ತಾಯಂದಿರು ಒಬ್ಬ ತಾಯಿ ಜನ್ಮ ಕೊಟ್ಟವಳು ಮತ್ತೊಬ್ಬ ತಾಯಿ ನನ್ನನ್ನು ಸಾಕಿ ಸಲುಹಿ ನನ್ನ ಜೊತೆ ಜೊತೆನೇ ಬೆಳೆದವಳು, ಬೆಳೆಸಿದವಳು. "ನನ್ನಕ್ಕನ ಪ್ರೀತಿಯ ನೆನಪುಗಳು ಎಂದೂ ಮರೆತು ಹೋಗುವುದಿಲ್ಲ. ಆ ನೆನಪುಗಳು ಸದಾ ಹಸಿರಾಗಿರುವುದರ ಜೊತೆ ಆಗಾಗ ಕಾಡುತ್ತಿರುತ್ತವೆ."

ಜೀವನದ ದಾರಿಯಲ್ಲಿ ಕೂಡುವುದು ಅಗಲುವುದು ಪ್ರಕೃತ್ತಿಯ ನಿಯಮ. ಶ್ರೀಧರ ಅವರಿಗೆ ಅಕ್ಕನನ್ನು ಎಷ್ಟು ದಿನ ಮನೆಯಲ್ಲಿ ಇಟ್ಟುಕೊಳ್ಳಲು ಸಾಧ್ಯ ? ಅಕ್ಕ ದೂರಾದರೂ ಅಕ್ಕನ ನಿಷ್ಕಲ್ಮಷ ಪ್ರೀತಿ, ವಾತ್ಸಲ್ಯ, ಅಂತ:ಕರುಣೆ ಇಂದಿಗೂ ಹಾಗೆ ಇವೆ. ಇವೇ ನಿತ್ಯ ಸತ್ಯ ಇವೇ ಬಾಳಿಗೆ ಚೈತನ್ಯ ಇವೇ ಜೀವನನವನ್ನು ಬೆಳೆಸುತ್ತವೆ. ಇವುಗಳಿಂದಲೇ ಜೀವನದ ಬೆಲೆ. ಅಕ್ಕನ ನೆನಪಾದಾಗಲೆಲ್ಲ, ಶ್ರೀಧರ ಅವರ ಮನಸ್ಸು ಅರಳುತ್ತದೆ ಆ ಅರಳಿದ ಮುಖದಲ್ಲಿಂದ ಹೊರಡುವ ಪರಿಮಳ ಯಾವುದರಿಂದ ಸಿಕ್ಕೀತು ಹೇಳಿ ? ಪ್ರೀತಿ, ಅಂತ:ಕರುಣೆ, ಅನುಕಂಪ ಬದುಕಿನಲ್ಲಿ ಬಹು ದೊಡ್ಡ ಆಸ್ತಿ.

ಶ್ರೀಧರ ಹೆಗಡೆ ಅವರ ತಂದೆ ತಾಯಿಗಳ ಬಗ್ಗೆ ಈ ಮೊದಲೇ ಹೇಳಿರುವಂತೆ ಪ್ರಾಮಾಣಿಕರು, ನಿಷ್ಠಾವಂತರು, ಸುಂಸ್ಕೃತರು, ಅಷ್ಟೇ ಕಾಯಕ ಯೋಗಿಗಳು. ಒಂದು ದಿನವೂ ಖಾಲಿ ಕುಳಿತವರಲ್ಲ. ದುಡಿಮೇಯೇ ಅವರ ಉಸಿರಾಗಿತ್ತು. ಸದಾ ಹೊಲದಲ್ಲಿ ಒಂದಿಲ್ಲ ಒಂದು ಕೆಲಸದಲ್ಲಿ ತೊಡಗಿಸಿಕೊಂಡಿರುತ್ತಿದ್ದರು. ಬಸವಣ್ಣನವರ **"ಕಾಯಕವೇ ಕೈಲಾಸ"** ಎನ್ನುವ ಮಾತುಗಳನ್ನೇ ಅಕ್ಷರ ಸಹ ಅರಿತವರು. ದುಡಿಮೆಯಲ್ಲಿಯೇ ಸಂತೋಷ ಕಂಡವರು. ಶ್ರೀಗಣಪತಿ ಹೆಗಡೆ ಹೊಲದಲ್ಲಿ ಮುಂದಾಳತ್ವ ವಹಿಸಿದರೆ ಪತ್ನಿ ಗಂಗಾ ಅವರು ಗೃಹಣಿಯಾಗಿ

ತುಂಬಿದ ಮನೆಯನ್ನು ನಿಭಾಯಿಸಿಕೊಂಡು ಹೋಗುತ್ತಿದ್ದರು ಈ ದಂಪತಿಗಳ ಬದುಕು ಆದರ್ಶವಾಗಿತ್ತು.

ಶ್ರೀಧರ ಅವರ ಬಾಲ್ಯದ ದಿನಗಳಲ್ಲಿ ತಂದೆ ಹೇಳುತ್ತಿದ್ದ ಮಾತುಗಳು ಈಗಲೂ ಅವರ ಮನದಲ್ಲಿ ಅಚ್ಚಳಿಯದೇ ಉಳಿದಿವೆ. ಆಗ ಅವರು ಮಕ್ಕಳಿಗೆ ಹೇಳುತ್ತಿದ್ದುದು "ಯಾವತ್ತು ಸುಳ್ಳು ಹೇಳಬಾರದು ಯಾರಿಗೂ ಮೋಸ ಮಾಡಬಾರದು ಮತ್ತೊಬ್ಬರದನ್ನು ಆಶೆ ಪಡಬಾರದು ಇದ್ದುದರಲ್ಲಿಯೇ ನಮ್ಮ ದುಡಿಮೆಯಿಂದ ಪಡೆದುದರಲ್ಲೇ ತೃಪ್ತಿ ಕಾಣಬೇಕು" ಈ ಎಲ್ಲ ಮಾತುಗಳು ಬಸವಣ್ಣನವರ ವಚನದ ಸಾಲುಗಳನ್ನು ನೆನಪಿಗೆ ತರುತ್ತವೆ.

"ಕಳಬೆಡ, ಕೊಲಬೇಡ ಹುಸಿಯ ನುಡಿಯಲು ಬೇಡ
ಅನ್ಯರಿಗೆ ಅಸಯ್ಯ ಪಡ ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ಕೂಡಲ ಸಂಗಮನೊಲಿಸುವ ಪರಿ"

ಗಣಪತಿ ಹೆಗಡೆಯವರು ಬಸವಣ್ಣನವರ ವಚನ ಸಾಹಿತ್ಯ ಅರಿತಿರಲಿಕ್ಕಿಲ್ಲ ಆದರೆ ಬಸವಣ್ಣನವರ ವಚನದ ಸಾಲುಗಳೇ ಅವರ ಬದುಕಿನಲ್ಲಿ ಅವರಿಗೆ ಗೊತ್ತಿಲ್ಲದಂತೆ ಹಾಸು ಹೊಕ್ಕಿವೆ. ಒಬ್ಬ ಸುಸಂಸ್ಕೃತ ಮನುಷ್ಯನಲ್ಲಿ, ಒಬ್ಬ ಆದರ್ಶ ಮನುಷ್ಯನಲ್ಲಿ, ಇರಬೇಕಾದ ಸಹಜ ಗುಣಗಳಿವು. ಬದುಕಿನ ಸಹಜ ಅಂಶಗಳಿವು, ಗಣಪತಿ ಹೆಗಡೆಯವರು ಹೆಚ್ಚು ಶಿಕ್ಷಣ ಪಡೆದಿರಲ್ಲಿಕ್ಕಿಲ್ಲ, ಪದವಿ ಪ್ರಶಸ್ತಿಗಳಿಸಿರಲಿಕ್ಕಿಲ್ಲ ಇವೆಲ್ಲವುಗಳಿಗಿಂತ ಒಬ್ಬ ಮನುಷ್ಯರಾಗಿದ್ದರೆನ್ನುವುದೇ ದೊಡ್ಡದು. ಮಾನವೀಯ ಬದುಕಿಗಿಂತ ಯಾವ ಶಿಕ್ಷಣವೂ ಇಲ್ಲ. ಮಹಾತ್ಮಾಗಾಂಧೀಜಿ ಒಂದಡೆ ಹೇಳುತ್ತಾರೆ....

"ನೀವು ಪುಸ್ತಕಗಳನ್ನು ಓದಿರಬಹುದು ಆದರೆ ಅವು ಜೀವನದಲ್ಲಿ ನಿಮ್ಮನ್ನು ಬಹುದೂರ ಕರೆದೊಯ್ಯಲಾರವು. ನಿಜವಾದ ಶಿಕ್ಷಣವೆಂದರೆ ನಿಮ್ಮೊಳಗಿನ ಶ್ರೇಷ್ಠತೆಯನ್ನು ಹೊರತರಯವುದೇ ಆಗಿದೆ. ಮಾನಿವೀಗಿಂತ ಮಿಗಿಲಾದ ಪುಸಕ್ತ ಯಾವುದಿದೆ"

ಈ ಮಾತುಗಳನ್ನೆಲ್ಲ ಅವಲೋಕಿಸಿದಾಗ ಬದುಕು, ಮಾನವೀಯ ಬದುಕು ಮುಖ್ಯವಾಗುತ್ತಿದೆ. ಅಂಥ ಬದುಕು, ಅಂಥ ಶಿಕ್ಷಣ ಗಣಪಪತಿ ಹೆಗಡೆಯವರದಾಗಿತ್ತು.

ಗಣಪತಿ ಹೆಗಡೆಯವರು ಮಕ್ಕಳನ್ನು ಪ್ರೀತಿಸಿದಷ್ಟೇ ತಪ್ಪು ಮಾಡಿದಾಗ ದಂಡಿಸುತ್ತಿದ್ದರು. ಆ ಭಯ ವಿರುತ್ತಿದ್ದರಿಂದ ಮಕ್ಕಳು ತಪ್ಪುದಾರಿ ಹಿಡಿಯುತ್ತಿರಲಿಲ್ಲ. ಮಕ್ಕಳು ದೊಡ್ಡವರಾಗಿ ಹೈಸ್ಕೂಲ ಅಭ್ಯಾಸ ಮುಗಿಸಿ ಕಾಲೇಜಿಗೆ ಸೇರಿದರೆ ಮಕ್ಕಳಿಗೆ ದಂಡಿಸುವುದಾಗಲಿ, ಬಿರು ನುಡಿಗಳನ್ನಾಡವುದಾಗಲಿ ಮಾಡುತ್ತಿರಲಿಲ್ಲ ಅಗ ಅವರು ಹೇಳುತ್ತಿದ್ದುದಿಷ್ಟೆ "ನೀವೆಲ್ಲ ದೊಡ್ಡವರಾಗಿದ್ದೀರಿ ನಿಮಗೆ ನಾನು ಹೆಚ್ಚಿಗೇನೂ ಹೇಳುವುದಿಲ್ಲ ನಿಮ್ಮ ಮುಂದಿನ ಬದುಕಿನ ಬಗ್ಗೆ, ಮುಂದಿನ ಗುರಿಯ ದಾರಿಯ ಬಗ್ಗೆ ಚಿಂತಿಸಿ, ಯೋಚಿಸಿ ಮುನ್ನಡೆಯಿರಿ. ನಿಮ್ಮ ನಿಮ್ಮ ಭವಿಷ್ಯ ನಿಮಗೆ ಸರಿದ್ದು. ನನ್ನಿಂದಾದ ಎಲ್ಲವನ್ನೂ ಮಾಡಿದ್ದೇನೆ. ಜೀವನ ರೂಪಿಸಿಕೊಳ್ಳುವುದು ನಿಮಗೆ ಬಿಟ್ಟಿದ್ದು" ಗಣಪತಿ ಹೆಗಡೆಯವರ ಈ ಮಾತು ಕೇಳಿದಾಗ ಕಣ್ಣೆದುರಿಗೆ ಪಕ್ಷಿಗಳ ಚಿತ್ರಣ ಬರುತ್ತದೆ. ಪಕ್ಷಿಗಳು ಮರಿಗಳಿಗೆ ತಂದ ಕಾಳುಗಳನ್ನು ಗುಟಕಿನಿಂದ ತಿನಿಸಿ ದೊಡ್ಡವನ್ನಾಗಿ ಮಾಡುತ್ತವೆ. ನಂತರ ಮರಿಗಳು ನಿಧಾನವಾಗಿ ತಾವೇ ಹಾರುವುದನ್ನು ಕಲಿತು ಹೊರ ಬಿದ್ದು ಕ್ರಮೇಣ ತಮ್ಮ ಆಹಾರವನ್ನು ತಾವೇ ಹುಡಿಕಿಕೊಳ್ಳುತ್ತವೆ.

ಶ್ರೀಧರ ಅವರ ಬಾಲ್ಯದ ದಿನಗಳು ಅವಿಸ್ಮರಣೀಯ ಈಗಲೂ ಅವರಿಗೆ ಊರನ್ನು, ಬಾಲ್ಯದ ದಿನಗಳನ್ನು ಸ್ಮರಿಸಿಕೊಂಡರೆ ಆ ಪ್ರದೇಶದ ಅನೇಕ ಎಳೆಗಳು ಅವರನಿನ್ನೂ ಬೆಸೆದುಕೊಂಡಿವೆ ಎನಿಸುತ್ತಿದೆ. ಆ ಗುಡ್ಡ, ಬೆಟ್ಟ, ಹಳ್ಳ ನೀರಿನ ಝುರಿ ಪಾತಗಳಾಗಿ ಬಾಲ್ಯದ ಬದುಕಿಗೆ ಬೆಳಕಾಗಿವೆ. ಸುಗ್ಗಿಯ ದಿನಗಳಲ್ಲಿ ತೋಟಗಳನ್ನು ಸುತ್ತುತ್ತ ಹಣ್ಣುಗಳನ್ನು ಕದಿಯುತ್ತ ತೋಟದವರಿಂದ ಬೈಸಿಕೊಳ್ಳುತ್ತ ತಂದೆಯವರಿಂದ ಏಟು ತಿನ್ನುತ್ತ ಬೆಳೆದ ಶ್ರೀಧರ ಉಳಿದ ತುಂಟ ಮಕ್ಕಳಿಗೆ ಹೊರತಾಗಿರಲಿಲ್ಲ. ತಮ್ಮದೇ ಒಂದು ಗೆಳೆಯರ ಗುಂಪು. ಅದರ ಮುಂದಾಳತ್ವ. ಯಕ್ಷಗಾನ, ಬಯಲಾಟ ಆಗಾಗ ಬಯಲು ಸೀಮೆಯಿಂದ ಬರುತ್ತಿದ್ದ ನಾಟಕ ತಂಡದ ನಾಟಕಗಳೇ ಇವರಿಗೆ ಮನರಂಜನೆಯಾಗಿ ಖುಷಿ ಕೊಡುತ್ತಿದ್ದವು.

ಶ್ರೀಧರ ಹೆಗಡೆಯವರ ಬಾಲ್ಯದ ದಿನಗಳು ಎಲ್ಲ ಮಕ್ಕಳಂತೆಯೇ ಸಹಜವಾಗಿದ್ದರೂ ಸತ್ಯಾಸತ್ಯತೆಯನ್ನು ಒರೆಗಲ್ಲಿಗೆ ಹಚ್ಚುವ ಗುಣಗಳು ಅವಾಗಲೇ ಬೆಳೆದು ಬಂದಿದ್ದವು. ದೇವರ ಹೆಸರಿನಲ್ಲಿ ನಡೆಯುವ ಶೋಷಣೆ, ಸುಲಿಗೆ ಅವರಿಗೆ ಸಹಿಸಲಾಗುತ್ತಿರಲಿಲ್ಲ. ಮೂಢನಂಬಿಕೆಗಳನ್ನು ವಿರೋಧಿಸುತ್ತಲೇ ಬೆಳೆದರು ಹೀಗಾಗಿ ಊರಲ್ಲಿ ಕೆಲವು ಹಿರಿಯರಿಗೆ ತಲೆ ನೋವಾಗಿದ್ದರು. ಆಸ್ತಿಕರಿಗೆ ವಿರೋಧಿಗಳಾಗಿದ್ದರು. ಅನೇಕ ಜನರು ತಂದೆಗೆ ಬಂದು ದೂರು ಕೊಟ್ಟಿದ್ದುಂಟು.

ಊರಲ್ಲಿ ಏಳನೇ ತರಗತಿಯವರೆಗೆ ಓದಿ ಹೈಸ್ಕೂಲ ಅಭ್ಯಾಸಕ್ಕೆ ತಾಲೂಕಿನ

ಹೆಗ್ಗರಣಿಗೆ ಹೋದದ್ದುಂಟು ಅಲ್ಲಿ ಸಂಬಂಧಿಕರ ಮನೆಯಲ್ಲಿದ್ದು ಓದುತ್ತಿದ್ದರೂ ಶನಿವಾರ – ರವಿವಾರ ಊರಿಗೆ ಬಂದು ತಂದೆಯವರ ಕೆಲಸಗಳಲ್ಲಿ ನೆರವಾಗುತ್ತಿದ್ದ ಶ್ರೀಧರ ಶಾಲೆಯ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಅಲ್ಲಿಯೂ ಗಮನ ಸೆಳೆದವರು. ಭಾಷಣ ಸ್ಪರ್ಧೆಯಲ್ಲಿ ಸದಾ ಮುಂದು. ಪಠ್ಯಕ್ಕಿಂತ ಕಥೆ ಕಾದಂಬರಿ ಓದುವುದೇ ಹೆಚ್ಚಾಗಿತ್ತು ಹೀಗಾಗಿ ಶ್ರೀಧರ ಉತ್ತೀರ್ಣಕ್ಕೆ ಬೇಕಾಗುವಷ್ಟು ಅಂಕಗಳನ್ನು ಪಡೆದು ಪಾಸ ಕ್ಲಾಸನಲ್ಲಿ ಉತ್ತೀರ್ಣ. ಇವರ ಬಂಡಾಯ ಧೋರಣೆ ಕಂಡ ತಂದೆಯವರು "ನಾಲ್ಕು ಅಕ್ಷರ ಕಲಿತ ಕೂಡಲೇ ದೇವರಿಲ್ಲ ಅನ್ನೊ ತೀರ್ಮಾನಕ್ಕ ಬರಬಾರದಪ್ಪ" ಎಂದಾಗ ಶ್ರೀಧರ ಅವರು ಹೇಳಿದ್ದು" ಅಪ್ಪ ನಾನು ದೇವರಿಲ್ಲ ಎಂದು ಹೇಳಿಲ್ಲ ದೇವರ ಹೆಸರಿನಲ್ಲಿ ನಡೆಯೋ ಮೂಢನಂಬಿಕೆಗಳ ವಿರುದ್ಧ ನಾನು ಅಂದಿದ್ದು. ತಂದೆ ಹೆಚ್ಚು ವಾದಿಸ ಹೋಗದೇ ಮೌನಿಯಾಗುತ್ತಿದ್ದರು.

ಉತ್ಸವಗಳಲ್ಲಿ ದೇವರ ಪಲ್ಲಕ್ಕೆ ಹೊತ್ತ ಪೂಜಾರಿಗಳು ನೇರವಾಗಿ ಗೊತ್ತು ಪಡಿಸಿದ ಸ್ಥಳಕ್ಕೆ ಹೋಗದೇ ಈಕಡೆ ಆಕಡೆ ತಿರುಗುತ್ತ ಹೋಗುತ್ತಿದ್ದುದು ನೋಡಿ ಶ್ರೀಧರ ಹೇಳುತ್ತಿದ್ದುದು ಅದು ಪೂಜಾರಿಗಳ, ಪಲ್ಲಕ್ಕಿ ಹೊತ್ತವರ ಆಟವೆಂದು. ದೇವರು, ಧರ್ಮ, ನೀತಿ, ನ್ಯಾಯಗಳ ಬಗ್ಗೆ ಶ್ರೀಧರ ಹೈಸ್ಕೂಲ ವಿದ್ಯಾರ್ಥಿಯಾಗಿದ್ದಾಗಲೇ ತರ್ಕಕ್ಕಿಳಿದವರು ಅನೇಕ ಮುಖವಾಡಿಗಳನ್ನು ಬಯಲಿಗೆಳದು ನಿಜರೂಪ ತೋರಿಸಿದವರು, ಪೂಜಾರಿಗಳು, ಭವಿಷ್ಯವಾದಿಗಳು ಮುಗ್ಧ ಜನರ ಮನಸ್ಸು ಕದಲಿಸಿ ಅವರಿಂದ ಹಣ ಸೆಳೆಯುವುದು ಶ್ರೀಧರ ಅವರಿಗಾಗುತ್ತಿತ್ತು. ಈ ತರುಣ ಚಿಂತಕ ಏನೇ ಹೇಳಿದರೂ ಊರ ಜನರು ಕೇಳುವ ಸ್ಥಿತಿಯಲ್ಲಿರಲಿಲ್ಲ. ಯಾರೂ ಅವರ ಮಾತಿಗೆ ಬೆಲೆ ಕೊಡುತ್ತಿರಲಿಲ್ಲ. ಆದರೂ ಶ್ರೀಧರ ತನಗನಿಸಿದ್ದನ್ನು ಹೇಳದೇ ಇರುತ್ತಿರಲಿಲ್ಲ.

ಒಮ್ಮೆ ಊರ ಹೊರಗಿನ ದೇವಾಲಯದಲ್ಲೊಂದು ಪವಾಡ ಜರುಗಿತು. ದೇವಾಲಯದ ಹಳೆಯದಾದ ಕಂಬದಲ್ಲಿ ನೀರು ಒಸಿಯುತ್ತಿತ್ತು. ಜನರು ನೋಡಿ ಇದೊಂದು ಪವಾಡವೆಂದರು. ಗಂಗ್ಗಮ್ಮನ ಲೀಲೆಯೆಂದರು ಜನ ಮರುಳೋ ಜಾತ್ರೆ ಮರುಳೋ ಎನ್ನುವಂತೆ ಜನರ ಗುಂಪು ಗುಂಪು ದೇವಾಲಯದತ್ತ ಧಾವಿಸಹತ್ತಿತು. ಭಕ್ತಿ, ಕಾಣಿಕೆ ಸಲ್ಲಿಸುತ್ತ ಆ ಕಂಬಕ್ಕೆ ಪೂಜೆ ಪ್ರಾರಂಭಗೊಂಡು ಭಕ್ತರ ಸಂಖ್ಯೆ ಹೆಚ್ಚಿತು ಶ್ರೀಧರ ಅದರ ಸತ್ಯತೆ ಅರಿಯಲು ಒಮ್ಮೆ ರಾತ್ರಿ ಗುಡಿಯ ಹತ್ತಿರದಲ್ಲಿ ಯಾರಿಗೂ ಕಾಣದಂತೆ ಹೋಗಿ ಕುಳಿತರು ಮಧ್ಯ ರಾತ್ರಿ ಗುಡಿಯ ಮೇಲೆ ಏರಲು ಪೂಜಾರಿ ನಿಚ್ಚಣಿಕೆ ತಂದಿಟ್ಟ. ಒಂದು ತುಂಬಿದ ಕೊಡ ಹೊತ್ತುಕೊಂಡು ಮಾಳಿಗೆಏರಿ ಹೋಗಿ ಆ ಕಂಬದ ಮೇಲಿನೇ ನೀರು

ಸುರಿದು ಬಂದ ಅದೇ ನೀರು ಇಡೀ ದಿನ ಕಂದಬಲ್ಲಿ ದ್ರವಿಸುತ್ತಿತ್ತು. ಜನರಿಗೆಲ್ಲ ಇದನ್ನು ತಿಳಿಸಿ ಪೂಜಾರಿಯ ಪವಾಡ ಬಯಲು ಮಾಡಿದ.

ಇಂಥದ್ದೇ ಇನ್ನೊಂದು ಘಟನೆ. ಇದ್ದಕ್ಕಿದಂತೆ ನಾಲ್ಕು ಜನರು ದೇವರ ಪಲ್ಲಕ್ಕಿ ಹೊತ್ತು ಕೊಂಡು ಬಂದು ಗ್ರಾಮ ಪ್ರವೇಶಿಸಿದರು. ಕೊಳ್ಳೆಗಾಲದಿಂದ ಬಂದ ಈ ಜನರು ದೇವಿಯ ಪವಾಡಗಳನ್ನು ಹೇಳುತ್ತ ಊರಲ್ಲಿ ಬಸ್ ನಿಲ್ದಾಣದ ಹತ್ತಿರ ಪಲ್ಲಕ್ಕಿ ಇಳಿಸಿ ಜನರ ಕಷ್ಟ ನಷ್ಟಗಳಿಗೆ ಪರಿಹಾರ ಹೇಳುತ್ತ, ಜನರನ್ನೆಲ್ಲ ಮರುಳುಗೊಳಿಸಿ ಹಣ ಸುಲಿಯ ಹತ್ತಿರದರು. ಭಕ್ತರು ಪ್ರತಿದಿನ ನೂರಾರು ಕಾಯಿಗಳನ್ನು ಒಡೆಯ ಹತ್ತಿದರು. ಪೂಜೆ ಪುನಸ್ಕಾರ ಮಂತ್ರ – ತಂತ್ರ ಎಲ್ಲವೂ ಸಾಗಿದವು. ಈ ದೇವರನ್ನು ಹೊತ್ತು ತಂದವರನ್ನು ನಂಬಬೇಡಿ ಎಂದು ಶ್ರೀಧರ ಹೇಳಿದಾಗ ಆ ಹುಡುಗನ ಮಾತಿಗೆ ಲಕ್ಷಗೊಡಬೇಡಿ ಅವನೊಬ್ಬ ನಾಸ್ತಿಕ ಭಕ್ತಿ ಭಾವ ಹಾಳು ಮಾಡುತ್ತಾನೆಂದು ಆ ನಾಲ್ಕೂ ಜನರು ಹೇಳಿದಾಗ ಶ್ರೀಧರನ ಮಾತಿಗೆ ಯಾರೂ ಬೆಲೆ ಕೊಡಲಿಲ್ಲಿ.

ಹೀಗೆ ದಿನಗಳು, ತಿಂಗಳುಗಳು ಕಳೆದಂತೆ ಆ ದೇವಿಯ ಪಲ್ಲಕ್ಕಿ ಹೊತ್ತು ಆ ನಾಲ್ಕು ಜನರು ಶಿರಸಿಯತ್ತ ಪಯಣ ಬೆಳೆಸಿದರು. ಅಲ್ಲಿಯೂ ಅದೇ ರೀತಿ ಜನರಿಗೆ ಹುಚ್ಚು ಹಿಡಿಸಿದರು. ಭಕ್ತರ ಸಂಖ್ಯೆ ಹೆಚ್ಚಿತು. ಒಂದು ದಿನ ಇದ್ದಕ್ಕಿದಂತೆ ಪೊಲೀಸ ಜೀಪ ಬಂದು ಇವರ ಮುಂದೆ ನಿಂತಾಗ ಜನರು ಗಬೀರಿಗೊಂಡರು ಆ ನಾಲ್ಕು ಜನರನ್ನು ಪೊಲೀಸರು ಬಂಧಿಸಿದರು. ಜನರಿಗಿನ್ನೂ ಆಶ್ಚರ್ಯ. ವಿಷಯ ಸ್ಪಷ್ಟವಾದಗ ಜನರು ದಿಗ್‌ಭ್ರಮೆ ಗೊಂಡರು ಆ ನಾಲ್ಕೂ ಜನರು ಕೊಲೆ ಕೇಸಿನಲ್ಲಿ ತಲೆ ಮರಿಸಿಕೊಂಡು ಬಂದವರಿದ್ದರು. ಮಾರನೆಯದಿನ ಪೇಪರಿನಲ್ಲಿ ಅವರ ಬಂಧನ ವಿಷಯ ಬಂದಾಗ ಶ್ರೀಧರ ಪೇಪರ ಹಿಡಿದು ಊರಿನ ಜನರಿಗೆಲ್ಲರಿಗೂ ತೋರಿಸಿದಾಗ ಹೀಗೂ ಇರುತ್ತಾರೆಯೇ ಎಂದರೇ ವಿನಃ ಶ್ರೀಧರನ್ನು ಪ್ರಸಂಶಿಸಲಿಲ್ಲ.

ಶ್ರೀಧರ ಇನ್ನೂ 2ನೇ ತರಗತಿ ಓದುತ್ತಿರುವಾಗಲೇ ತುಂಬಿದ ಮನೆ ಭಾಗವಾಯಿತು. ಚಿಕ್ಕಪ್ಪಂದಿರೆಲ್ಲ, ಬೇರಾದರು. ತುಂಬಿದ ಮನೆಯಲ್ಲಿ ಭಿನ್ನಭಿಪ್ರಾಯ, ಸಣ್ಣ ಪುಟ್ಟ ಸಂಘರ್ಷಗಳು ಸಹಜವೆಂದು ಎಷ್ಟು ಹೇಳಿದರೂ ಗಣಪತಿಯವರ ಮಾತುಗಳನ್ನು ಸಹೋದರು ಗಮನಿಸಿದೇ ಹೊರಬಂದರು. ತುಂಬಿದ ಮನೆ ಬಡವಾಯಿತು. ಚಿಕ್ಕಪ್ಪಂದಿರು, ಚಿಕ್ಕಮ್ಮಗಳು, ಸಹೋದರು, ಸಹೋದರಿಯಿರು ಹೊರ ಹೋದಾಗ ಶ್ರೀಧರ ಅವರಿಗೆ ಮನಸ್ಸು ಭಾರವಾಯಿತು. ಎಂಥ ಹೊಂದಾಣಿಕೆ ಇದ್ದರೂ ಇಂಥದೊಂದು ದಿನ ಬರುವುದೇ ಎಂದು ಗಣಪತಿ ಶ್ರೀಧರನನ್ನು ಸಮಾಧಾನ ಪಡಿಸಿದರು.

ಶ್ರೀಗಣಪತಿಯವರು ದೊಡ್ಡವರಾಗಿದ್ದರಿಂದ ತಮ್ಮಂದಿರೆಲ್ಲ ಆರಿಸಿ ಬಿಟ್ಟುದನ್ನೇ ಪಡೆಯಬೇಕಾಯಿತು. ಬೆಳೆಯಲಾರದ (ಫಲವತ್ತಾಗಿರದ) ಎರಡು ಎಕರೆ ಭೂಮಿ, ಮುರುಕು ಮನೆ ಇವರದಾಯಿತು. ಗಣಪತಿಯವರ ಕುಟುಂಬವೂ ದೊಡ್ಡದಾಗಿನೇ ಇತ್ತು ಮಕ್ಕಳೆಲ್ಲರೂ ಓದುವವರೇ ಆಗಿದ್ದರಿಂದ ಖರ್ಚು ಹೆಚ್ಚುತ್ತಲೇ ಸಾಗಿತ್ತು. ಶ್ರೀಧರ ತಂದೆಯವರ ಕೃಷಿಯಲ್ಲಿ ಬಿಡುವಿನ ದಿನಗಳಲ್ಲಿ ನೆರವಾಗುತ್ತ ಬಂದರು. ಓದು ಕುಂಟುತ್ತಲೇ ಸಾಗಿತು ಮೂವರು ಸಹೋದರರು ಕಾಲೇಜು ವಿದ್ಯಾಭ್ಯಾಸದಲ್ಲಿ ತೊಡಗಿದ್ದರು. ಒಬ್ಬ ತಮ್ಮ ಪ್ರಾಥಮಿಕದಲ್ಲಿ ಓದುತ್ತಿದ್ದ.

ಶ್ರೀಧರ ಎಸ್.ಎಸ್.ಎಲ್.ಸಿ.ಗೆ ಬಂದಾಗ ಸಮಸ್ಯೆಗಳು ಉಲ್ಬಣಿಸುತ್ತಲೇ ಸಾಗಿದವು. ಶ್ರೀಧರ ಅವರು ಪಠ್ಯಕ್ಕಿಂತ ಪಠ್ಯೇತರ ಚಟವಟಿಕೆಗಳೇ ಹೆಚ್ಚು. ಪಠ್ಯಪುಸಕ್ತಗಳಿಗಿಂತ ಕಥೆ, ಕಾದಂಬರಿ ಓದೇ ಬಹಳವಾಗಿತ್ತು. ಈ ಎಲ್ಲಾ ಕಾರಣಗಳಿಂದ ಎಸ್.ಎಸ್.ಎಲ್.ಸಿ.ಯಲ್ಲಿ ಅನುತ್ತೀರ್ಣರಾದಾಗ ಎಲ್ಲರಿಗೂ ಬೇಜಾರು ಶಾಲೆ ಬಿಡಿಸಿ ಕೃಷಿಯಲ್ಲಿ ತೊಡಗಿಸಬೇಕೆನ್ನುವ ಮಾತುಗಳೂ ಕೇಳಿಬಂದವು ಶ್ರೀಧರ ಮತ್ತೆ ಕಷ್ಟ ಪಟ್ಟು ಓದಿ ಮಾರನೆಯ ವರ್ಷ ಎಸ್.ಎಸ್.ಎಲ್.ಸಿ ಮುಗಿಸಿದರು ಕಾಲೇಜು ಕಟ್ಟೆ ಹತ್ತುವ ಕನಸು ಕಂಡರು. ಅಷ್ಟೊತ್ತಿಗಾಗಲೇ ಹಿರಿಯಣ್ಣ ಎಂ.ಎ ಪದವಿ ಮುಗಿಸಿ ಗೋಕರ್ಣ ಕಾಲೇಜಯೊಂದರಲ್ಲಿ ಉಪನ್ಯಾಸಕ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದರು. ಅಣ್ಣ ಓದಿನಲ್ಲಿ ಸಹಕರಿಸಬಹುದೆಂದು ಲೆಕ್ಕ ಹಾಕಿದ ಶ್ರೀಧರ ಅವರ ಲೆಕ್ಕ ತಪ್ಪಿತು. "ಕಾಲೇಜಿಗೆ ಹೋಗಿ ಏನ ಮಾಡ್ತಿ ಅಂಕುಗಳು ಕಡಿಮೆ ಬಂದಿವೆ ಪ್ರವೇಶ ಸಿಗುವುದಿಲ್ಲ. ಅಪ್ಪನ ಜೊತೆ ಕೃಷಿಯಲ್ಲಿ ನೆರವಾಗು" ಈ ಮಾತು ಶ್ರೀಧರ ಅವರಿಗೆ ಘಾಸಿಗೊಳಿಸಿತು ಆಶೆ ಕಮರಿ ಕತ್ತಲಾವರಿಸಿತು.

ಶ್ರೀಧರ ಆ ರಾತ್ರಿ ಗಂಭೀರವಾಗಿ ಯೋಚಿಸಿ ತನ್ನ ಕಾಲ ಮೇಲೆ ತಾನು ನಿಂತುಕೊಳ್ಳಬೇಕು. ತಾನು ಯಾರಿಗೂ ಭಾರವಾಗಬಾರದು ಈ ವಿಶಾಲ ಪ್ರಪಂಚದಲ್ಲಿ ಬದುಕಲಿಕ್ಕೆ ದಾರಿ ಹಲವಾರು ಊರು ಬಿಡಬೇಕು ಹಾಗೆ ಯೋಚಿಸಿದಾಗಲೆಲ್ಲ ತಾಯಿ ನೆನಪಾಗುತ್ತಿದ್ದಳು? ಶ್ರೀಧರ ಅವರ ಬಲವಾದ ನಿರ್ಧಾರ ಎಲ್ಲವನ್ನೂ ಕಳಚಿಕೊಂಡಿತು. ಒಂದು ರಾತ್ರಿ ಹೊರ ಬೀಳುವಂತೆ ಮಾಡಿತು. ಕಾಲೇಜ ಶುಲ್ಕವೆಂದು ತಂದೆಯವರು ಕೊಟ್ಟಿದ್ದ ನೂರಾ ಮೂವತ್ತಾರು ರೂಪಾಯಿಗಳನ್ನು ತೆಗೆದುಕೊಂಡು ತಂದೆಗೆ ಪತ್ರ ಬರೆದಿಟ್ಟು ಶ್ರೀಧರ ಬದುಕುವದಾರಿ ಹುಡಿಕೊಂಡು ಹೊರಬಿದ್ದರು.

**ಪೂಜ್ಯ ತಂದೆಯವರಿಗೆ,**

ಅನಂತ ಪ್ರಣಾಮಗಳು.

ಅಪ್ಪಾ ನಾನು ಮನೆ ಬಿಟ್ಟು ಹೊರಟಿದ್ದೇನೆ. ಹೇಳದೇ ಹೊರಟಿದ್ದಕ್ಕೆ ಬೇಜಾರು ಪಟ್ಟುಕೊಳ್ಳಬೇಡಿ. ಇದುವರೆಗೂ ನನ್ನನ್ನು ಬೆಳೆಸಿ ಓದಿಸಿದ್ದೀರಾ ಇನ್ನು ನಿಮಗೆ ಭಾರವಾಗುವುದು ಬೇಡ ನನ್ನ ಜೀವನವನ್ನು ನಾನು ರೂಪಿಸಿಕೊಳ್ಳಲು ಹೊರ ನಡೆದಿದ್ದೇನೆ ಎಲ್ಲಿಗೆ ಹೊರಟಿದ್ದೇನೆಂದು ನನಗೂ ಗೊತ್ತಿಲ್ಲ. ಆದರೆ ನಾನು ಎಲ್ಲಿಯೇ ಇರಲಿ, ಏನೇ ಕೆಲಸ ಮಾಡಲಿ ಪ್ರಾಮಾಣಿಕವಾಗಿ, ನಿಷ್ಠೆಯಿಂದ ಮಾಡಿ ಬದುಕುತ್ತೇನೆ. ನಿನ್ನ ಹೆಸರಿಗೆ ಕಲಂಕ ತರುವ ಕೆಲಸ ಎಂದೂ ಮಾಡುವದಿಲ್ಲ.

ನೀವು ಕಾಜೇಜು ಶುಲ್ಕವೆಂದು ಕೊಟ್ಟಿದ್ದ ನೂರಾ ಮೂವತ್ತಾರು ರೂಪಾಯಿಗಳನ್ನು ಬಿಟ್ಟು ನಾನೇನೂ ಮನೆಯಿಂದ ತೆಗದುಕೊಂಡು ಹೊರಟಿಲ್ಲ. ಅದೃಷ್ಟ ಕರೆದಿಲ್ಲಗೆ ಹೋಗುತ್ತೇನೆ. ಕಾಲ ಎಲ್ಲವನ್ನೂ ನಿರ್ಧರಿಸುತ್ತದೆ. ಒಳ್ಳೆಯ ಕೆಲಸ ಸಿಕ್ಕು ಉತ್ತಮ ಬದುಕು ಪಡೆದಾಗ ನಾ ನಿಮ್ಮನ್ನು ಕಾಣಲು ಬರುತ್ತೇನೆ.

ಅಪ್ಪ ಅಮ್ಮನಿಗೆ ನೀವೇ ಸಮಾಧಾನ ಪಡಿಸಬೇಕು. ಆಕೆಯ ಸಂಕಟ ನಾನರ್ಥ ಮಾಡಿಕೊಳ್ಳಬಲ್ಲೆ ಹಾಗಂತ ನಾನು ನನ್ನ ನಿರ್ಧಾರ ಬದಲಿಸಲಾರೆ. ಆಕೆಗೆ ಸಂತೈಸುವ, ಧೈರ್ಯ ಹೇಳುವ ಭಾರ ನಿಮ್ಮದು ನಾನೊಂದು ಸ್ಥಿತಿಗೆ ಬರುವವರೆಗೂ ಮನೆಗೆ ಬರಲಾರೆ ನೀವಾರೂ ಬೇಜಾರು ಪಟ್ಟುಕೊಳ್ಳಬೇಡಿ ನಿಮ್ಮ ಶಿರ್ವಾದ ಸದಾ ನನ್ನ ಮೇಲಿರಲಿ

ಇಂತಿ ನಿಮ್ಮ ಚಿ॥
ಶ್ರೀಧರ

**ಅನ್ವೇಷಣೆಯತ್ತ:**

ಪತ್ರ ಬರೆದು ಪೋಷ್ಟ ಮಾಡಿ ಅಕ್ಟೋಬರ ೧೯೭೦ಳ ರಲ್ಲಿ ಹೊರಬಿದ್ದ ಶ್ರೀಧರ ಹೆಗಡೆಯವರು ಮನೆಯ ಹಾಗು ಪ್ರಕೃತಿಯೊಂದಿಗಿನ ಆತ್ಮೀಯ ಸಂಬಂಧ ಕಳಚಿಕೊಂಡರು. ಅವರಿಗೆ ಹೊಳೆದಿದ್ದು ಸೈನ್ಯ ಸೇರಬೇಕೆಂದು ಬೆಳಗಾವಿಯತ್ತ ಪಯಣ. ಬೆಳಗಾವಿಯ ಹಿಂಡಲಗಾದಲ್ಲಿ ವಾರಕ್ಕೆ ಮೂರುದಿನ ಸೈನ್ಯ ಭರ್ತಿಗಾಗಿ ಬಂದವರ ಪರೀಕ್ಷೆ ನಡೆಯುತ್ತಿದ್ದುದು ಗೊತ್ತಿದ್ದರಿಂದ ಅಲ್ಲಗನೇ ದಾರಿ ಕ್ರಮಿಸಿತು. ಬರುವಾಗ ಎರಡು ಜೊತೆ ಬಟ್ಟೆ ಹಾಸಲೊಂದು ಹೊದಿಯಲೊಂದು ಬಿಟ್ಟರೆ ಬ್ಯಾಗಿನಲ್ಲಿ ಮತ್ತೇನೂ ಇರಲಿಲ್ಲ. ಬೆಳಗಾವಿಗೆ ಬಂದಾಗ ನಿರಾಶೆಕಾದಿತ್ತು. ಸೈನ್ಯ ಭರ್ತಿಯ ಕೆಲಸ ಒಂದು ತಿಂಗಳು ಸ್ಥಗಿತಿಗೊಳಿಸಲಾಗಿತ್ತು. ಮುಂದೆಲ್ಲಿಗೆ ಹೋಗಬೇಕೆಂಬುದೇ ತಿಳಿಯದಾಗ ಕೈಯಲ್ಲಿದ್ದ ಕಾಸು ಖರ್ಚುಗುತ್ತಲೇ ಸಾಗಿತ್ತು. ಹಣ ಮುಗಿಯುವುದರೊಳಗೆ ಎಲ್ಲಿಯಾದರೂ ಒಂದು ಕೆಲಸ ಹುಡಿಕಿಕೊಳ್ಳಬೇಕೆಂದು ನಿರ್ಧರಿಸಿ ಅಲ್ಲಲ್ಲಿ ಕೆಲಸ ಕೇಳಿಯೂ ಆಯಿತು ಎಲ್ಲಿಯೂ ಕೆಲಸ ಸಿಗದಿದ್ದಾಗ ಇದ್ದಕ್ಕಿದ್ದಂತೆ ಗದುಗಿನತ್ತ ಪಯಣ.

ಗದಗ ನಾಟಕದ ತವರೂರು ಆಗ ಎರಡು ನಾಟಕ ಕಂಪನಿಗಳು ವೈಭದಲ್ಲಿ ಪ್ರದರ್ಶನ ನೀಡುತ್ತಿದ್ದವು ಒಂದು ಸೂಡಿ ಶೇಖಿರಯ್ಯನವರ **'ಭಾರತೀಯ ನಾಟಕ ಸಂಘ'** ಕಂಪನಿ ಮತ್ತೊಂದು ಸುಳ್ಳ ದೇಸಾಯಿ ಅವರ **'ಶ್ರೀಶೈಲ ಮಲ್ಲಿಕಾರ್ಜುನ ನಾಟಕ ಸಂಘ'** ಕಂಪನಿ ನಾಟಕ ನೋಡುವ ಆತುರತೆ ಹೆಚ್ಚಾದಾಗ ತಿಂಡಿ ತಿಂದು ಚಹಕುಡಿದು ನಾಟಕದ ಕೊನೆಯ ದರ್ಜೆಯ ಟಿಕೆಟ್ ಪಡೆದು ಒಳಹೋಗಿ ಕುಳಿತು ನಾಟಕ ನೋಡುವಾಗ ಅಚ್ಚರಿ ಕಾದಿತ್ತು. "ಬದುಕು ಬಂಗಾರವಾಯ್ತು" ನಾಟಕದ ನಾಯಕ ಪಾತ್ರಧಾರಿ ಶ್ರೀಪತಿ ಹೆಗಡೆ ದೂರದ ಸಂಬಂಧಕ. ನಾಟಕ ಬಿಟ್ಟಾಗ ನೇರವಾಗಿ ಹೋಗಿ ಭೇಟಿಯಾಗಿ ಎಲ್ಲಾ ವಿಷಯ ತಿಳಿಸಿ ತಮಗಲ್ಲೊಂದು ಕೆಲಸ ಕೊಡಿಸಲೇಬೇಕೆಂದು ಕೇಳಿದರು.

ಶ್ರೀಪತಿ ಹೆಗಡೆ ಶ್ರೀಧರ ಹೆಗಡೆಯವರ ಎಲ್ಲಾ ವಿಷಯ ತಿಳಿದಾಗ "ನೀನು ಮಾಡಿದ್ದು ಸರಿಯಲ್ಲ ಏನೇ ಆಗಲಿ ಮರಳಿ ಊರಿಗೆ ಹೋಗು ತಂದೆ ತಾಯಿಗಳ ಮಧ್ಯದಲ್ಲಿದ್ದೇ ಏನಾದರೂ ಮಾಡು. ಈ ವಯಸ್ಸಿನಲ್ಲಿ ನಿನಗೆಂಥ ಕೆಲಸ ಕೊಡಿಸಬೇಕು ಯಾರು ಕೆಲಸ ಕೊಡುತಾರೆ ಊರಿಗೆ ಹೋಗುವುದು ಉತ್ತಮ" ಶ್ರೀಪತಿ ಹೆಗಡೆಯವರ ಮಾತುಗಳಲ್ಲಿ ಒಳಿತಿದ್ದರೂ ಮರಳಿ ಹೋಗುವುದು ಶ್ರೀಧರ ಅವರಿಗೆ ಆಗದ ಮಾತು. ಒಂದು ದೃಢ ನಿರ್ಧಾರ ಮಾಡಿಕೊಂಡೇ ಮನೆ ಬಿಟ್ಟಾಗ ಮತ್ತೆ ಮನೆಗೆ ಹೋಗುವುದು ಸಾಧ್ಯವಿಲ್ಲವೆಂದಾಗ ಶ್ರೀಪತಿ

ಹೆಗಡೆ ಸಧ್ಯ ನನ್ನ ರೂಮಿನಲ್ಲಿರು ನೋಡೋಣವೆಂದಾಗ ಶ್ರೀಧರ ಅವರಿಗೆ ಸಮಾಧಾನ ಏನೋ ಸಧ್ಯ ನೆಲೆಸಿಕ್ಕಂತಾಯಿತೆಂದು ಖುಷಿ.

ಶ್ರೀಧರ ಹೆಗಡೆ ತಮ್ಮಲ್ಲಿದ್ದ ಎಂಭತ್ತು ರೂ.ಗಳನ್ನು ಭದ್ರವಾಗಿಟ್ಟುಕೊಳ್ಳಲು ಶ್ರೀಪತಿಯ ಕೈಯಲ್ಲಿ ಕೊಟ್ಟರು. ಶ್ರೀಪತಿ ಎರಡು ದಿನಗಳಲ್ಲಿ ಇಸ್ಪೇಟ ಆಡಿ ಕಳೆದಿದ್ದು ಶ್ರೀಧರ ಅವರಿಗೂ ಗೊತ್ತಾಯಿತು. ಶ್ರೀಪತಿ ಹೆಗಡೆ ಅವರ ರೂಮಿನಲ್ಲಿದ್ದು ಬೋರ್ಡಿಂಗಿನಲ್ಲಿ ಉಂಡು ಸೈಡವಿಂಗಿನಲ್ಲಿ ಕುಳಿತು ನಾಟಕ ನೋಡುವುದೊಂದೇ ಕೆಲಸವಾಯಿತು. ಶ್ರೀಧರ ನಾಟಕ ಗಂಭೀರವಾಗಿ ನೋಡುತ್ತ ಮಾತುಗಳನ್ನು ಗ್ರಹಿಸುತ್ತಿದ್ದರು ಮನಸ್ಸು ಮಾತುಗಳನ್ನು ಗ್ರಹಿಸಿದರೆ ಕಣ್ಣಗಳು ಅಭಿನಯವನ್ನು ತದೇಕಚಿತ್ತದಿಂದ ನೋಡುತ್ತಿದ್ದವು ಖಾಲಿ ಇದ್ದ ಸ್ವಚ್ಛ ಮನಸ್ಸು. ಪಾತ್ರಗಳ ಮಾತುಗಳನ್ನು ತುಂಬಿಕೊಂಡಿತು. ಇಡೀ ನಾಟಕದ ಎಲ್ಲಾ ಪಾತ್ರಧಾರಿಗಳ ಮಾತುಗಳು ಶ್ರೀಧರ ಅವರಿಗೆ ಕಂಠ ಪಾಠವಾದವು.

ಶ್ರೀಧರ ಅವರನ್ನು ಗಮನಿಸುತ್ತಿದ್ದ ಕಂಪನಿ ಮಾಲಿಕರು ಒಂದು ದಿನ ಶ್ರೀಪತಿಯನ್ನು ಕೇಳಿದರು ಯಾರೀ ಹುಡುಗ? ಶ್ರೀಪತಿ ಹೆಗಡೆ ಎಲ್ಲಾ ವಿಷಯ ತಿಳಿಸಿದರು. ಆಗ ಮಾಲೀಕರು ಶ್ರೀಧರನನ್ನು ಕುರಿತು ಏನ್ ಮಾಡಬೇಕಾಂತ ಮಾಡಿಯಾ? ಎಂದು ಪ್ರಶ್ನಿಸಿದಾಗ ಶ್ರೀಧರ ಹೇಳಿದ್ದು "ಪಾತ್ರ ಮಾಡಬೇಕೆನ್ನುವಾಶೆ" "ಈಗ ನಾಲ್ಕಾರು ದಿನಗಳಿಂದ ನಾಟಕ ನೋಡಿದ್ದಿಯಲ್ಲಾ ಯಾವುದಾದರೂ ಪಾತ್ರದ ಒಂದರೆಡು ಮಾತು ಹೇಳು" ಎಂದಾಗ ಶ್ರೀಧರ ಇಡೀ ನಾಟಕವನ್ನೇ ಒಪ್ಪಿಸಿದಾಗ ಶೇಖರಯ್ಯ (ಮಾಲಿಕರಿಗೆ) ಆಶ್ಚರ್ಯ ಅಷ್ಟೇ ಸಂತಸವೆನಿಸಿತವರಿಗೆ ಆಗ ಅವರು ಶ್ರೀಪತಿಗೆ ಹೇಳಿದ್ದು "ನೀವು ನಿಮ್ಮ ಪಾತ್ರದ ಮಾತುಗಳನ್ನು ಬಾಯಿಪಾಠ ಮಾಡಿ ಒಪ್ಪಿಸಲು ಹದಿನೈದು ಇಪ್ಪತ್ತು ದಿನಗಳನ್ನು ತೆಗೆದುಕೊಳ್ಳುತ್ತೀರಿ. ಈ ಹುಡುಗ ಒಂದು ವಾರದಲ್ಲಿ ನಾಟಕವನ್ನೇ ಬಾಯಪಾಠ ಮಾಡಿದ್ದಾನೆ." ಅಂದಾಗ ಶ್ರೀಪತಿಯವರ ಉತ್ತರ ಮೌನವಾಗಿತ್ತು.

ಮಾಲೀಕರು ಶ್ರೀಧರ ಅವರನ್ನು ಕುರಿತು "ಈ ನಾಟಕದಲ್ಲಿ ಹೂ ಮಾರುವ ಹುಡುಗನ ಒಂದು ಚಿಕ್ಕ ಪಾತ್ರವಿದೆ ಮಾಡುತ್ತಿಯಾ" ಅಂದಾಗ ಶ್ರೀಧರ ಹೆಗಡೆ ಖುಷಿಯಲ್ಲಿ ಒಪ್ಪಿಕೊಂಡರು. ಶ್ರೀಪತಿ ಅಭಿನಯ ಹೇಳಿಕೊಟ್ಟರು. ರಂಗಭೂಮಿಗೆ ಹೂ ಮಾರುವ ಹುಡುಗನ ಪಾತ್ರದಿಂದ ಪ್ರವೇಶ ಪಡೆದ ಹೆಗಡೆ ಅವರಿಗೆ ದಿನಾಂಕ ನೆನಪಿರಲಿಕ್ಕಿಲ್ಲವಾಗಿದ್ದರೂ ನವೆಂಬರ ೧೯೭೪ ರಲ್ಲಿ ಎನ್ನಬಹುದು. ೧೫-೨೦ ದಿನಗಳ ಅಭಿನಯದಲ್ಲಿ ರಂಗಭೂಮಿಯನ್ನು ನಟನೆಯನ್ನು, ಪಾತ್ರಗಳನ್ನು ತಿಳಿದುಕೊಳ್ಳುವಲ್ಲಿ ಈ ೧೫-೧೬ ರ ತರುಣ ಪ್ರಯತ್ನಿಸಿದ್ದು ಸಣ್ಣ

ಮಾತಲ್ಲ. ಪ್ರಾರಂಭದ ಚಿಕ್ಕ ಪಾತ್ರದಿಂದಲೇ ಮಾಲಿಕರಿಂದ, ಪ್ರೇಕ್ಷಕರಿಂದ ಸೈ ಎನಿಸಿಕೊಂಡಿದ್ದು ಶ್ರೇಷ್ಠ ನಟನಾಗುವ ಮುನ್ಸೂಚನೆಯಾಗಿತ್ತೆನ್ನಬಹುದು. ಆ ಪ್ರಯತ್ನ, ಆ ಪರಿಶ್ರಮ ಇಂದಿನ ಯಶಸ್ವಿ ಬದುಕಾಗಿದೆ ಎನ್ನುವುದಲ್ಲಿ ಎರಡು ಮಾತಿಲ್ಲ.

ಶ್ರೀಧರ ಹೆಗಡೆ ಅವರಿಗೆ ಕಂಪನಿಯಲ್ಲಿ ದೊಡ್ಡ ಸಮಸ್ಯೆಯಾಗಿದ್ದು ಊಟ. ಮಲೆನಾಡ ಪ್ರದೇಶದ ಈ ಹುಡುಗನಿಗೆ ರೊಟ್ಟಿ ತಿನ್ನುವುದು ಭಾರೀ ಕಷ್ಟದ ಕೆಲಸವಾಯಿತು. ಕಂಪನಿಯ ಬೋರ್ಡಿಂಗಿನಲ್ಲಿ ಒಂದು ಹೊತ್ತು ಬರೀ ರೊಟ್ಟಿ ಒಂದು ಹೊತ್ತು ಅನ್ನ ಹೀಹಾಗಿ ಶೀಧರ ಅವರಿಗೆ ದಿನದಲ್ಲಿ ಒಂದೇ ಹೊತ್ತು ಊಟ ಅದುಕೂಡ ಅನ್ನ ಮಿತಿಯಲ್ಲಿ ಹದಿಹರೆಯದ ಹುಡುಗ ಬಹುಬೇಗ ಇಳಿದು ಹೋದ. ನಾಟಕ ಕಂಪನಿಯಿಂದ ಮತ್ತೆ ಯೋಚಿಸಿದ್ದು ಸೈನ್ಯ ಭರ್ತಿಯಾಗುವುದು.

ಶ್ರೀಪತಿಯಿಂದ ತಮ್ಮೆಲ್ಲ ಹಣ ಮರಳಿ ಪಡೆಯಲಾದಿದ್ದರೂ ಕೊಟ್ಟ ೨೦. ರೂ.ಗಳಲ್ಲಿಯೇ ಇದ್ದಕ್ಕಿದ್ದಂತೆ ಒಂದು ದಿನ ಬೆಳಗಾವಿಗೆ ಪಯಣ ಸೈನುಕ್ಕಾಗಿ ಪರೀಕ್ಷೆಗಳು ಪ್ರಾರಂಭವಾದಾಗ ಶ್ರೀಧರ ಆರಂಭದಲ್ಲೇ ಹೊರ ಬೀಳಬೇಕಾಯಿತು. ತೂಕ ಕನಿಷ್ಟಟ ೫೦ ಕೆ.ಜಿ ಇರಬೇರಕಿತ್ತು ಶ್ರೀದರ ೪೮. ಕೆ.ಜಿ.ಗೆ ಇಳಿದಿದ್ದರು. ಮತ್ತೆ ಮರಳುವುದು ಅನಿವಾರ್ಯ ಈ ಸಲ ಎಲ್ಲಿಗೆ ಹೋಗುವುದೆಂಬುದೇ ತಿಳಿಯದಾಯಿತು. ಯೋಚಿಸುತ್ತ ಬಸ್ ನಿಲ್ದಾಣಕ್ಕೆ ಒಂದು ತಂಗಿದ್ದಾಯಿತು.

ಬೆಳಗಾವಿಯ ಬಸ್ ನಿಲ್ದಾಣದ ಬೆಂಚ ಮೇಲೆ ಕಾಲು ಚಾಚಿ ಮಲಗಿ ಕಣ್ಣು ಮುಚ್ಚಿದಾಗ ಊರು, ಮನೆ, ತಂದೆ ತಾಯಿ ಕಣ್ಣೆದುರು ಹಾದು ಹೋದಂತಾಯಿತು. ದೊಡ್ಡ ಕುಟುಂದಲ್ಲಿ, ಮನೆ ತುಂಬ ಸದಸ್ಯರಲ್ಲಿ ಬೆಳೆದಿದ್ದ ಶ್ರೀದರ ಈಗ ಅಕ್ಷರ ಸಹ ಏಕಾಂಗಿ. ಏಕಾಂತತೆ ಕಾಡ ಹತಿತ್ತುಬಸ್ ನಿಲ್ದಾಣವೇ ಮನೆಯಾಯಿತು. ಅಲ್ಲಿಯ ಪ್ರಯಾಣಿಕರೇ ಬಂಧು ಬಳಗವಾದರು. ಇದ್ದ ಹಣ ಮುಗಿಯುತ್ತ ಬಂದಿತ್ತು. ರಾತ್ರಿ ಇಡೀ ನಿದ್ದೆಯಿಲ್ಲ ಬದುಕಿಗೆ ದಾರಿಯಲ್ಲ. ಗುರಿಯಿಲ್ಲ ಎಲ್ಲಿಗೆ ಹೋಗಬೇಕು ಗೊತ್ತಿಲ್ಲ, ಸಮಯಕ್ಕೆ ಸರಿಯಾಗಿ ಊಟವಿಲ್ಲ ಹೀಗನೇ ಬಸ್ ನಿಲ್ದಾಣದಲ್ಲಿ ಒಂದೆರಡು ದಿನ ಕಳೆದಾಗ ಮತ್ತೆ ಬೆಳಕು ಕಂಡಂತೆ ಶ್ರೀಶಿವಪುತ್ರಯ್ಯ ಸ್ವಾಮಿಗಳು ಭೇಟಿಯಾದರು.. ಶಿವಪುತ್ರಯ್ಯನವರನ್ನು ಶ್ರೀಪತಿ ಹೆಗಡೆಯವರು ಗದಗ ಕಂಪನಿಯಲ್ಲಿ ಪರಿಚಯಿಸಿ ಕೊಟ್ಟಿದ್ದರು. ಇದ್ದ ಪರಿಸ್ಥಿತಿಯನ್ನೆಲ್ಲ ಶ್ರೀಧರ ತೋಡಿಕೊಂಡಾಗ ಶಿವಪುತ್ರಯ್ಯಸ್ವಾಮಿ ಕಡಪಟ್ಟಿ ಶಂಕರಯ್ಯ ನವರು ಬ್ರ್ಯಾಂಚ ಕಂಪನಿ ಪ್ರಾರಂಭಿಸುತ್ತಿದ್ದಾರೆ. ನಿಮಗಲ್ಲಿ ಸಣ್ಣ ಪಾತ್ರಗಳು ಸಿಕ್ಕರೂ ಸಿಗಬಹುದು

ನಾನು ಹೇಳುತ್ತೇನೆ ಬನ್ನಿ ಎಂದು ಕರೆದುಕೊಂಡು ಹೋಗಿ ಆ ಸಂಘದ ಮಾಲೀಕರಾದ ಶ್ರೀಶಂಕರಯ್ಯ ಕಡಪಟ್ಟಿಯವರಿಗೆ ಪರಿಚಯಿಸಿ ಬ್ರಾಂಚ ಕಂಪನಿಗೆ ಸೇರಿಸಿಕೊಳ್ಳಲು ಶಿಫಾರಸ್ ಮಾಡಿದರು. ಮಾಲಿಕರು ಒಪ್ಪಿಗೆ ನೀಡಿದಾಗ ಶ್ರೀಧರ ಅವರಿಗೆ ಮತ್ತೆ ಬದುಕುವ ದಾರಿಕಂಡಂತಾಯಿತು.

ಬ್ರಾಂಚ್ ಕಂಪನಿ ನಾಲ್ಕು ದಿನಗಳಲ್ಲಿ ಪ್ರಾರಂಭಿವಾಗಬೇಕು. ಆಗಲೇ ಕಲಾವಿದರೆಲ್ಲ "ಬದುಕು ಬಂಗಾರವಾಯ್ತು" ನಾಟಕದ ಪ್ರ್ಯಾಕ್ಟೀಸ ಮುಗಿಸಿ ಹಾಡಿನ ಪ್ರ್ಯಾಕ್ಟೀಸಿನಲ್ಲಿದ್ದರು. ಶ್ರೀಧರ ಅವರಿಗೆ ಅದರಲ್ಲಿಯೂ ಅದೇ ಹೂ ಮಾರುವ ಹುಡುಗನ ಪಾತ್ರ ಕೊಟ್ಟರು. ಮೊದಲೇ ಮಾಡಿದ ಪಾತ್ರವಾಗಿದ್ದರೂ ಅಲ್ಲಿ ಅನೇಕ ಹಿರಿಯ ಕಲಾವಿದರಿದ್ದುದರಿಂದ ಸ್ವಲ್ಪ ಭಯ ಕಾಡಿತು. ಆದರೂ ಆತ್ಮ ವಿಶ್ವಾಸವಿತ್ತು ಅವರೆಲ್ಲರ ಮಧ್ಯದಲ್ಲಿಯೂ ತಾನು ತನ್ನ ಪಾತ್ರವನ್ನು ಜನರಿಗೊಪ್ಪಿಸಬಲ್ಲೆನೆಂದು. ಶ್ರೀಧರ ಹೆಗಡೆ ಅವರು ಅಧಿಕೃತ ಕಂಪನಿಯ ನಟರಾಗಿ ಅದೂ ನಾಯಕನ ಪಾತ್ರದಲ್ಲಿ ಕಾಣಿಸಿಕೊಳ್ಳುವ ಯೋಗ ಬಂದಿತು. ನಾಟಕದ ಪ್ರಾರಂಭದ ದಿನವೇ ನಾಯಕ ಪಾತ್ರಧಾರಿ ಊರಿಂದ ಬರಬೇಕಿತ್ತು ಸಂಜೆಯಾದರೂ ಬಾರದಿದ್ದಾಗ ಮಾಲಿಕರಿಗೆ ಆತಂಕ ಕಾಡ ಹತಿತ್ತು. ಶ್ರೀಧರ ಅವರು ಮಾಲೀಕರೇ ನೀವು ಚಿಂತಸಬೆಡಿ ನಾನು ಮಾಡುತ್ತೇನೆಂದಾಗ ಎಲ್ಲರಿಗೂ ಅಚ್ಚರಿ ಪಾತ್ರದ ಎಲ್ಲಾ ಮಾತುಗಳನ್ನು ಒಪ್ಪಿಸಿದಾಗ ಮಾಲೀಕರಿಗೆ ಧೈರ್ಯ ಬಂದಂತಾಯಿತು. ನಾಯಕ ಪಾತ್ರದ ಮೇಕಪ್ ಮಾಡಿ ಕೆಲವೊಂದು ಅಭಿನಯ ಹೇಳಿಕೊಟ್ಟರು.

ದಿನಾಂಕ: ೨೮-೧೧-೧೯೭೪ ರಂದು ಶೀಧರ ಅವರು ಕಂಪನಿಯ ಅಧಿಕೃತ ನಟರಾಗಿ ಪ್ರಾರಂಭದಲ್ಲಿಯೇ ನಾಯಕ ಪಾತ್ರದಿಂದ ರಂಗ ಪ್ರವೇಶಸಿದ್ದು ಅಚ್ಚರಿ.

ರಂಗ ಪ್ರಪಂಚದಲ್ಲಿ ಮತ್ತೊಂದು ಕಲಾಕುಸುಮ ಅರಳಿದಂತಾಯಿತು. ನಾಯಕ ಪಾತ್ರ ತೂಗಿಸಿದ್ದಾಯಿತು. ಅಭಿನಯ ಸಾಲದಿದ್ದರೂ ಮಾತುಗಳನ್ನು ಚಾಚೂ ತಪ್ಪದೆ ಒಪ್ಪಿಸಿಬಂದದ್ದೇ ಒಂದು ಸಾಹಸವಾಗಿತ್ತು. ಎಲ್ಲರೂ ಪ್ರಶಂಶಿಸಿದರು. ಕ್ರಮೇಣ ಅಭಿನಯವನ್ನು ಮಾಲಿಕರು ಹೇಳಿಕೊಟ್ಟು ಮಾರ್ಗದರ್ಶನ ಮಾಡಿದರು. ಆ ಪಾತ್ರ ಮಾಡುವವನು ಬಂದರೆ ಎಲ್ಲಿ ತಮ್ಮನ್ನು ಬಿಡಿಸುತ್ತಾರೋ ಎನ್ನುವ ಭಯ ಶ್ರೀಧರ ಅವರದಾಗಿತ್ತು. ಆದರೆ ನಾಯಕ ಪಾತ್ರ ಮಾಡುವವನು ಬರಲೇ ಇಲ್ಲ ಹೀಗಾಗಿ ಶ್ರೀಧರ ಅವರೇ ಕೊನೆಯವರೆಗೂ ಆ ಪಾತ್ರ ಅಭಿನಯಿಸಿದರು. ಅಷ್ಟೇ ಅಲ್ಲ ಮುಂದಿನ ನಾಟಕಗಳಲ್ಲಿಯೂ ನಾಯಕ ಪಾತ್ರಗಳನ್ನೇ ಕೊಡಹತ್ತಿದುದು ಹೆಗಡೆಯವರ ಸಂತೋಷಕ್ಕೆ ಕಾರಣವಾಯಿತು.

ಕಂಪನಿ ಅಲ್ಲಿಂದ ಬೆಳಗಾವಿಗೆ ಬಂದಿತು, ಅಲ್ಲಿಯೂ ಪ್ರಾರಂಭದಲ್ಲಿ "ಬದುಕು ಬಂಗಾರವಾಯ್ತು" ನಾಟಕವನ್ನೇ ಪ್ರಯೋಗ ಗೊಳಿಸ ಹತ್ತಿದರು ಮುಂದೆ ಬಹದ್ದೂರ ಮಗ, ಗಂಡನಮಾನ, ಭಲೆ ಮಗಳೆ ಈ ಎಲ್ಲಾ ನಾಟಕಗಳಲ್ಲಿ ನಾಯಕ ಪಾತ್ರನೇ ಹೆಗಡೆಯವರದಾಗಿತ್ತು. ಅಲ್ಲಂದ ಕಂಪನಿ ಬೈಲ ಹೊಂಗಲ್ಲಿಗೆ ಹೋಯಿತು. ಅಲ್ಲಿಯೂ ಇವೇ ನಾಟಕಗಳು ಪ್ರಯೋಗಗೊಳ್ಳುತ್ತ ಕಂಪನಿ ಯಶಸ್ವಿಯಾಗಿ ಸಾಗಿತು.

ಮುಂದೆ ಕೆಲವು ದಿನಗಳವರೆಗೆ ಕಂಪನಿ ಬಂದಿಟ್ಟು ಸಿನಿಮಾ ತಾರೆಯರಿಗೆ ಥೇಟರ ಬಿಟ್ಟುಕೊಟ್ಟರು. ಕಲ್ಪನಾ ಅವರ ಟ್ರುಪ್ಪಿನ "ಮನೆ ಮಗಳು" ನಾಟಕ. ಅಲ್ಲಿಯೂ ನಾಟಕದ ಸಹ ಕಲಾವಿದನೊಬ್ಬ ಕಾಣೆಯಾಗಿದ್ದ ಆಗ ಆ ಟ್ರೂಪಿನ ಸಂಚಾಲಕರಾದ ಪ್ರಧಾನ ಎನ್ನುವವರು ಕಂಪನಿಯ ಮಾಲಿಕರಾದ ಶಂಕರಯ್ಯನವರಲ್ಲಿ ಬಂದು ತಮ್ಮ ಸಮಸ್ಯೆ ಹೇಳಿಕೊಂಡು ಒಬ್ಬ ಕಲಾವಿದನನ್ನು ಕೊಡಿ ಎಂದಾಗ ಶಂಕರಯ್ಯನವರಿಗೆ ನೆನಪಾದದ್ದು ಶ್ರೀಧರ. ಅವರಲ್ಲಿ ಕೇಳಿ ಒಪ್ಪಿದರು. ಸ್ಕ್ರಿಪ್ಟ ಪಡೆದು ಒಂದೆರಡು ಗಂಟೆ ನಿರ್ಜನ ಪ್ರದೇಶದಲ್ಲಿ ಹೋಗಿ ನೋಡಿಕೊಂಡು ಮುಂದೆ ಮಾತುಗಳನ್ನೆಲ್ಲ ಒಪ್ಪಿಸಿದಾಗ ಎಲ್ಲರೂ ಆಶ್ಚರ್ಯಪಟ್ಟರು. ರಾತ್ರಿ ನಾಟಕ ಯಶಸ್ವಿಯಾಯಿತು.

ನಾಟಕ ಬಿಟ್ಟ ಮೇಲೆ ತಾರೆ ಕಲ್ಪನಾ ಶ್ರೀಧರ ಅವರನ್ನು ತಮ್ಮ ಗ್ರೀನ್ ರೂಮಿಗೆ ಕರೆಯಿಸಿ ಎಲ್ಲಾ ವಿವರ ಕೇಳಿದರು ಶ್ರೀಧರ ರಂಗಭೂಮಿಗೆ ಬಂದದ್ದು ಪ್ರಾರಂಭದಲ್ಲಿಯೇ ತಮಗೆ ನಾಯಕ ಪಾತ್ರ ಸಿಕ್ಕಿದ್ದು ವಿವರಿಸಿದರು. ಶ್ರೀಧರ ಅವರ ಪ್ರತಿಭೆಯನ್ನು ರಂಗದಲ್ಲಿ ಕಂಡಿದ್ದ ತಾರೆ ಕಲ್ಪನಾ ಚಲನಚಿತ್ರ ಕ್ಷೇತ್ರಕ್ಕೆ ಬಂದರೆ ನಿನಗೆ ಒಳ್ಳೆ ಭವಿಷ್ಯವಿದೆ ಎಂದರು. ಆಗ ಶ್ರೀಧರ "ಇಲ್ಲ ಮೇಡಂ ನಾನು ಇದೀಗ ರಂಗ ಭೂಮಿ ಪ್ರವೇಶಿಸಿದ್ದೇನೆ. ನನಗಿನ್ನೂ ಕಲಿಯುವುದಿದೆ ಅಲ್ಲದೆ ಮಾಲೀಕರು ನನಗಿಲ್ಲಿ ಒಳ್ಳೆ ಪಾತ್ರಗಳನ್ನೇ ಕೊಡುತ್ತಿದ್ದಾರೆ" ಎಂದಾಗ ಕಲ್ಪನಾ ಅವರು ಶುಭ ಕೋರಿ ಆಶೀರ್ವದಿಸಿರು.

ಶ್ರೀಧರ ಅವರ ಪ್ರತಿಭೆ ಕಂಡಿದ್ದ ಶಂಕರಯ್ಯ ಕಡಪಟ್ಟಿಯವರ ತಮ್ಮ ಅನುಭವ ಹೇಳುತ್ತ, ಅಭಿನಯ ತಿಳಿಸುತ್ತ ಒಬ್ಬ ಉತ್ತಮ ನಟನಾಗಲು ಸಹಕರಿಸಿದರು. ಕೇವಲ ಪ್ರತಿಭೆ ಮಾತ್ರವೇ ಒಬ್ಬ ಉತ್ತಮ ನಟನಾಗಲು ಸಾಧ್ಯವಾಗದು ಒಬ್ಬ ವ್ಯಕ್ತಿಯನ್ನು ರಂಗದಲ್ಲಿ ಅದು ಪರಿಪೂರ್ಣ ಮಾಡೀತೆಂದು ಹೇಳಲಾಗದು ಅದಕ್ಕೆ ಮಾರ್ಗದರ್ಶನ, ಅದಕ್ಕೆ ಗುರುಬೇಕೆಂಬುದು ಅಷ್ಟೇ ಸತ್ಯ. ಪ್ರತಿಭೆ ಎಂಬುದು ಎಲ್ಲರಿಗೂ ಒಂದೇ ರೀತಿಯಾಗಿರುವುದಿಲ್ಲ ಈ ವಿಶಿಷ್ಟತೆಯೇ ಇನ್ನುಳಿದವರಿಗಿಂತ

ಭಿನ್ನವಾಗಿ ಮಾಡುತ್ತದೆ. ಒಬ್ಬ ಸಾಮಾನ್ಯ ಕಲಾವಿದನಾಗಿದ್ದರೆ ಮತ್ತೊಬ್ಬ ಉತ್ತಮ ಕಲಾವಿದನಾಗಿರುತ್ತಾನೆ ಎಲ್ಲೋ ಒಬ್ಬ ಶ್ರೇಷ್ಠ ಕಲಾವಿದನಾಗಿ ಗುರಿತಿಸಿಕೊಳ್ಳುತ್ತಾನೆ ಪ್ರತಿಭೆ ಎಂಬುದು ಬೆಳಕು ಅದು ನಿಮಿಷ ನಿಮಿಷಕ್ಕೂ ಹೊಸದಾಗಿ ತೋರುವಂಥದ್ದು ಶ್ರೀಧರ ಅವರ ಪಾತ್ರಗಳು ಹಾಗೆನೇ ಹೊಸ ಗಾಳಿ, ಹೊಸ ಬೆಳಕು ಪಡೆದು ಕೊಳ್ಳುತ್ತಿದ್ದವು. ಈ ಕಲಾವಿದರ ಪಾತ್ರ ಅನುಭವದ ನೆಲಗಟ್ಟಿನ ಮೇಲೆ ಬೆಳೆದು ಅಭಿವ್ಯಕ್ತಿಗೊಂಡಾಗ ಪ್ರೇಕ್ಷರಕರ ಮನ, ಚಿತ್ತ ಸೆಳೆಯುತ್ತಿತ್ತು.

ಶ್ರೀಧರ ಹೆಗಡೆಯವರ ಪ್ರಯತ್ನ ಪರಿಶ್ರಮ ಅರಿತ ಶಂಕರಯ್ಯ ಮಾಲಿಕರು ಮುಂದೆ ಹೊಸ ಹೊಸ ನಾಟಕಗಳ ಪ್ರಾಕ್ಟೀಸ ಹಚ್ಚಲು ಇವರಿಗನೇ ಜವಾಬ್ದಾರಿ ನೀಡಿದರು. ಕನ್ನಡ ಭಾಷೆ, ಕನ್ನಡ ಸಾಹಿತ್ಯ ಆಸಕ್ತಿ ಹೊಂದಿದ್ದ ಶ್ರೀಧರ ಅವರ ಸ್ಪಷ್ಟ ಉಚ್ಚಾರ, ಡೈಲಾಗ್ಸ ನುಡಿಸುವ ರೀತಿ, ಮಾತುಗಳ ಏರಿಳಿತ ಎಲ್ಲವನ್ನೂ ಕಂಡಿದ್ದ ಶಂಕರಯ್ಯ ನವರು ಶ್ರೀಧನ ಅವರಿಗೆ ಪ್ರಾಕ್ಟೀಸ ಹಚ್ಚುವ ಜವಾಬ್ದಾರಿ ನೀಡಿದ್ದು ಕೆಲವು ಹಿರಿಯ ಕಲಾವಿದರಿಗೆ ಅಸಮಾಧಾನ ತಂದಿದ್ದುಂಟು. **"ಶ್ರೀ ಗುರು ಪ್ರಸಾದಿತ ನಾಟ್ಯ ಸಂಘ"** ಕಡಪಟ್ಟಿ ಮಾಲಿಕರು ಶಂಕರಯ್ಯ ನವರಾಗಿದ್ದರೂ ಆಡಳಿತ ಶಂಕರಯ್ಯಾನವರ ಚಿ॥ ರಾಜು ಅವರದಾಗಿತ್ತು ಈ ಎರಡೂ ಕಂಪನಿಗಳಲ್ಲಿ ಶಂಕರಯ್ಯನವರು ಹೆಸರಿಗೆ ಮಾಲಿಕರು ಅವರದೇನೂ ನಡೆಯುತ್ತಿರಲಿಲ್ಲ. ಎರಡೂ ಕಂಪನಿಗಳ ಆಡಳಿತ ಚಟುವಟಿಕೆಗಳನ್ನು ನೋಡುತ್ತ ಬಂದಿದ್ದ ಶ್ರೀಧರ ಅವರಿಗೆ ಬೇಜಾರೆನಿಸುತ್ತಿತ್ತು. ನಟರನ್ನು ಬಹಳಷ್ಟು ಹಗುರಾಗಿ ಕಾಣುವುದು, ಬಾಯಿಗೆ ಬಂದಂತೆ ಬಯ್ಯುವುದು, ಶಿಕ್ಷಿಸುವುದು ಕಲಾವಿದೆಯರಿಗೂ ಹಗುರಾಗಿ ಮಾತಾಡುವುದು ಬೆಡವಾದರೆ ಹೊಡೆದು –ಬಡಿದು ಹೊರ ಹಾಕುವುದು ಇದೆಲ್ಲವನ್ನೂ ನೋಡಿದ ಶ್ರೀಧರ ಅವರಿಗನಿಸಿದ್ದು ಇದು ಅಭದ್ರ ಯಾವಾಗಬೇಕಾದರೂ ಹೊರ ಹಾಕಬಹುದು. ಕಲಾವಿದರ, ಆಡಳಿತಗಾರರ ಸಂಘರ್ಷಗಳು ನಡದೇ ಇರುತ್ತಿದ್ದವು. ಇಂಥದರಲ್ಲಿಯೇ ಹೆಗಡೆಯವರು ತಮ್ಮ ಸ್ಥಾನ ಭದ್ರಗೊಳಿಸಿಕೊಳ್ಳಬೇಕಾಗಿತ್ತು. ಶ್ರೀಧರ ಅವರು ಪ್ರತಿದಿನವೂ ತಮ್ಮ ಕೆಲಸ ಕಾರ್ಯಗಳನ್ನು ಕ್ರಮಬದ್ಧವಾಗಿ ಸಾಗಿಸುತ್ತ, ಮಾತುಗಾರಿಕೆಯಿಂದ, ಕಲಾವಿದರ ಮಾಲಿಕರ ಮನಸ್ಸು ಸೆಳೆಯುತ್ತ ಎಲ್ಲರಿಗೂ ಬೇಕಾದವರೇ ಆಗಿದ್ದರು.

ಬೈಲಹೊಂಗಲ್ಲಿಂದ ಕಂಪನಿ ಕೆರೂರಿಗೆ ಬಂದಿತು. ಬದಾಮಿ ಕೆರೂರ್ ಕ್ಯಾಂಪಿನಲ್ಲಿ ಅನೇಕ ಏರಿಳಿತ ನಡೆದವವು. ಶಿವಪುತ್ರಯ್ಯ ದೊಡ್ಡವಾಡ ಹಿರಿಯ ಕಲಾವಿದರು ಕಂಪನಿಯಿಂದ ಹೊರಬಂದು ಹೊಸ ಕಂಪನಿ ಕಟ್ಟಲು ಸಿದ್ಧಗೊಳಿಸುತ್ತಿದ್ದುದು ಗುಟ್ಟಾಗಿ ಉಳಿಯುಲಿಲ್ಲ. ಹಿರಿಯ ಹಾಗೂ ಮುತ್ಸದ್ಧಿ ಶಿವಪುತ್ರಯ್ಯನವನ್ನು ತಡೆಯಲು ಆಡಳಿತ ವರ್ಗದ ಯಾರಿಗೂ ಸಾಧ್ಯವಾಗಲಿಲ್ಲ.

ಶ್ರೀಧರ ಅವರು ಕಡಪಟ್ಟಿ ಕಂಪನಿಗೆ ಬಂದದ್ದೇ ಶಿವಪುತ್ರಯ್ಯನವರ ಮುಖಾಂತರ ಹೀಗಾಗಿ ಶ್ರೀಧರ ಅವರೂ ಕೂಡ ಕಂಪನಿ ಬಿಟ್ಟು ಹೋಗುತ್ತಾರೆಂದು ಸುದ್ದಿ ಹರಡಿತು. ಸಂಘಟಿಕರು ಸುಮ್ಮನೇ ಸಂಶಯ ತಾಳಿ ರೇಗಾಡಿದಾಗ ಶ್ರೀಧರ ಅವರಿಗೆ ಹೊರಬರುದೇ ಸೂಕ್ತ ವೆನಿಸಿತು. ಅಷ್ಟೊತ್ತಿಗಾಗಲೇ ಶ್ರೀಧರ ಅವರಿಗೆ ಉಸಿರು ಕಟ್ಟಿದಂತಾಗಿತ್ತು. ನಿಯಮಾನುಸಾರವಾಗಿ ಶ್ರೀಧರ ಕಂಪನಿ ಬಿಡುವುದಕ್ಕೂ ಪೂರ್ವದಲ್ಲಿ ಒಂದು ತಿಂಗಳು ಮುಂಚಿತವಾಗಿನೇ ನೋಟೀಸ ಕೊಟ್ಟರು. ಎಲ್ಲ ರೀತಿಯಲ್ಲಿ ಚೊಕ್ಕವಾಗಿದ್ದ, ವ್ಯವಸ್ಥಿತವಾಗಿದ್ದ ಬುದ್ಧಿವಂತ ಶ್ರೀಧರ ಹೊರ ಬರುವುದು ಕಷ್ಟವಾಗಲಿಲ್ಲ. ಶ್ರೀಧರ ಅವರಿಗೆ ಅಭಿಮಾನಿಗಳೂ ಸಾಕಷ್ಟಾಗಿದ್ದರು ಅಷ್ಟೊತ್ತಿಗೆ. "ಶ್ರೀಗುರು ಪ್ರಸಾದಿತ ನಾಟ್ಯ ಸಂಘ" ಕಡಪಟ್ಟಿ ಕಂಪನಿಯ ಋಣ ತೀರಿತ್ತು ಹನ್ನೊಂದು ತಿಂಗಳ ಅನುಭವ ಹೊತ್ತು ಹೊರಬಂದ ಶ್ರೀಧರ ಶಿವಪುತ್ರಯ್ಯನವರ "ಶ್ರೀ ಸಂಗಮೇಶ್ವರ ನಾಟ್ಯ ಸಂಘ" ಕಂಪನಿಯಲ್ಲಿ ಪ್ರವೇಶ ಪಡೆದರು ಈ ಕಂಪನಿಯಲ್ಲಿಯೂ ಶ್ರೀಧರ ಅವರಿಗೆ ಹೆಚ್ಚಿನ ಗೌರವ, ಹೆಚ್ಚಿನ ಜವಾಬ್ದಾರಿ ದೊರೆತವು. ೧೯೭೫ ನವೆಂಬರ ತಿಂಗಳಲ್ಲಿ ಪ್ರವೇಶ ಪಡೆದ ಶ್ರೀಧರ ಹೆಗಡೆ ಜೂನ್ ೧೯೭೭ ರವರೆಗೆ ದೀರ್ಘ ಸೇವೆ ಸಲ್ಲಿಸಿದ್ದುಂಟು.

ಶಿವಪುತ್ರಯ್ಯ ದೊಡ್ಡವಾಡ ಕಂಪನಿಯಲ್ಲಯೂ ಅವೇ ನಾಟಕಗಳಾಗಿದ್ದವು ಬದುಕು ಬಂಗಾರ ವಾಯ್ತು ಕೊಂಡು ತಂದ ಗಂಡ, ಬಹುದ್ದೂರ ಮಗ, ತಾಯಿ ಕರಳು. ದೊಡ್ಡವಾಡ ಕಂಪನಿ ಬೆಳಗಾವಿ ಜಿಲ್ಲೆಯ ಬೈಲ ಹೊಂಗಲ ತಾಲೂಕಿನ ದೊಡ್ಡವಾಡ ಗ್ರಾಮದಲ್ಲಿ ಪ್ರಪ್ರಥಮವಾಗಿ. "ಬದುಕು ಬಂಗಾರವಾಯ್ತು" ನಾಟಕದಿಂದ ನಾಂದಿ ಹಾಡಿತು. ಊರಿನವರ ಸಹಾಯ ಸ್ವಹಾಕಾರದಿಂದ ಕಂಪನಿ ಪ್ರಾರಂಭಗೊಂಡಿತು. ಈ ಕಂಪನಿಯಲ್ಲಿಯೂ ಶ್ರೀಧರ ಅವರಿಗೆ ನಾಯಕ ಪಾತ್ರಗಳೇ ಕಾದಿದ್ದವು ಪಾತ್ರಗಳ ಜೊತೆ ಜವಾಬ್ದಾರಿ ಕೆಲಸಗಳ ಕೊಡಲಾಯಿತು, ನಾಟಕ ನಿರ್ದೇಶನ, ಸಂಘದ ಲೆಕ್ಕ ಪತ್ರ ವ್ಯವಹಾರ ಕೂಡ ಶ್ರೀಧರ ಅವರೆ ನೋಡಿಕೊಳ್ಳುತ್ತಿದ್ದರು. ಅಷ್ಟೊತ್ತಿಗಾಗಲೇ ಥೇಟರ ಹಾಕಿಸುವುದರಿಂದ ಹಿಡಿದು ಲೈಸೆನ್ಸ್ ಪಡೆಯುವ ಎಲ್ಲ ರೀತಿಯ ಅನುಭವ ಶ್ರೀಧರ ಅವರು ಪಡೆದಾಗಿತ್ತು.

ಶ್ರೀಧರ ಹೆಗಡೆಯವರು ಶಿವಪುತ್ರಯ್ಯ ದೊಡ್ಡವಾಡ ಕಂಪನಿಯಲ್ಲಿಯೂ ಹೆಚ್ಚು ಆಕರ್ಷಸಿದರು. ಹಳ್ಳಿಗಳ ಕ್ಯಾಂಪಾಗಿದ್ದರಿಂದ ಕ್ಯಾಂಪು ಬೇಗ ಬೇಗ ಬದಲಾಯಿಸುವುದು ಅನಿವಾರ್ಯವಾಗುತ್ತಿತ್ತು. ಕ್ಯಾಂಪು ಬದಲಿಸುವುದಾಗಲಿ, ಲೈಸನ್ಸ ಪಡೆಯುವುದಾಗಲಿ ಈಗಿನಷ್ಟು ಕಷ್ಟ ಸಾಧ್ಯವಾಗಿರಲಿಲ್ಲ ರಂಗ ಸಮಾನುಗಳನ್ನು ಸಾಗಿಸುವುದೂ ಅಷ್ಟು ಕಷ್ಟವಾಗಿರಲ್ಲಿಲ್ಲ. ಬಟ್ಟೆ ಥೇಟರು, ಒಂದಿಷ್ಟು ಸೀನ್ಸ, ಕುರ್ಚಿಗಳು. ಲೈಸನ್ಸ ಕೂಡ ತಹಸೀಲ್ದಾರ ಹತ್ತಿರ

ಹೋದರಾಯಿತು. ದೊಡ್ಡದೊಡ್ಡ ಪಟ್ಟಣಗಳಲ್ಲಿ ನಾಲ್ಕಾರು ಕಛೇರಿ ತಿರುಗುವಂತೆ ಇಲ್ಲಿ ಆ ಪ್ರಸಂಗವಿರಲಿಲ್ಲ.

ಶ್ರೀಧರ ಹೆಗಡೆಯವರನ್ನು ಕಾಡ ಹತ್ತಿದ ಬಲವಾದ ವಿಷಯವೆಂದರೆ ನಾಡಿನಲ್ಲಿ ಒಂದು ಕಂಪನಿಯ ಹೆಸರಾಂತ ಮಾಲಿಕರು, ಕಲಾವಿದರು, ನಾಟಕಕಾರರು ಹಾಗೂ ತಮ್ಮ ಗುರುಗಳಾಗಿದ್ದ ಶಂಕರಯ್ಯನವರು ತಮ್ಮ ಕಂಪನಿಯಲ್ಲಿ ಮಕ್ಕಳೊಂದಿಗೆ ಜಗಳವಾಡಿ ಹೊರಬಂದು ದೊಡ್ಡವಾಡ ಶಿವಪುತ್ರಯ್ಯನವರಲ್ಲಿ ನಟರಾಗಿ ಸೇರಿದ್ದು. ಹೇಗಾದರೂ ಮಾಡಿ ಶಂಕರಯ್ಯ ಕಡಪಟ್ಟಿಯವರನ್ನು ಮತ್ತೆ ಕಂಪನಿ ಮಾಲಿಕರನ್ನಾಗಿ ಮಾಡುವ ನಿಟ್ಟಿನಲ್ಲಿ ಶ್ರೀಧರ ಹೆಗಡೆ ಗಂಭೀರವಾಗಿ ಚಿಂತಿಸಿದರು. ಶಂಕರಯ್ಯನವರಿಗೂ ತಮ್ಮ ವಿಚಾರ ಹೇಳಿ ಆ ನಿಟ್ಟಿನಲ್ಲಿ ಮುನ್ನಡೆದರು. ದೊಡ್ಡವಾಡ ಕಂಪನಿಯಲ್ಲಿ ಅವಶ್ಯಕತೆಗಿಂತ ಹೆಚ್ಚು ಕಲಾವಿದರಿದ್ದರು ಸ್ನೇಹಿತರಿಂದ ಸ್ವಲ್ಪ ಹಣ ಸಾಲ ಪಡೆದು ಎಲ್ಲಾ ಬಾಡಿಗೆ ಸಲಕರಣೆಗಳನ್ನು ತೆಗೆದುಕೊಂಡು ದೊಡ್ಡವಾಡ ಶಿವಪುತ್ರಯ್ಯನವರ ಕಂಪನಿಯ ಮಾಲಿಕರ ಅನುಮತಿಯೊಂದಿಗೆ ಕಂಪನಿಯಲ್ಲಿದ್ದ ಹೆಚ್ಚಿನ ಕಲಾವಿದರನ್ನು ಕರೆದುಕೊಂಡು ಹೊರಗಿನ ಕೆಲವು ಕಲಾವಿದರನ್ನೂ ಗೊತ್ತುಪಡಿಸಿ ಹೊಸ ಕಂಪನಿಗೆ ಹುಟ್ಟು ಹಾಕಿದರು. ಶ್ರೀಧರ ಅವರು ಕಂಪನಿ ಪ್ರಾರಂಭಿಸಲು ಸಂಪೂರ್ಣ ಕಾರಣವಾಗಿದ್ದರೂ ತಮ್ಮ ಗುರುಗಳು, ತಮ್ಮ ಮಾರ್ಗದರ್ಶಕರು. ಎನ್ನುವ ಕಾರಣಕ್ಕಾಗಿ ಶ್ರೀಶಂಕರಯ್ಯ ಕಡಪಟ್ಟಿಯವರನ್ನೇ ಕಂಪನಿಯ ಮಾಲಿಕರೆಂದು ಶಂಕರಯ್ಯನರ ಕಂಪನಿಯ ಮೊದಲಿನ ಹೆಸರಿನಲ್ಲಿ ಸ್ವಲ್ಪ ಬದಲಾವಣೆ ಮಾಡಿ **"ಶ್ರೀ ಗುರು ಕೃಪಾ ನಾಟ್ಯ ಸಂಘ"** ಕಡಪಟ್ಟಿ ಎಂದಿಟ್ಟು ಗುರುಭಕ್ತಿ ಮೆರೆದುದ್ದು ಶ್ರೀಧರ ಅವರ ಹಿರಿಯ ಗುಣ.

ಶ್ರೀಧರ ಅವರು ಪ್ರಾರಂಭಿಸಿದ "ಶ್ರೀಗುರು ಕೃಪಾ ನಾಟ್ಯ ಸಂಘದ" ಕಲಾವಿದರೆಂದರೆ ಶ್ರೀ ಶಂಕರಯ್ಯ ಕಡಪಟ್ಟಿ (ಮಾಲಿಕರು) ಶ್ರೀ ಶ್ರೀಧರ ಹೆಗಡೆ (ಮಾಲಿಕರು) ಕುಂದಾಪುರ ಶ್ರೀನಿವಾಸ, ಲೋಕೇಶ್ ತುಮಕೂರ, ಮಹಾಂತಯ್ಯ ತೇರದಾಳ, ದೇವೆಂದ್ರ, ಜಯಶ್ರೀ, ಸುರೇಖಾ ಬ್ಯಾಡಗಿ, ಪ್ರಮುಖರಾಗಿದ್ದರು. ಪ್ರಾರಂಭದ ನಾಟಕಗಳಲ್ಲಿ ಶಂಕರಯ್ಯ ಕಡಪಟ್ಟಿ ಮಾಲಿಕರು ಬರೆದ ನಾಟಕಗಳೇ ಆಗಿದ್ದವು. ಕಂಪನಿ ಪ್ರಪ್ರಥಮವಾಗಿ ರೋಣ ತಾಲೂಕಿನ ಬೆಳವಣಿಕೆಯಲ್ಲಿ ಪ್ರಾರಂಭಗೊಂಡು ಮುಂದೆ ಹೊಬಳಿ ಕ್ಯಾಂಪು ಮಾಡುತ್ತ ಸಾಗಿತು. ಹಳ್ಳಿಗಳ ಕ್ಯಾಂಪು ಆಗಿದ್ದರಿಂದ ಕಂಪನಿಗೆ ಹೆಚ್ಚಿನ ಆದಾಯವಿರಲಿಲ್ಲ. ಖರ್ಚು ವೆಚ್ಚಕ್ಕೆ ಸರಿಯಾಗಿತ್ತು.

೧೯೭೯ ರಲ್ಲಿ ರಾಮದುರ್ಗ ತಾಲೂಕಿನ ಸುರೇಬಾನು ಕ್ಯಾಂಪಿನಲ್ಲಿದ್ದ ಕಂಪನಿಗೆ ಹಾವೇರಿ ತಾಲೂಕಿನ ಹಂಸಭಾವಿಯವರು ಬಂದು ನಾಟಕ ನೋಡಿ ದಿನಕ್ಕೆ ಎಂಟು ನೂರು ರೂಪಾಯಿಹಳಂತೆ ಒಂದು ತಿಂಗಳು ಕಾಂಟ್ರಿಕ್ಟ ಮುಗಿಸಿ ಐದುನೂರು ರೂ. ಮುಂಗಗಡಕೊಟ್ಟು ಮಾರನೆಯದಿನ ಹನ್ನೆರಡು ಸಾವಿರ ರೂ. ಕೊಡುವುದಾಗಿ ಹೇಳಿದರು ಆ ಊರಲ್ಲಿ ಥೇಟರಿನ ವ್ಯವಸ್ಥೆಯನೆಲ್ಲ ಅವರೇ (ಕ್ಯಾಂಟ್ರಿಕ್ಟದಾರರೆ) ಮಾಡಿಕೊಳ್ಳಬೇಕಿತ್ತು. ಶ್ರೀಧರ ಅವರ ಕಲಾವಿದರೊಂದಿಗೆ ಹೋಗಿ ಒಂದು ತಿಂಗಳು ನಾಟಕ ಮಾಡುವುದಷ್ಟೇ ಕೆಲಸವಾಗಿತ್ತು.

ಶ್ರೀಧರ ಕಂಪನಿಯ ಕಲಾ ಬಳಗದೊಂದಿಗೆ ಹಂಸಭಾವಿಗೆ ಪ್ರಯಣ ಬೆಳೆಸಿ ಭಾನುವಾರ ರಾತ್ರಿ ೧೦-೩೦ ಕ್ಕೆ ಶಂಕರಯ್ಯ ಕಡಪಟ್ಟಿಯವರೇ ಬರೆದ "ಚಿನ್ನದ ಗೊಂಬೆ" ನಾಟಕ ಪ್ರಯೋಗಿಸಿದರು. ನಾಟಕ ಬಿಟ್ಟಮೇಲೆ ಕಲಾವಿದರೆಲ್ಲಾ ಗೊತ್ತು ಪಡಿಸಿದ ಸ್ಥಳಕ್ಕೆ ಹೋಗಿ ಊಟ ಮುಗಿಸಿದಾಗ ಸಮಯ ಮಧ್ಯರಾತ್ರಿಯಾಗಿತ್ತು. ದಣಿದಿದ್ದರಂದ ಬಹುಬೇಗ ನಿದ್ದೆ ಹೋದರು. ಕಲಾವಿದೆಲ್ಲ ಬೆಳಗ್ಗೆ ತುಂಬ ತಡವಾಗಿನೇ ಎದ್ದರೂ ಶ್ರೀಧರ ಅವರು ಬೇಗವೆದ್ದು ಥೇಟರ ಕಡೆ ಹೋದಾಗ ಅಚ್ಚರಿ, ಆಘಾತ ಕಾದಿತ್ತು. ಒಂದು ತಿಂಗಳವರೆಗೆ ನಿಶ್ಚಿಂತೆಯಿಂದ ಯಾವ ಒತ್ತಡಗಳೂ ಇಲ್ಲದೆ ನಾಟಕ ಪ್ರಯೋಗಿಸುತ್ತ ಕಾಂಟ್ರಕ್ಟರಿಂದ ಬಂದ ಹಣದಲ್ಲಿ ಸ್ವತಂತ್ರ ಕಂಪನಿಯ ಸಲಕರಣೆಗಳನ್ನು ಮಾಡಿಕೊಂಡು ದೊಡ್ಡ ದೊಡ್ಡ ಕ್ಯಾಂಪು ಮಾಡಬೇಕೆಂದು ಕಂಡಿದ್ದ ಕನಸು ನುಚ್ಚುನೂರಾಗಿ ಹೋಗಿತ್ತು. ಥೇಟರ್ ಇರಲಿಲ್ಲ. ಶ್ರೀಧರ ಹೋಗಿ ಗಣ್ಯರನ್ನು ವಿಚಾರಿಸಿದಾಗ ರಾತ್ರಿಯೆಲ್ಲ ಕಾಂಟ್ರಿಕ್ಟದಾರರಲ್ಲಿಯೇ ಜಗಳವಾಗಿ ಪ್ರಮುಖ ವ್ಯಕ್ತಿಗಳು ಊರು ಬಿಟ್ಟು ತೊಲಗಿದ್ದಾರೆನ್ನುವ ಮಾತು ಶ್ರೀಧರ ಅವರಿಗೆ ಸಿಡಿಲು ಹೊಡೆದಂತಾಯಿತು. ಆ ಆ ಘಾತಸುದ್ದಿಯಿಂದ ತತ್ತರಿಸಿ ಹೋದರು. ಊರಿನವರಾರೂ ಸಹಾಯಕ್ಕೆ ಬರಲಿಲ್ಲ ಕಲಾವಿದರ ಬೋರ್ಡಿಂಗಿಗೂ ನೆರವಾಗಲಿಲ್ಲ ಶ್ರೀಧರ ಅಲ್ಲಿಂದ ನವಲಗುಂದ ತಾಲೂಕಿನ ಮೊರಬಕ್ಕೆ ಹೋಗಿ ಅಲ್ಲಿಯ ಸ್ನೇಹಿತರಲ್ಲಿ ನಡೆದ ಘಟನೆಯನ್ನೆಲ್ಲ ತಿಳಿಸಿ ಹಣ ಪಡೆದು ತಂದು ಅಮಿನಭಾವಿ ಕ್ಯಾಂಪುಗೊತ್ತು ಮಾಡಿ ಥೇಟರ ಹಾಕಲು ಹಚ್ಚಿ ಅಲ್ಲಿಂದ ಹಂಸಭಾವಿಗೆ ಹೋಗಿ ಕಲಾವಿದರನ್ನೆಲ್ಲ ಅಲ್ಲಿಂದ ಕರೆತಂದು ಒಂದು ವಾರದಲ್ಲಿ ನಾಟಕ ಪ್ರಾರಂಭಿಸಿ ನಿಟ್ಟಿಸುರುಬಿಟ್ಟರು. ಶ್ರೀಧರ ಅವರ ರಂಗ ಬದುಕಿನಲ್ಲಿ ಪ್ರಪ್ರಥಮ ಪೆಟ್ಟಿದಾಗತ್ತು.

ಹಂಸ ಭಾವಿಯಿಂದ ಕಂಪನಿಯನ್ನು ಅಮಿನ ಭಾವಿಗೆ ತಂದಾಯಿತು. ಅಷ್ಟೊತ್ತಿಗಾಗಲೇ ಮಳೆಗಾಲ ಪ್ರಾರಂಭಗೊಂಡಿತ್ತು. ನಾಟಕ ಕಂಪನಿಗಳಿಗೆ

ಮಳೆಗಾಲ ಅನ್ನೊದೊಂದು ಅಗ್ನಿ ಪರೀಕ್ಷೆ. ಅದನ್ನು ದಾಟಿಬರುವುದು ಸಣ್ಣ ಪುಟ್ಟ ಕಂಪನಿಗಳಿಗಂತೂ ಬಹು ಕಷ್ಟದ ಮಾತಾಗಿತ್ತು. ಹೀಗಾಗಿ ಮಳೆಗಾಲದಲ್ಲಿ ಚಿಕ್ಕಪುಟ್ಟ ಕಂಪನಿಗಳು ಮುಚ್ಚಿಕೊಳ್ಳುತ್ತಿದ್ದವು. ಇಲ್ಲವೆ ಸಿನಿಮಾ ಥೇಟರಿನಲ್ಲೋ ಶಾಲೆ-ಕಾಲೇಜುಗಳ ಹಾಲಿನಲ್ಲಿಯೋ ನಾಟಕ ಪ್ರಯೋಗಿಸುತ್ತ ಸಾಗುತ್ತಿದ್ದವು.

ಶ್ರೀಧರ ಅವರು ಬಟ್ಟೆ ಥೇಟರಾಗಿದ್ದರಿಂದ ಅಮಿನಭಾವಿ ಸಿನಿಮಾ ಥೇಟರದಲ್ಲಿ ನಾಟಕ ನಡೆಸಲು ನಿರ್ಧರಿಸಿ ಸಿನಿಮಾ ಥೇಟರಿನವರಿಗೆ ಮುಂಗಡ ಹಣ ಕೊಟ್ಟು ತಹಸೀಲ್ದಾರ ಅವರ ಪರಿಮಿಶನ್ ಪಡೆದು ನಾಳೆ ನಾಟವಾಡಬೇಕೆಂದು ತೀರ್ಮಾನಿಸಿದಾಗಲೇ ಮತ್ತೊಂದು ಆಘಾತಕಾದಿತ್ತು. ಎರಡು ಕೋಮುಗಳ ಗುಂಪು ಘರ್ಷಣೆಯಲ್ಲಿ ಎರಡು ಕೊಲೆಯಾಗಿ ಊರಿಗೆ ಊರೇ ದ್ವೇಷದ ಜ್ವಾಲೆಯಲ್ಲಿ ಉದಿಯುತ್ತಿತ್ತು. ತಹಶೀಲ್ದಾರ ತಕ್ಷಣ ನಾಟಕ ಕಂಪನಿ ಪರವಾನಿಗೆ ರದ್ದು ಪಡಿಸಿದರು. ಮತ್ತೆ ಶ್ರೀಧರ ಅವರಿಗೆ ದಿಕ್ಕೆ ತೋಚದಂತಾಯಿತು. ನಾಟಕ ಕಂಪನಿಗಳ ಮಾಲಿಕರಿಗೆ ಇಂಥ ಅನೇಕ ಪ್ರಸಂಗಗಳು ಕಾಡುತ್ತಲೇ ಇರುತ್ತವೆ. ಧೈರ್ಯವಿದ್ದವನು ಮಾತ್ರ ಎದೆಗುಂದದೆ ಎಲ್ಲವನ್ನೂ ಎದುರಿಸಿ ಮುನ್ನಡೆಯುತ್ತಾನೆ.

ವೃತ್ತಿ ರಂಗ ಭೂಮಿಯಲ್ಲಿ ಹಲವಾರು ಸಮಸ್ಯೆಗಳು ಆಗಾಗ ಕಾಡುತ್ತಲೇ ಇರುತ್ತವೆ. ಕಂಪನಿಯ ಜವಾಬ್ದಾರಿ ನಿಭಾಯಿಸುವ ವ್ಯಕ್ತಿಗೆ ಎಂದೂ ನೆಮ್ಮದಿಯಿರುವುದಿಲ್ಲ. ಕಷ್ಟಗಳು, ಸಮಸ್ಯೆಗಳು ಅವನನ್ನು ದುರ್ಬಲಗೊಳಿಸುತ್ತವೆ. ಅವನಿಗೆ ದಾರಿ ತೋಚದಂತೆ ಮಾಡುತ್ತವೆ. ಮಾಲಿಕನಾದವನ ಧೈರ್ಯ ಸ್ಥೈರ್ಯ ಗೊತ್ತಾಗುವುದು ಇಂಥ ಕಷ್ಟ ಕಾಲದಲ್ಲಿಯೇ. ನಾಲ್ಕು ದಿನ ವೇತನ ತಡವಾದರೆ ಕಲಾವಿದರು ಹೊರ ನಡಿಯಲು ಸಿದ್ಧರಾಗುತ್ತಾರೆ. ನಾಟಕ ನಡೆಯಲಿ ನಡೆಯದಿರಲಿ ಅವರ ಊಟ, ವಸತಿ, ವೇತನ ವ್ಯವಸ್ಥೆ ಮಾಡಲೇಬೇಕು. ಕಲಾವಿದರನ್ನು ನಿರ್ಲಕ್ಷಿಸುವಂತಿಲ್ಲ ಮಾಲಿಕನಾದವನಿಗೆ ಬುದ್ಧಿವಂತಿಕೆಯ ಜೊತೆ ಆಡಳಿತದ ಎಲ್ಲಾ ಸೂತ್ರಗಳೂ ಗೊತ್ತಿರಬೇಕು. ಕಂಪನಿಯ ಒಳ ಮರ್ಮ ತಿಳಿದಿರಬೇಕು.

ರಾಮ ದುರ್ಗಕ್ಕೆ ಭಾರತೀ ನಾಟ್ಯ ಸಂಘದ ಥೇಟರೊಂದು ಖಾಲಿ ಇದೆ ಎಂದು ತಿಳಿದಾಗ ಅದರ ಮಾಲಿಕರನ್ನು ಸಂಪರ್ಕಿಸಿದಾಗ ಕೆಲವು ದಿವಸ ಆಡಿಕೊಳ್ಳಿ ಎಂದು ಭಾರತಿ ನಾಟ್ಯ ಸಂಘದ ಮಾಲಿಕರು ಒಪ್ಪಿಗೆ ಕೊಟ್ಟಾಗ ಶೀದರ ಹೆಗಡೆ ಅವರ ಟ್ರೈಪ್ ಬಂದಿಳಿದಾಗ ಅಲ್ಲಿ ಮತ್ತೊಂದು ಸಮಸ್ಯೆ ಕಾದಿತ್ತು. ಮಾಲಿಕರಿಗೂ ಥೇಟರ ಹತ್ತಿರದ ಆಸ್ಪತ್ರೆಯ ಡಾಕ್ಟರರಿಗೂ ಜಗಳವಾಗಿದ್ದರಿಂದ ಡಾಕ್ಟರ ಇಲ್ಲಿ ನಾಟಕ ಪ್ರಯೋಗಿಸುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತೆ ಅನುಮತಿಕೊಡಬಾರದೆಂದು ದೂರುಕೊಟ್ಟಿದ್ದರಿಂದ ನಾಟಕ

ಆಡುವ ನಿರ್ಧಾರ ಕೈ ಬಿಡದೇಕಾಯಿತು. ಅಲ್ಲಿಗೆ ಶ್ರೀಧರ ಪೂರ್ತಿ ಸೋತು ಹೋಗಿದ್ದರು ಅದೇ ಊರಲ್ಲಿ ಬೇರೆಲ್ಲೋ ನಾಲ್ಕಾರು ದಿನ ನಾಟಕ ಪ್ರಯೋಗಿಸಿ ಎಲ್ಲಾ ಕಲಾವಿದರಿಗೆ ವೇತನ ಕೊಟ್ಟು ಕಂಪನಿಯ ಅಂಕದ ಪರದೆ ಎಳೆದರು. ಅಷ್ಟೊತ್ತಿಗೆ ಶ್ರೀಧರ ಅವರ ಗುರುಗಳು, ಕಂಪನಿಯ ಮಾಲಿಕರಲ್ಲೊಬ್ಬರಾಗಿದ್ದ ಶಂಕರಯ್ಯನವರಿಗೂ ಆರೋಗ್ಯ ಸರಿಯಿಲ್ಲದ್ದರಿಂದ ಅವರ ಮಕ್ಕಳು ಬಂದು ಕರೆದುಕೊಂಡು ಹೋದರು.

ಬೈಲ ಹೊಂಗಲ ತಾಲೂಕಿನ ಸಂಗೊಳ್ಳಿಯವರೊಬ್ಬರು ಶ್ರೀಧರ ಅವರ ಕಂಪನಿ ಬಂದಾಗಿದ್ದು ತಿಳಿದಾಗ ಬಂದು ಶ್ರೀಧರ ಅವರನ್ನು ಸಂಪರ್ಕಿಸಿ ನಾಟಕ ಕಂಪನಿ ಪ್ರಾರಂಭಸುವ ವಿಷಯ ಪ್ರಸ್ತಾಪಿಸಿ ಕಲಾವಿದರನ್ನು ಕಳಿಸಲು ಹಾಗೂ ಶ್ರೀಧರ ಅವರನ್ನು ನಾಟಕ ನಿರ್ದೇಶಿಸಲು ವಿನಂತಿಸಿದಾಗ ಶ್ರೀಧರ ಅವರಿಗೆ ಹೋಗುವುದು ಅನಿವಾರ್ಯವಾಗಿತ್ತು. ಅದೇ ಆಗ ಪ್ರಾರಂಭವಾದ ಸಂಗೊಳ್ಳಿಯ ತಂಡಕ್ಕೆ ಶ್ರೀಧರ ನಿರ್ದೇಶಕರಾಗಿ, ಸಲಹೆಗಾರರಾಗಿ ತಮ್ಮ ಅನುಭವವನ್ನು ಹಂಚಿಕೊಂಡರು. ನಾಲ್ಕಾರು ತಿಂಗಳಲ್ಲಿ ಆ ಕಂಪನಿಯೂ ಒಂದಾಯಿತು ಹೊಸಬರಿಗೆ ಕಂಪನಿಯನ್ನು ನಿರಂತರ ನಡೆಸಿಕೊಂಡು ಹೋಗುವುದು ಸುಲಭದ ಮಾತಿಲ್ಲ ಆಗ ಅಷ್ಟೊಂದು ದುಡ್ಡು ತೊಡಗಿಸಬೇಕಾಗಿರಲಿಲ್ಲವೆಂದರೂ ಹಣದ ಮೌಲ್ಯ ಆ ಕಾಲಕ್ಕನುಸಾರವಾಗಿನೇ ಇರುತ್ತದೆ. ಕಷ್ಟಪಟ್ಟು ಸಂಸ್ಥೆಯನ್ನು ಕಟ್ಟ ಬೇಕಾಗುತ್ತಿತ್ತು. ಕಲಾವಿದರಾದವರು ಮಾಲಿಕರಾದಾಗ ದೊಡ್ಡ ಸಮಸ್ಯೆ ಎಲ್ಲಿಯಾದರೂ ಸಾಲ ಮಾಡಿನೇ ಪ್ರಾರಂಭಿಸಬೇಕು. ನಾಟಕ ಪ್ರಾರಂಭವಾದೊಡನೆ ಸಾಲಗಾರರು ದುಂಬಾಲು ಬೀಳುತ್ತಾರೆ ಸಾಲಗಾರರನ್ನು, ಕಲಾವಿದರನ್ನು, ನಿಭಾಯಿಸುತ್ತ ವ್ಯವಹಾರ ನೋಡಿಕೊಳ್ಳತ್ತ ಮತ್ತೆ ರಾತ್ರಿ ಪಾತ್ರ ಮಾಡಬೇಕು ಅನೇಕ ದೊಡ್ಡ ದೊಡ್ಡ ನಟರು ಕಂಪನಿ ಮಾಡಿ ಕೈಸುಟ್ಟು ಕೊಂಡಿದ್ದು ಹಲವಾರು ನಿದರ್ಶನಗಳಿವೆ. ಶ್ರೀಧರ ಅವರು ಮಾಲಿಕರಾಗಿದ್ದು ಮತ್ತೆ ನಟರಾಗಿ ಕೆಲಸ ಮಾಡುವುದು ಬೇಜಾರೆನಿಸಿದ್ದರೂ ಅನಿವಾರ್ಯವಾಗಿತ್ತು. ಈ ಕ್ಷೇತ್ರದಲ್ಲಿ ಯಾವಾಗ ಮಾಲಿಕರಾಗಿ ಕಾರಿನಲಿ ತಿರುಗಾಡುತ್ತಾರೋ ಯಾವಾಗ ಎರಡು ಹೊತ್ತು ಊಟಕ್ಕೂ ತೊಂದರೆಯಾಗಿ ರಂಗಭೂಮಿಯಲ್ಲೊ, ಬಸ್ ನಿಲ್ದಾಣದಲ್ಲೊ ಕಾಲಕಳೆಯುತ್ತಾರೋ ಹೇಳಲಾಗದು.

ಗುರುಗಳಾದ ಶಂಕರಯ್ಯ ಕಡಪಟ್ಟಿಯವರು ಆರೋಗ್ಯ ಸುಧಾರಿಸಿದ ಮೇಲೆ ಅವರ ಕುಟುಂಬ ಸದಸ್ಯರೆಲ್ಲ ಒಂದಾಗಿ ಅವಿರಗೆ ಮತ್ತೆ ಕಂಪನಿ ಪ್ರಾರಂಭಿಸಿಕೊಟ್ಟರು ಶಂಕರಯ್ಯ ನವರು ಮಾಲಿಕರಾಗಿದ್ದರೂ ಅವರ ಎರಡನೇ ಮಗ ರಾಜು ಆಡಳಿತ ನಡೆಸುತ್ತಿದ್ದರು ಶೀಧರ ಅವರು ಅಲ್ಲಿ ಕಲಾವಿದರಾಗಿ ಪ್ರವೇಶ ಪಡೆದು ಸೇವೆಸಲ್ಲಿಸುವುದು ಖುಷಿತಂದಿತು.

ರಾಜು ಕಡಪಟ್ಟಿಯವರ ಆಡಳಿತ ದರ್ಪ, ದೌರ್ಜನ್ಯದಲ್ಲಿ ಸಾಗಿದ್ದರಿಂದ ಕಲಾವಿದರು ಉಳಿಯುವುದೇ ಕಷ್ಟವಾಗಿತ್ತು ೧೯೮೦ ಜೂನ್ ತಿಂಗಳಲ್ಲಿ ಗುರುಕೃಪಾ ನಾಟಕ ಸಂಘ ಕಂಪನಿ ಬಂದಾಯಿತು. ಅಲ್ಲಿಂದ ಹೊರಬಂದಾಗ ಲಕ್ಷ್ಮೇಶ್ವರ ಶಿವಯ್ಯನವರು ಜತ್ ಜನರೊಂದಿಗೆ ಪಾಲುದಾರಿಕೆಯಲ್ಲಿ ಕಂಪನಿ ಪ್ರಾರಂಭಿಸುತ್ತಿರುವುದು ತಿಳಿದಾಗ ಶ್ರೀಧರ ಮಹಾರಾಷ್ಟ್ರದ ಜತ್ತದತ್ತ ಪಯಣ ಬೆಳೆಸಿದರು.

ಜತ್ತದ ಸ್ಥಳೀಯ ವ್ಯಕ್ತಿ ಎಂ.ಆರ್ ಬಾಗೇವಾಡಿ ಲಕ್ಷೇಶ್ವರ ಶಿವಯ್ಯ, ಚಿತ್ರನಟಿ ತಾರಾ ಶ್ರೀ ಈ ಮೂವರ ಪಾಲುದಾರಿಕೆಯಲ್ಲಿ ಕಂಪನಿ ಪ್ರಾರಂಭ ಗೊಂಡಿತು. ಆ ಸಂಘದಲ್ಲಿದ್ದವರೆಲ್ಲ ಶ್ರೀಧರ ಅವರಿಗೆ ಅಪರಿಚಿತರು, ಪ್ರಾರಂಭದ ನಾಟಕ "ವರನೋಡಿ ಹೆಣ್ಣು ಕೊಡು" ಅಲ್ಲಿಯ ಕಲಾವಿದರೆಲ್ಲರೂ ಉತ್ತಮ ನಟರೇ ಆಗಿದ್ದರು. ಶಿವಯ್ಯಸ್ವಾಮಿ, ಉಮೇಶ್ ಕುಕನೂರು, ಫಕೀರಪರಪ ವರವಿ ಅನ್ನಪೂರ್ಣಾಸಾಗರ್, ಲೀಲಾಸಾಗರ್, ಚಿತ್ರನಟಿ ತಾರಾಶ್ರೀ, ಮನೋರಂಜನಾ ಪ್ರಮುಖರಾಗಿದ್ದರು.

ಈ ಎಲ್ಲಾ ಕಲಾವಿದರಲ್ಲಿ ಫಕೀರಪ್ಪ ವರವಿ ಅವರ ಅಭಿನಯವನ್ನು ಬಾಗಲಕೋಟೆಯಲ್ಲಿ ಸೂಡಿ ಶೆಟ್ಟರ ಅವರ "ಮಲ್ಲಿಕಾರ್ಜುನ ನಾಟ್ಯ ಸಂಘ" ಕಂಪನಿ ಪ್ರಯೋಗಿಸುತ್ತಿದ್ದ ಮಾಂತೇಶ ಶಾಸ್ತ್ರಿಗಳ "ಹಣೆ ಅಕ್ಕಿ ಕೂಡಿದರೆ ಹಡೆದವರು ಬೇಕಿಲ್ಲ". ನಾಟಕದ ನಾಯಕ ಪಾತ್ರದಲ್ಲಿ ನೋಡಿದ್ದ ಶ್ರೀಧರ ಹೆಗಡೆಯವರಗೆ ಭಾರೀ ಪ್ರಭಾವ ಬೀರಿತ್ತು. ಆವಾಗಲೇ ಫಕೀರಪ್ಪನವರ ಅಭಿಮಾನಿಯಾಗಿದ್ದರು. ಜತ್ತದಲ್ಲಿ ಅವರ ಜೊತೆ ಅಭಿನಯಿಸುವ ಅವಕಾಶ ಬಂದಿದ್ದುಕ್ಕೆ ಹೆಮ್ಮೆ ಪಟ್ಟು ಕೊಂಡರು ಇಂದಿಗೂ ಪಕೀರಪ್ಪ ವರವಿ ಅವರ ಬಗ್ಗೆ ಅದೇ ಗೌರವ ಅದೇ ಪೂಜ್ಯ ಭಾವನೆ ಹೊಂದಿದ್ದಾರೆ ಅವರ ಅಭಿನಯದ ಬಗ್ಗೆ, ಅವರ ರಂಗ ಅನುಭವದ ಬಗ್ಗೆ ಹೆಮ್ಮೆಯಿಂದ ಹೇಳುತ್ತಾರೆ, ಪ್ರಸಂಶಿಸುತ್ತಾರೆ. ಜತ್ತ ಕಂಪನಿಯಲ್ಲಿ ಫಕೀರಪ್ಪನವರು ಹಾಸ್ಯ ಪಾತ್ರದಲ್ಲಿ ಕಂಡರೆ ಶ್ರೀಧರ ನಾಯಕ ಪಾತ್ರಗಳಲ್ಲಿ ಕಾಣತೊಡಗಿದರು. ಅಲ್ಲಿಯ ಪ್ರೇಕ್ಷಕರಲ್ಲಿ ಇಬ್ಬರೂ ಆಕರ್ಷಸಿ ಪ್ರಭಾವಿ ಕಲಾವಿದರಾದರು. ಫಕೀರಪ್ಪನವರನ್ನೂ ಗುರು ಸ್ಥಾನದಲ್ಲಿ ಕಂಡ ಶ್ರೀಧರ ಅವರಿಂದ ಕಲಿತಿದ್ದು ಬಹಳಷ್ಟು. ಸಮಯ ಸಿಕ್ಕಾಗಲೆಲ್ಲ ಅವರ ಅನುಭವದ ಮಾತುಗಳನ್ನು ಕೇಳುತ್ತ, ರಂಗಭೂಮಿ ಸಾಹಿತ್ಯ, ಸಾಹಿತಿಗಳ ಬಗ್ಗೆ ಅವರಿಂದ ತಿಳಿದುಕೊಳ್ಳುತ್ತಿದ್ದರು. ಆಗ ಅವರಿಂದ ಕಲಿತಿದ್ದು ಬಹಳಷ್ಟು ,ಆ ಸ್ನೇಹ, ಆ ಗೌರವ ಇಂದಿಗೂ ಹಾಗೇ ಉಳಿದು ಕೊಂಡು ಬಂದಿದೆ.

ಜತ್ತದಲ್ಲಿ ನಾಟಕಗಳು ಯಶಸ್ವಿಯಾಗಿನೇ ಪ್ರಯೋಗಗೊಳ್ಳ ಹತ್ತಿದವು. ಕಲೆಕ್ಷನ್ ಚೆನ್ನಾಗಿತ್ತು. ಸಂಪತ್ತಿಗೆ ಸವಾಲು, ಮಲಮಗಳು, ವರನೋಡಿ ಹೆಣ್ಣು ಕೊಡು ನಾಟಕಗಳು ಪ್ರಮುಖವಾಗಿ ಪ್ರಯೋಗಗೊಂಡವು. ಶ್ರೀಧರ ಹೆಗಡೆ ಆಗ ವಿಜಯಪುರದಲ್ಲಿ ನಡೆಯುತ್ತಿದ್ದ ಆಂಧ್ರ-ಕರ್ನಾಟಕ ರಣಜಿ ಟ್ರೋಫಿ ಪಂದ್ಯ ನೋಡಲು ಬೆಳಗ್ಗೆ ಹೋಗಿ ಸಂಜೆಗೆ ಬರುತ್ತಿದ್ದರು. ಕೊನೆಯ ದಿನ ಪಂದ್ಯ ಮುಗಿಸಿಕೊಂಡು ಸೊಲ್ಲಾಪುರಕ್ಕೆ ಬಂದಾಗ ಆಶ್ಚರ್ಯ ಕಾದಿತ್ತು, ನಾಟಕ ಬಂದಾಗಿತ್ತು. ಕಾರಣ ಕಲಾವಿದರು ಹೇಳದೇ ಕೇಳದೇ ಹೋಗಿಬಿಟ್ಟಿದ್ದರು. ಅಷ್ಟರಲ್ಲಿ ಮಾಲಿಕರಲ್ಲಿಯೂ ಬಿನ್ನಾಭಿಪ್ರಾಯ ಬಂದು ಕಂಪನಿ ಬಂದು ಮಾಡಲು ನಿರ್ಧರಿಸಿ ಬಂದು ಮಾಡಿದ್ದರು.

ಕಂಪನಿಯ ಮಾಲಿಕರಲ್ಲೊಬ್ಬರು ಹೆಗಡೆಯವರ ಜೊತೆ ಚರ್ಚೆಗಿಳಿದಾಗ ಮಾತಿಗೆ ಮಾತು ಬೆಳೆದು ಅದೇ ಊರಲ್ಲಿ ಕಂಪನಿ ಪ್ರಾರಂಭಿಸಿ ನಾಟಕ ಆಡುವುದಾಗಿ ಶ್ರೀಧರ್ ಅವರು ಚಾಲೇಂಜ್ ಮಾಡಿದರು. ಆಗ ಶ್ರೀಧರ ಅವರಲ್ಲಿ ಇದ್ದುದು ಕೇವಲ ೨೫ ರೂ.ಗಳು ಮಾತ್ರ.

ಹಿರಿಯ ನಟರೂ, ನಿರ್ದೇಶಕರೂ ಆಗಿದ್ದ ಫಕೀರಪ್ಪ ವರವಿ ಅವರು ಕಂಪನಿ ಬಂದಾಗಿದ್ದರೂ ಇನ್ನೂ ಅಲ್ಲೇ ಉಳಿದಿದ್ದರು. ಶ್ರೀಧರ ಹೆಗಡೆಯವರು ಫಕೀರಪ್ಪನವರಲ್ಲಿ ಹೋಗಿ ನಾವಿಬ್ಬರೂ ಕೂಡಿ ಇಲ್ಲಿಯೇ ಕಂಪನಿ ಪ್ರಾರಂಭಿಸೋಣ ಎಂದಾಗ ಫಕೀರಪ್ಪ ನವರೂ ಒಪ್ಪದರು. ಶ್ರೀಧರ ಹೆಗಡೆಯವರು ಅದೇ ಊರಲ್ಲಿ ಪರಿಚತರಿದ್ದವರಲ್ಲಿ ೮-೧೦ ಸಾವಿರ ರೂಪಾಯಿಗಳನ್ನು ಸಾಲ ಪಡೆದು ವಿಜಯಪುರಕ್ಕೆ ಹೋಗಿ ದಿನಕ್ಕೆ ರೂ.೧೧೦ ರಂತೆ ಬಾಡಿಗೆ ಸಾಮಾನುಗಳನ್ನು ಮುಗಿಸಿದರು. ಸೊಲ್ಲಾಪೂರದಲ್ಲಿಯ ಪರಿಚಿತರೊಬ್ಬರ ಲಾರಿ ಪ್ರತಿದಿನ ಜತ್‌ಗೆ ಹೋಗಿ ಬರುತ್ತಿತ್ತು. ಶ್ರೀಧರ ಅವರು ವಿಷಯವನ್ನೆಲ್ಲ ತಿಳಿಸಿದಾಗ ಲಾರಿ ಮಾಲಿಕರು ಫ್ರೀಯಾಗಿ ಸಾಮಾನುಗಳನ್ನು ಹಾಕಿಕೊಂಡು ಹೋಗಿ ಜತ್ತದಲ್ಲಿ ಅನ್‌ಲೋಡ ಮಾಡಿ ಬಂದರು. ಥೇಟರ ಹಾಕಿಸುವ ಕೆಲಸ ಶ್ರೀಧರ ಅವರದಾಗಿದ್ದರೆ ಕಲಾವಿದರನ್ನೆಲ್ಲ ಬುಕ್ ಮಾಡಿ ಕರೆತಂದು ಪ್ರ್ಯಾಕ್ಟಿಸ ಹಚ್ಚಿ ಪ್ರಯೋಗಕ್ಕೆ ಸಿದ್ಧಗೊಳಿಸುವುದು ಫಕೀರಪ್ಪನವರ ಜವಾಬ್ದಾರಿಯಾಗಿತ್ತು. ತಕ್ಕಮಟ್ಟಿಗೆ ಪ್ರಚಾರ ಮಾಡಿಯೂ ಆಯಿತು.

ಬಟ್ಟೆ ಥೇಟರ ಪ್ರಯೋಗಕ್ಕೆ ಸಿದ್ಧಗೊಂಡಿತು. ಇದ್ದ ಅನುಕೂಲತೆಗಳಲ್ಲಿಯೇ ದಿನಾಂಕ ೧೩-೧೨-೧೯೮೦ ರಂದು **"ಶ್ರೀ ರಾಘವೇಂದ್ರ ವಿಜಯ ನಾಟ್ಯ ಸಂಘ"** ಜತ್ ಎನ್ನುವ ಹೆಸರಿನಲ್ಲಿ ಫಕೀರಪ್ಪ ವರವಿ, ಶ್ರೀಧರ ಹೆಗಡೆಯವರ ಮಾಲಿಕತ್ವದಲ್ಲಿ "ಬಸ್ ಕಂಡೆಕ್ಟರ" ನಾಟಕದಿಂದ ಕಂಪನಿ ಪ್ರಾರಂಭಗೊಂಡಿತು.

ಕಂಪನಿಯ ಪ್ರಾರಂಭದ ಕಲಾವಿದರೆಂದರೆ ಶ್ರೀಧರ ಹೆಗಡೆ (ಮಾಲಿಕರು) ಫಕೀರಪ್ಪ ವರವಿ (ಮಾಲಿಕರು) ಬಸವರಾಜ ಹಾವೇರಿ, ಗುರುಲಿಂಗಯ್ಯ ತಾಳಿಕೋಟಿ, ಜನ್ನತ್ ಬಾಗಲೋಟಿ, ಹೇಮಾ ಹುಬ್ಬಳ್ಳಿ, ಪ್ರೇಮಾ, ಕಮಲಾ ವಿಜಾಪೂರ ಪ್ರಮುಖರಾಗಿದ್ದರು. ಸಂಗೀತ ಕಲಾವಿದರಾಗಿ ಅಶೋಕ ಹಿರೇಮಠ, ಅಶೋಕ ಸಂಸತದ.

ಸುಮಾರು ಒಂದು ತಿಂಗಳ ಅವಧಿಯಲ್ಲಿ ಬಸ್ ಕಂಡೆಕ್ಟರ್ , ಚಿನ್ನದ ಗೊಂಬೆ ನಾಟಕಗಳನ್ನು ಜತ್‌ದಲ್ಲಿ ಪ್ರಯೋಗಿಸಿ ಎರಡೂ ನಾಟಕಗಳನ್ನು ಸಂಪೂರ್ಣ ಸಿದ್ಧಗೊಳಿಸಿಕೊಂಡು ಕಂಪನಿ ಮುಂದಿನ ಕ್ಯಾಂಪಿಗಾಗಿ ಸೊಲ್ಲಾಪುರದತ್ತ ಸಾಗಿತು. ಅಷ್ಟೊತ್ತಿಗೆ ಸ್ವಲ್ಪ ಆರ್ಥಿಕವಾಗಿ ಸುಧಾರಿಸಿಕೊಂಡಿತ್ತಾಗಿದ್ದರೂ ಜಿಲ್ಲಾ ಸ್ಥಳದಲ್ಲಿ ಆಗಬೇಕಾದಷ್ಟು ಥೇಟರ ಆಗಲಿಲ್ಲ. ಅಲ್ಲಿಯೂ ಬಟ್ಟೆ ಥೇಟರ ಇದ್ದುದರಲ್ಲಿಯೇ ಅಚ್ಚುಕಟ್ಟಾಗಿ ಸಿದ್ದಗೊಂಡಿತು. ಹಿಂದೆ ಅಲ್ಲಿ ಸುಳ್ಯದ ದೇಸಾಯಿಯ ಕಂಪನಿಯು ಅದ್ದೂರಿಯಾಗಿ ಮೆರೆದು ಹೋದದ್ದು ಜನರ ಮನಸ್ಸಿನಲ್ಲಿ ಇನ್ನೂ ಮಾಸಿರಲಿಲ್ಲ.

ದಿನಾಂಕ ೨-೨-೧೯೮೧ ರಂದು ಸೊಲ್ಲಾಪುರ ಸ್ಥಳದಲ್ಲಿ ಆಗಿನ ಶಾಸಕರಾಗಿದ್ದ ಬಾಬುರಾವ್ ಚಾಕೋತೆ ಹಾಗೂ ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿಗಳ ಉಪಸ್ಥಿತಿಯಲ್ಲಿ ಕಂಪನಿ ಪ್ರಾರಂಭಗೊಂಡಿತು. ಪ್ರಾರಂಭದಲ್ಲಿಯೇ **ಚಿನ್ನದ ಗೊಂಬೆ** ನಾಟಕ ಯಶಸ್ವಿ ಪಡೆದು ಜನಮನ ಸೆಳೆಯಿತು. ಸೊಲ್ಲಾಪೂರ ಜನಮದಲ್ಲಿ ನಾಟಕ ಉಳಿಯಿತು ದಿನದಿಂದ ದಿನಕ್ಕೆ ಪ್ರೇಕ್ಷಕರು ಹೆಚ್ಚುತ್ತಲೇ ಹೋದರು. ಫಕೀರಪ್ಪನವರ ಹಾಸ್ಯ ಪಾತ್ರ, ಶ್ರೀಧರ ಹೆಗಡೆಯವರ ನಾಯಕ ಪಾತ್ರ ಪ್ರೇಕ್ಷಕರನ್ನು ಆಕರ್ಷಿಸಿದವು. ಬೇಸರದ ಸಂಗತಿಯೆಂದರೆ ನಾಟಕ ಮಧ್ಯದಲ್ಲಿ ಯಾವಾಗಾದರೊಮ್ಮೆ ವಿದ್ಯುತ್ ಸರಬರಾಜು ನಿಂತು ಹೋಗುವುದು, ಜನರೇಟರ ಇರದ ಕಾರಣ ಗ್ಯಾಸ ಹಚ್ಚಿ ಪ್ರಯೋಗಿಸುತ್ತಿದುದು ಅನಿವಾರ್ಯವಾಗಿತ್ತು. ಈ ಆಧುನಿಕ ದಿನಮಾನಗಳಲ್ಲಿಯೂ ಜನರು ಗ್ಯಾಸ್ ಬೆಳಿನಲ್ಲಿಯೇ ನಾಟಕ ನೋಡುತ್ತಿದ್ದುದು ಆಶ್ಚರ್ಯ ಸಂಗತಿಯಾಗಿತ್ತು.

ನಾಟಕ ದಿನದಿಂದ ದಿನಕ್ಕೆ ಯಶಸ್ಸು ಪಡೆಯುತ್ತ ಪ್ರತಿದಿನ ಹೌಸಫುಲ್ ಆಗಿನೇ ಸಾಗುತ್ತಿತ್ತು. ರವಿವಾರ ಮಾತ್ರ ಎರಡು ನಾಟಕಗಳು ೬-೩೦ ನಂತರ ದಿನ ನಿತ್ಯದಂತೆ ೧೦-೩೦ಕ್ಕೆ. ಪ್ರಾರಂಭದ ನಾಟಕನೇ ಸುಮಾರು ಎರಡೂವರೆ ತಿಂಗಳು ಪ್ರಯೋಗಗೊಂಡಿತು. "ದಾರಿ ದೀಪ" ಎರಡನೇ ನಾಟಕವಂತೂ ಪ್ರಾರಂಭ ದಿನದಿಂದಲೇ ಹೌಸ ಫುಲ್ಲಾಗಿ ನಡೆಯಿತು. ಟಿಕೆಟ್ ಸಿಗದೇ ಕೆಲವು

ಜನರು ನಿರಾಶೆಯಿಂದ ಮರಳುತ್ತಿದ್ದರು. ಕಲೆಕ್ಷನ್ ಆದಂತೆ ಅವಶ್ಯ ಸಲಕರಣೆಗಳು ಖರೀದಿಯಾಗುತ್ತ ಕಂಪನಿ ಸುಸಜ್ಜಿತ ಸ್ಥಿತಿಯತ್ತ ಸಾಗಿತು. ೧೦೦ ಪ್ರಯೋಗವಾದಾಗ ಯಶಸ್ವಿ ಕಾರ್ಯಕ್ರಮ ಜರುಗಿ ೧೫೦ರ ಕಾರ್ಯಕ್ರಮದ ಸಿದ್ಧತೆಯತ್ತ ಸಾಗಿತು. ಕಂಪನಿಯ ಕಲಾವಿದರು, ಕೆಲಸಗಾರರು ಸೇರಿ ಸುಮಾರು ೬೦-೭೦ ಜನರಿದ್ದರು. ಎರಡು ಕಂಪನಿಗಿರುವಷ್ಟು ಜನರಿದ್ದರು. ಕೆಲಸಗಾರರಂತೆ ಕಲಾವಿದರೂ ಹೆಚ್ಚಾಗಿದ್ದರು, ಹೀಗಾಗಿ ಎಲ್ಲರಿಗೂ ಅವಕಾಸ ದೊರೆಯಬೇಕೆಂದು ಮಧ್ಯಮಧ್ಯ ಕಲಾವಿದರನ್ನು ಬದಲಿಸಲಾಗುತ್ತಿತ್ತು. ಕಂಪನಿ ಖರ್ಚು ಹೆಚ್ಚುತ್ತಲೇ ಸಾಗಿತು. ಒಂದು ದಿನ ಜಾಗಕೊಟ್ಟ ಕಮೀಟಿ ಅಧ್ಯಕ್ಷರು ಶ್ರೀಧರ ಅವರನ್ನು ಕರೆದು " ತಮ್ಮಾ ಬಾಯಿಲ್ಲಿ ಕಂಪನಿಯಲ್ಲಿ ಎಷ್ಟು ಜನರಿದ್ದಾರೆ?" " ಸುಮಾರು ೬೦-೭೦ ಜನರಿದ್ದಾರೆ ಸರ್", ಇಷ್ಟು ಜನರ ಅವಶ್ಯಕತೆಯಿದೆಯ? ಯೋಚನೆ ಮಾಡು ಅವಶ್ಯಕತೆಗಿಂತ ಹೆಚ್ಚಿನವರನ್ನು ಇಟ್ಟುಕೊಂಡು ಯಾಕೆ ಖರ್ಚಿಗೆ ಮೂಲ ಮಡಿಕೊಳ್ಳುತ್ತೀಯಾ" ಎಂದಾಗ ಶ್ರೀಧರ ಅವರಿಗೆ ಜಾಗ ಕೊಟ್ಟ ಯಜಮಾನರ ಮಾತುಗಳು ಸತ್ಯವೆನಿಸಿದವು. ಎಷ್ಟೋಸಲ ಹತ್ತು ಇಪ್ಪತ್ತು ರೂಪಾಯಿಗಳಿಗೆ ತೊಂದರೆಪಟ್ಟಿದ್ದುಂಟು ಜಾಗ ಬಾಡಿಗೆ ನೀಡಿದ ಸಮಿತಿ ಅಧ್ಯಕ್ಷರ ಮಾತುಗಳು ವ್ಯವಹಾರಿಕವಾಗಿದ್ದವು. ಶ್ರೀಧರ ಅವರಿಗೆ ಇಂದಿಗೂ ವ್ಯವಹಾರ ಬುದ್ಧಿ ಇಲ್ಲವೆಂದೇ ಹೇಳಬಹುದು. ಇಂದಿಗೂ ಒಂದಿಷ್ಟು ಆಪತ್ ಹಣವೆಂದು ಇಟ್ಟುಕೊಳ್ಳಲಾಗಿಲ್ಲ. ಕೌಟಂಬಿಕವಾಗಿ ಚಿಂತಿಸಿದವರಲ್ಲ. ಅಭಿನಯ, ಥೇಟರ, ಕಲಾವಿದರ ಸಂಬಂಧ ಬಿಟ್ಟರೆ ಬೇರೇನೂ ಗೊತ್ತಿಲ್ಲ. ಓದಿಕೊಂಡು ಬುದ್ಧಿವಂತರಾಗಿದ್ದರೂ ವ್ಯವಹಾರ ಜ್ಞಾನವಿಲ್ಲವೆನ್ನುವ ಮಾತು ಸತ್ಯ.

ಸೊಲ್ಲಾಪುರದ ಕ್ಯಾಂಪು ಯಶಸ್ವಿಯಾಗಿನೇ ನಡೆಯಿತು. ಪ್ರಕಾಶ ಕಡಪಟ್ಟಿಯವರ "ಚಿನ್ನದ ಗೊಂಬೆ" ನಂತರ ಸಾಳುಂಕೆಯವರ "ದಾರಿದೀಪ" ನಾಟಕ ಕೂಡ ಹೌಸ್‌ಫುಲ್ಲಾಗಿ ನಡೆಯಿತು. ಶ್ರೀಧರ ಅವರದು ನಾಯಕ ಪಾತ್ರವಾದರೆ ಫಕೀರಪ್ಪನವರದು ಹಾಸ್ಯ ಪಾತ್ರ ಸೊಲ್ಲಾಪೂರ ಸುತ್ತ ಮುತ್ತಲಿನ ಹಳ್ಳಿಗರು ದಿನ ದಿನಕ್ಕೆ ಹೆಚ್ಚಿದರು. ಈ ಇಬ್ಬರೂ ಕಲಾವಿದರ ಅಭಿಮಾನಿ ಬಳಗ ಹೆಚ್ಚಿತು. ನೋಟಿನ ಹಾರ ಹಾಕಿ ಸಂಭ್ರಮಿಸಿದರು. ಶ್ರೀಧರ, ಫಕೀರಪ್ಪನವರಿಗೆ ರಂಗ ಬದುಕು ಸಾರ್ಥಕವೆನಿಸಿತು. ಸೊಲ್ಲಾಪುರ ಕ್ಯಾಂಪು ಈ ಇಬ್ಬರು ಮಾಲಿಕರಿಗೂ ಜೀವನದಲ್ಲಿ ಮರೆಯದ ಕ್ಯಾಂಪು. ಆ ದಿನಗಳನ್ನು ಸ್ಮರಿಸಿಕೊಂಡಾಗ ಇಬ್ಬರೂ ಪುಳಕಿತರಾಗುತ್ತಾರೆ. ನೆನೆದು ಹೃದಯ ತುಂಬಿ ಮಾತನಾಡುತ್ತಾರೆ.

ಈ ಮೊದಲೇ ಜಾಗಕೊಟ್ಟ ಮಾಲಿಕರು ಸೂಚಿಸಿದ್ದ ಸಲಹೆ ಶ್ರೀಧರ್ ಅವರಿಗೆ ಕಾಡಹತ್ತಿತ್ತು. ಸಂಘದಲ್ಲಿ ಕಲಾವಿದರು, ಕೆಲಸಗಾರರು ಹೆಚ್ಚಾಗಿದ್ದಾರೆ.

ಅವರನ್ನು ಹೊರಕಳಿಸುವ ಚಿಂತನೆಯಲ್ಲಿದ್ದಾಗಲೇ ವಿಜಯಪುರದಿಂದ ಬಂದಿದ್ದ ಶರೀಫ ಅವರು ಬ್ರ್ಯಾಂಚ ಕಂಪನಿ ಮಾಡಿಕೊಟ್ಟರೆ ಅವರನ್ನೆಲ್ಲ ಕಟ್ಟಿಕೊಂಡು ಕಂಪನಿ ನಡೆಸುವುದಾಗಿ ಹೇಳಿದರು. ಶ್ರೀಧರ, ಫಕೀರಪ್ಪ ಅವರು ಒಪ್ಪಿಕೊಂಡು ಬ್ರ್ಯಾಂಚ ಕಂಪನಿ ಮಾಡಿ ಶರೀಫ ಅವರಿಗೆ ಒಪ್ಪಿಸಿದರು. ಶರೀಫ ವಿಜಯಪುರದ ರಂಗಕರ್ಮಿ, ನಟ, ಸಂಘಟಿಕ ಎಲ್ಲದಕ್ಕೂ ಹೆಚ್ಚಾಗಿ ಶ್ರೀಧರ ಅವರಿಗೆ ವಿಜಯಪುರದಿಂದ ನಾಟಕ ಸಾಮಾನು ಮುಗಿಸಿಕೊಂಡು ಜತ್ತಗೆ ತರಲು ಸಹಾಯ ಮಾಡಿದ ವ್ಯಕ್ತಿ. ಹೀಗಾಗಿ ಬ್ರ್ಯಾಂಚ್ ಕಂಪನಿ ಮಾಡಿಕೊಡಲು ಹಿಂದೇಟು ಹಾಕಲಿಲ್ಲ.

೧೯೬೨ ಜನೇವರಿ ಕೊನೆಯವಾರದಲ್ಲಿ ಉಮರಗಾ ತಾಲೂಕಿನ ಮುರಮ್ ಎಂಬ ಹೋಬಳಿಯಲ್ಲಿ ಶರೀಫರ ನೇತೃತ್ವದಲ್ಲಿ ಬ್ರ್ಯಾಂಚ್ ಕಂಪನಿ ಪ್ರಾರಂಭಗೊಂಡಿತು. ಬ್ರ್ಯಾಂಚ್ ಕಂಪನಿಯ ಕಲಾವಿದರೆಂದರೆ.

ಸೊಲ್ಲಾಪೂರದಲ್ಲಿ ಹೆಡ್ ಕಂಪನಿ ಯಶಸ್ವಿಯಾಗಿಯೇ ಸಾಗಿತು. ಓಬಳೇಶ್ವರವರು ರಚಿಸಿದ "ಖಾದಿ ಸೀರಿ" ನಾಟಕ ಫಕೀರಪ್ಪ ವರವಿ ಅವರ ನಿರ್ದೇಶನ ಹಾಗೂ ಅದ್ಭುತ ಅಭಿನಯದಿಂದ ಭಾರೀ ಹೆಸರು ಮಾಡಿತು. ಅಂಥ ಯಶಸ್ಸು ಈ ಇಬ್ಬರೂ ಮಾಲಿಕರು ಮುಂದೆಲ್ಲಿಯೂ ಕಾಣಲಿಲ್ಲ. ಪ್ರತಿದಿನ ಕಿಕ್ಕಿರದು ತುಂಬಿದ ರಂಗ ಮಂದಿರದಲ್ಲಿ ಪ್ರಯೋಗಗೊಳ್ಳುತ್ತಿತ್ತು. ರವಿವಾರ ಬಂದಿತೆದರೆ ಕಂಟ್ರೋಲ್ ತಪ್ಪಿ ಹೋಗುತ್ತಿತ್ತು. ಮಹಿಳೆಯರ ಸಂಖ್ಯೆ ಹೆಚ್ಚುತ್ತಲೇ ಸಾಗಿದಾಗ ಒಂದು ನಾಟಕ ಪ್ರತ್ಯೇಕವಾಗಿ ಮಹಿಳೆಯರಿಗಾಗಿನೇ ಪ್ರಯೋಗಗೊಳ್ಳುವಂತೆ ವ್ಯವಸ್ಥೆ ಮಾಡಿದ್ದು ಒಂದು ದಾಖಲೆ.

ಸೊಲ್ಲಾಪುರದಲ್ಲಿ ನಾಟಕ ಯಶಸ್ವಿಯಾಗಿ ಪ್ರಯೋಗಗೊಳ್ಳುತ್ತ ಆ ಭಾಗದಲ್ಲಿ ಕಂಪನಿ ಬಹಳಷ್ಟು ಹೆಸರು ಮಾಡಿ ಸಾಗಿದಾಗಲೇ ಆಘಾತ ಕಾದಿತ್ತು. ಇದ್ದಕ್ಕಿದಂತೆ ಫೆಬ್ರವರಿ ೧೮, ೧೯೬೨ ರಂದು  ಹಿಂದು-ಮುಸ್ಲಿಂ ಜಗಳ ಪ್ರಾರಂಭವಾಗಿ ಕೋಮು ಗಲಭೆಯಿಂದ ದೊಡ್ಡ ಆತಂಕಕ್ಕೆ ಕಾರಣವಾಯಿತು ಸೊಲ್ಲಾಪುರ ಹೊತ್ತಿ ಉರಿಯಿತು. ಲಾಠಿಚಾರ್ಜ ಕರ್ಫ್ಯೂ ಜಾರಿಮಾಯಿತು. ತಿಂಗಳುಗಟ್ಟಲೆ ಕರ್ಫ್ಯೂ ಇದ್ದುದರಿಂದ ಶ್ರೀಧರ ಅವರಿಗೆ ಅಲ್ಲಿಂದ ಕೆಲವು ದಿವಸ ಬೇರಡೆ ಹೋಗಿ ಬರಲು ಚಿಂತಿಸುತ್ತಿದ್ದಾಗ ಅವರಿಗೆ ನೆನಪಾದದ್ದು ಕಲಬುರಗಿ ಶರಣಬಸವೇಸ್ವರ ಜಾತ್ರೆ. ಆದರೆ ಆಗಲೇ ಅಲ್ಲಿ ಅರಿಷಣಗೋಡಿ ಅವರ **"ಹುಚ್ಚೇಶ್ವರ ನಾಟ್ಯ ಸಂಘ"** ಕಂಪನಿ ಕಾರ್ಯನಿರ್ವಹಿಸುತ್ತಿತ್ತು. ಏನೇ ಆಗಲಿ ಹೋದರಾಯಿತೆಂದು ನಿರ್ಧರಿಸಿ ಕಲಬುರಗಿಗೆ ಕಂಪನಿ ತಂದರು.

ದಿನಾಂಕ: ಫೆಬ್ರವರಿ ೧೯೬೭ ರಂದು ಕಲಬುರಗಿ ಕ್ಯಾಂಪು ಪ್ರಾರಂಭವಾಯಿತು. ಅಲ್ಲಿಯೂ ಪ್ರಪ್ರಥಮ "ಚಿನ್ನದ ಗೊಂಬೆ" ನಾಟಕ ಪ್ರಯೋಗಗೊಳ್ಳುತ್ತ ಸಾಗಿತು. ಕಲೆಕ್ಷನ್ ಅಷ್ಟಕಷ್ಟ ಹೇಗೋ ಒಂದು ತಿಂಗಳು ಕಳೆದು ಮತ್ತೆ ಮರಳಿ ಕಂಪನಿ ಸೊಲ್ಲಾಪರಕ್ಕೆ ಬಂದಿತು. ಆ ದಿನಗಳಲ್ಲಿ ಈಗಿನಂತೆ ೩-೩೦ಕ್ಕೆ ಪ್ರಾರಂಭವಾಗುತ್ತಿರಲಿಲ್ಲ. ರಾತ್ರಿ ೧೦-೩೦ ಕ್ಕೆ ಜನರು ಆವಾಗಲೇ ಬರುವುದು. ಕಂಪನಿ ಮೊದಲಿನಷ್ಟು ಯಶಸ್ಸು ಕಾಣಲಿಲ್ಲ. ಇನ್ನೂ ಗಲಭೆಯ ಭಯದ ವಾತಾವರಣವಿತ್ತು. ಜನರು ರಾತ್ರಿ ತಿರುಗಾಡುವುದು ಕಡಿಮೆಯಾಗಿತ್ತು. ಅಷ್ಟೊತ್ತಿಗಾಗಲೇ ಬ್ರಾಂಚ್ ಕಂಪನಿ ರೂ. ೭೦,೦೦೦/- ಹಾನಿ ಅನುಭವಿಸಿ ಬಂದಾಗಿತ್ತು.

ಸೊಲ್ಲಾಪುರದಲ್ಲಿ ಕ್ಯಾಂಪು ಕ್ಲೋಜ್ ಮಾಡುವುದು ಅನಿವಾರ್ಯವೆಂದಾಗ ಶ್ರೀಧರ ಅವರಿಗೆ ಹೊಳೆದಿದ್ದು, ಬೀದರ ಕ್ಯಾಂಪು. ಅಷ್ಟೊತ್ತಿಗೆ ತಗಡಗಳನ್ನು ಬಿಟ್ಟು ಹೆಚ್ಚು ಕಡಿಮೆ ಎಲ್ಲಾ ಸ್ವತಂತ್ರ ಸಲಕರಣೆಗಳಾಗಿದ್ದವು. ಬೀದರ ಕ್ಯಾಂಪಿನಲ್ಲಿ ಭದ್ರತೆಯ ದೊಡ್ಡ ಥೇಟರ ಹಾಕಬೇಕೆನ್ನುವುದೇ ಹೆಗಡೆಯವ ವಿಚಾರವಾಗಿತ್ತು. ಕ್ಯಾಂಪು ಒಂದಡೆಯಿಂದ ಮತ್ತೊಂದಡೆ ಸಾಗಿಸುವುದು ಹೊಸ ಕ್ಯಾಂಪಿನಲ್ಲಿ ಲೈಸನ್ಸ; ಪ್ರಚಾರ ಹೀಗೆ ಖರ್ಚಿನ ಮಾತಾಗಿದ್ದರಿಂದ ಅಷ್ಟೊತ್ತಿಗಾಗಲೇ ಬ್ರಾಂಚ ಕಂಪನಿ ಬಂದಾಗಿ ರೂ. ೭೦,೦೦೦/- ಸಾಲದ ಹೊರೆ ಬೇರೆ. ತಗಡುಗಳನ್ನು ಕೊಳ್ಳಲು ಹಣವಿಲ್ಲದಾಗ ಅಲ್ಲಿಯ ವ್ಯಾಪರಿಗಳನ್ನು ಉದ್ದರಿ ಕೇಳಬೇಕೆಂದು ಯೋಚಿಸಿ ಥೇಟರ ಪಕ್ಕದಲ್ಲಿ ಕಲ್ಯಾಣಮಂಟಪ ಕಟ್ಟಿಸುತ್ತಿದ್ದ ಲಿಂಗಶೆಟ್ಟಿಯವರ ಪರಿಚಯವಿತ್ತು. ಅವರ ಹತ್ತಿರ ಹೋಗಿ ತಮ್ಮ ಸ್ಥಿತಿಯನ್ನೆಲ್ಲ ಹೇಳಿದರು ಲಿಂಗಶೆಟ್ಟಿಯವರು ಉದಾರಿಗಳು, ರಂಗಾಸಕ್ತರು, ಕಲಾಭಿಮಾನಿಗಳು ಅಲ್ಲದೆ ಹೆಗಡೆಯವರಿಗೆ ತುಂಬ ಪರಿಚಿತರು ಇಲ್ಲವೆನ್ನಲಿಲ್ಲ.

ಮಾರನೆಯ ದಿನ ಬೆಳಗ್ಗೆನೇ ನಾಲ್ಕುನೂರು ತಗಡುಗಳು ಥೇಟರ ಹತ್ತಿರ ಲಿಂಗಶೆಟ್ಟಿಯವರ ಜನರು ತಂದಿಳಿಸಿದರು. ಶ್ರೀಧರ ಅವರಿಗೆ ಅಚ್ಚರಿಕಾದಿತ್ತು. ಎಲ್ಲವೂ ಅನಿರೀಕ್ಷಿತಯವಾಗಿತ್ತು. ಹತ್ತು ಹನ್ನೊಂದು ಗಂಟೆಗೆ ಹೋಗಿ ತಗಡು ಕಳಿಸಿದ ಲಿಂಗಶೆಟ್ಟಿಯವರಿಗೆ ಭೇಟಿಯಾಗಿ ಕೆಲವೇ ದಿನಗಳಲ್ಲಿ ಹಣ ಕಳಿಸುವುದಾಗಿ ಹೇಳಿದಾಗ ಲಿಂಗಶೆಟ್ಟಿಯವರಿಂದ ಆಶ್ಚರ್ಯ ಅಷ್ಟೇ ಸಂತೋಷದ ಮಾತು ಹೊರಬಂದಾಗ ಶ್ರೀಧರ ಅವರಿಗೆ ನಂಬಲಾಗಲಿಲ್ಲ "ಹೆಗಡೆಯವರೆ ನೀವು ಹಣಕಳಿಸುವ ಅವಶ್ಯಕತೆಯಿಲ್ಲ ಈ ತಗಡುಗಳು ನಿಮ್ಮ ಸಂಘಕ್ಕೆ ನಮ್ಮ ಕಾಣಿಕೆ" ಈ ಮಾತು ಕೇಳಿದಾಗ ಶ್ರೀಧರ ಅವರಿಗೆ ಹೃದಯ ತುಂಬಿಬಂದು ಮಾತೇ ಹೊರಡಲಿಲ್ಲ. ಹೃದಯ ತುಂಬಿ ಮನಸಾರೆ ಅವರ ಉಪಕಾರ ಸ್ಮರಿಸಿ ಹೊರಟರು.

ದಾರಿಗುಂಟ ಲಿಂಗಶೆಟ್ಟಿರವರನ್ನೇ ನೆನಪಿಸಿಕೊಳ್ಳುತ್ತ ಸಾಗಿದಾಗ ಲಿಂಗಶೆಟ್ಟಿ ಕೊಡುವುದರ ಮೂಲಕ ತಮ್ಮ ಬೆಲೆ ಹೆಚ್ಚಿ ಕೊಂಡಿದ್ದಾರೆನಿಸಿತು. ಇಂಥ ಮಹಾನ್ ವ್ಯಕ್ತಿಗಳಿಂದಲೇ ಇನ್ನೂ ಕಲೆ, ಸಾಹಿತ್ಯ, ಸಂಗೀತ ಉಳಿದಿರುವುದೆನಿಸಿತು. ಯಾವ ನಿರೀಕ್ಷೆಯನ್ನಿಟ್ಟುಕೊಳ್ಳದೇ ಕೊಟ್ಟಿದ್ದು ಬಹುದೊಡ್ಡ ಗುಣ ದೊಡ್ಡ ಮನಸ್ಸು.

ಈ ದೇಶದಲ್ಲಿ ಸಾಕಷ್ಟು ಜನರು ಶ್ರೀಮಂತರಿದ್ದಾರೆ ಕೊಡುವ ಮನಸ್ಸು ಎಷ್ಟು ಜನಕ್ಕಿರುತ್ತೆ ಹೇಳಿ? ಕೊಡುವುದರಿಂದ ಇನ್ನೂ ಹೆಚ್ಚು ಶ್ರೀಮಂತರಾಗುತ್ತಾರಂತೆ ಕೊಟ್ಟವರ ಲೆಕ್ಕವಿಟ್ಟು ದೇವರು ಅದನ್ನು ಅಧಿಕಮಾಡಿ ಮರಳಿ ಕೊಡುತ್ತಾನೆಂದು ಹೇಳುತ್ತಾರೆ ಲಿಂಗಶೆಟ್ಟಿಯವರು ಶ್ರೀಧರ ಅವರ ಹೃದಯದಲ್ಲಿ, ಮನದಲ್ಲಿ ಇಂದಿಗೂ ಉಳಿದಿದ್ದಾರೆ. ಕೊಡುವುದರ ಮೂಲಕ ಜೀವನದ ಶ್ರೇಷ್ಠತೆ ಪಡೆದ ಲಿಂಗಶೆಟ್ಟಿ – ಇಂದಿಗೂ ನೆನಪಿನಲ್ಲಿದ್ದಾರೆ.

ಫಕೀರಪ್ಪ, ಹಾಗೂ ಶ್ರೀಧರ ಮಾಲಿಕರೀರ್ವರ **"ಶ್ರೀ ರಾಘವೇಂದ್ರ ನಾಟ್ಯ ಸಂಘ"** ಬೀದರ ನಗರದಲ್ಲಿ ನಾಂದಿ ಹಾಡಿತು. ಜೂನ್ ೨೮,೧೯೮೨ ರಂದು **" ಚಿನ್ನದ ಗೊಂಬೆ"** ನಾಟಕದಿಂದ ಪ್ರಾರಂಭಗೊಂಡಿತು. ಕ್ಯಾಂಪು ಚೆನ್ನಾಗಿನೇ ಸಾಗಿತು. ಸಣ್ಣ ಪುಟ್ಟ ಸಮಸ್ಯೆಗಳಲ್ಲಿಯೇ ಕ್ಯಾಂಪು ವರ್ಷದತ್ತ ಸಾಗಿಬಂದು ನಿಧಾನ ಕಲೆಕ್ಷನ್ ಕಡಿಮೆಯಾಗುತ್ತ ಸಾಗಿದಾಗಲೇ ಶ್ರೀಧರ ಅವರು ಮುಂದಿನ ಕ್ಯಾಂಪಿಗಾಗಿ ಯೋಚಿಸುತ್ತ ಬಸವಕಲ್ಯಾಣ ಮಾಡಬೇಕೆಂದು ಯೋಚಿಸಿ ಒಂದು ದಿನ ಅಲ್ಲಿಯ ಜನರನ್ನು ವಿಚಾರಸಿ ಸ್ಥಳ ನೋಡಿಕೊಂಡು ಬಂದಾಯಿತೆಂದು ಹೋದರು. ಶ್ರೀಧರ ಅವರಿಗೆ ಅಲ್ಲಿ ನಿರಾಶೆ ಕಾದಿತ್ತು ಅಲ್ಲಿಯ ಜನರು ಹೇಳಿದ್ದು...

"ಇಲ್ಲಿ ನಾಟಕ ನಡಿಯೋದಿಲ್ಲ ಕನ್ನಡ ಅಷ್ಟೊಂದು ಪ್ರಚಲಿತವಿಲ್ಲ ಹಿಂದಿ, ಮರಾಠಿ ಮಾತ್ರ, ಇಲ್ಲಿರುವ ಎರಡು ಸಿನಿಮಾ ಥೇಟರ ಕನ್ನಡ ಸಿನಿಮಾ ಎಂದೂ ತರಿಸೋ ಮನಸ್ಸು ಮಾಡಿಲ್ಲ" ಈ ಮಾತುಗಳನ್ನು ಕೇಳಿ ಶ್ರೀಧರ ಅರಿಗೆ ಬೇಜಾರಾಯಿತು. ಏನೇ ಆಗಲಿ ಮತ್ತೊಂದೊಡೆ ವಿಚಾರಿಸಿದರಾಯಿತೆಂದು ಹೋದಾಗ ಅಂಗಡಿಯವರು ಕೂಡ ಹೇಳಿದರು. ಕುಳಿತು "ನಾಟಕ ಕಂಪನಿ ಇಲ್ಲಿ ತಂದರೆ ನಡೆಯುತ್ತಾ" ಎಂದಾಗ ಆವ್ಯಕ್ತಿ "ನೀವು ಕುಳಿತಿರುವ ಖುರ್ಚಿ ನಾಟಕ ಕಂಪನಿಯವರದು ನಾಟಕ ನಡಿಲಾರದಕ್ಕೆ ಸಾಲ ಮಾಡಿ ನಮ್ಮಲ್ಲಿ ಒತ್ತೆ ಇಟ್ಟು ಹೋಗಿದ್ದಾರೆ. ಎಂದಾಗ ಶ್ರೀಧರ ಅವರಿಗೆ ಇನ್ನು ಬೇಜಾರಾಯಿತು. ನಿರಾಶೆಯಲ್ಲಿ ಹೊರಬಂದಾಗ ಶ್ರೀಧರ ಅವರಿಗೆ ನೆನಪಾದದ್ದು ಬಸವಕಲ್ಯಾಣದಲ್ಲಿದ್ದ ಪಿ.ಎಸ್.ಐ ಶಂಕರರಾವ್ ಅವರನ್ನಿಷ್ಟು ಭೇಟಿಮಾಡಿ ಹೊರಟರಾಯಿತೆಂದು ಪೊಲೀಸ ಸ್ಟೇಷನ್ನಿಗೆ ಬಂದಾಗ ಶಂಕರರಾವ್ ಉಪಸಿಥಿತರಿದ್ದುದು ಖುಷಿಕೊಟ್ಟಿತು

ಉಭಯಕುಶಲೋಪರಿ ಆದ ನಂತರ ಶ್ರೀಧರ ತಮ್ಮ ಮನದಾಳದ ಮಾತುಗಳನ್ನು ಹೇಳಿದಾಗ ಶಂಕರರಾವ್ ಕಂಪನಿ ತನ್ನಿ ನೋಡೋಣ ಎನ್ನುವ ಧೈರ್ಯದ ಮಾತು ಮತ್ತೆ ಬಸವಕಲ್ಯಾಣ ಬಾಡಿಗೆ ಕ್ಯಾಂಪಿನ ಆಶೆಯನ್ನು ಚಿಗುರಿಸಿತು. ಬೀದರ ಥೇಟರ ಅಲ್ಲಿಯೇ ಬಿಟ್ಟು ಬಸವಕಲ್ಯಾಣಕ್ಕೆ ಥೇಟರ ಹಾಕಿಸಿದರು. ಅಲ್ಲಿಯ ಜನರ ನಿರಾಶಕ್ತಿ ಕಂಡು ಒಳ ಒಳಗೆ ಶ್ರೀಧರ ಅವರಿಗೆ ಭಯ ಕಾಡುತ್ತಿತ್ತು.

೧೯೮೩ ಏಪ್ರೀಲ್ ತಿಂಗಳಲ್ಲಿ ಕಂಪನಿ ಪ್ರಾರಂಭಗೊಂಡಿತು ನಾಡಿನ ಹೆಸರಾಂತ ಲೇಖಕಿಯರು, ಆದ್ಯಾತ್ಮ ಚಿಂತಕರು ಏಕೀಕರಣದಲ್ಲಿ ಹೋರಾಡಿವರೂ ಆದ ಜಯದೇವಿ ತಾಯಿ ಲಿಗಾಡೆ ಅವರು ದೀಪ ಬೆಳಗಿಸಿ ನಾಟಕ ಉದ್ಘಾಟಿಸಿದರು. ಮೊದ ಮೊದಲು ಆಸಕ್ತಿ ತೋರಿಸದ ಪ್ರೇಕ್ಷಕರು ಹಂತ ಹಂತವಾಗಿ ಹೆಚ್ಚುತ್ತ ಹೋದರು. ಅಲ್ಲಿಯೂ ಪ್ರಾರಂಭದ ನಾಟಕ "ಚಿನ್ನದ ಗೊಂಬೆ" ಯಾಯಿತು. ಅಂತೂ ಕ್ಯಾಂಪು ಯಶಸ್ಸು ಪಡೆಯಿತು. ಮರಾಠಿ, ಹಿಂದಿ ಭಾಷೆಯ ಪ್ರಭಾವದಲ್ಲಿಯೂ ಕನ್ನಡ ನಾಟಕ ಜಯಭೇರಿ ಬಾರಿಸಿತು. ಬಸವಕಲ್ಯಾಣ ಜನರಿಗೆ ನಾಟಕದ ಭಾಷೆ ಪ್ರಭಾವ ಬೀರಿತು ಅವರ ಉರ್ದು, ಮರಾಠಿ ಮಿಶ್ರಿತ ಕನ್ನಡ ಭಾಷೆಗೂ ನಾಟಕದ ಭಾಷೆಗೂ ಭಿನ್ನವಾಗಿತ್ತು. ಏನೇ ಆಗಲಿ ಕ್ನನಡ ನೆಲದಲ್ಲಿ ಕನ್ನಡ ನಾಟಕ, ಕನ್ನಡ ಕಂಪನಿಯನ್ನು ಜನರು ಪ್ರೋತ್ಸಾಹಿಸಿದರು. ಜನರು ಜಾಗವಿಲ್ಲದಾಗ ನಿಂತು ನಾಟಕ ನೋಡಿದರು. ಆ ತುಂಬಿದ ರಂಗ ಮಂದಿರ ನೋಡಿದರೆ ಜಾತ್ರೆ ಕ್ಯಾಂಪು ನೋಡಿದಂತಾಗುತ್ತಿತ್ತು. ಎನ್ನುವ ಶ್ರೀಧರ ಅವರ ಮಾತು ಕೇಳಿದಾಗ ಅಲ್ಲಿಯ ಪ್ರೇಕ್ಷಕರು ನಾಟಕದ ಪ್ರಭಾವಕ್ಕೊಳಗಾಗಿದ್ದು ಸ್ಪಷ್ಟವಾಗುತ್ತಿದೆ. ಒಂದು ದಿನ ಇದ್ದಕ್ಕಿದಂತೆ ಹಾರ್ಮೋನಿಯಂ ಮಾಸ್ತರ ಊರಿಗೆ ಹೋದಾಗ ಸಮಸ್ಯೆಯಾಯಿತು. ನಾಟಕ ಬಂದು ಮಾಡುವ ವಿಚಾರದಲ್ಲಿದ್ದ ಶ್ರೀಧರ ಅವರಿಗೆ ಪ್ರೇಕ್ಷಕರು ಹೇಳಿದ್ದು "ಹಾರ್ಮೋನಿಯಂ ಇಲ್ಲದಿದ್ದರೂ ನಾಟಕ ನೋಡ್ತೀವಿ ಪ್ರಾರಂಭ ಮಾಡ್ರಿ" ಅಂದಾಗ ಶ್ರೀಧರ ಅವಿಗೆ ಆಶ್ಚರ್ಯ. ಎರಡು ದಿನ ಹಾರ್ಮೋನಿಯಂ ಇಲ್ಲದೆ ನಾಟಕವಾಡಿದ್ದು ನಾಡಿನ ನಾಟಕ ಕಂಪನಿಗಳ ಇತಿಹಾಸದಲ್ಲಿಯೇ ಇದೊಂದು ದಾಖಲೆಯಾಗಿರಬೇಕು. ಬಸವಕಲ್ಯಾಣದ ಪ್ರೇಕ್ಷಕರು ನಿರೀಕ್ಷೆ ಮೀರಿ ಪ್ರೋತ್ಸಾಹಿಸಿದರು ಶ್ರೀಧರ ಬದುಕಿನಲ್ಲಿ ಇದು ಕೂಡ ಮರೆಯಲಾರದ ಕ್ಯಾಂಪಾಗಿತ್ತು.

ಬಸವಕಲ್ಯಾಣದಿಂದ ಮುಂದೆ ಮಳೆಗಾಲಕ್ಕಾಗಿ ಕ್ಯಾಂಪು ಹುಡಕಬೇಕಾಗಿತ್ತು ಶ್ರೀಧರ ಅವರಿಗೆ ಕಲಬುರಗಿಯಲ್ಲಿ ಅರಿಷಣ ಗೊಂಡಿಯವರ ಥೇಟರ ಖಾಲಿ ಇದ್ದುದು ತಿಳಿದು ಬಂದಿತು. ಮ್ಯಾನೇಜರನ್ನು ಕಳಿಸಿ ಕಲಬುರಗಿಯ ಥೇಟರ

ಮುಗಿಸಿಕೊಂಡು ಬರಲು ಹೇಳಿದರು. ಮಳೆಗಾಲ ಅಲ್ಲಿಯೇ ಕಳೆಯುವುದೆಂದು ತೀರ್ಮಾನಿಸಿಯಾಗಿತ್ತು ಶ್ರೀಧರ ಹೆಗಡೆಯವರ ಕಂಪನಿಯಲ್ಲಿ ಅವಶ್ಯಗಿಂತ ಹೆಚ್ಚಿನ ಕಲಾವಿದರು ಇದ್ದರೆಂಬುದನ್ನು ತಿಳಿದ ಸುಳ್ಯದ ದೇಸಾಯಿವರು ಶ್ರೀಧರ ಅವರಲ್ಲಿ ಬಂದು ಕೆಲವು ದಿವಸಗಳ ಮಟ್ಟಿಗೆ ಮೂರು ಜನ ಕಲಾವಿದರೆಯರನ್ನು ಕಳಿಸಲು ವಿನಂತಿಸಿದಾಗ ಶ್ರೀಧರ ಹೆಗಡೆ ಒಂದು ಶರತ್‌ದಲ್ಲಿ ಕಲಾವಿದರನ್ನು ಕಳಿಸುವುದಾಗಿ ಹೇಲಿದರು. ಸುಳ್ಯ ದೇಸಾಯಿಯವರು ಧಾರವಾಡ ಕ್ಯಾಂಪು ಮಾಡುವುದರಿಂದ ಬಳ್ಳಾರಿಯಲ್ಲಿ ಅವರ ಥೇಟರ ಖಾಲಿ ಇರುವುದು ತಿಳಿದು ಬಳ್ಳಾರಿಯಲ್ಲಿದ್ದ ಥೇಟರ ಮಳೆಗಾಲ ಕಳೆಯುವವರೆಗೂ ನಮಗೆ ಬಾಡಿಗೆ ಕೊಡಬೇಕೆಂದು ಕೇಳಿದಾಗ ಸುಳ್ಯ ದೇಸಾಯಿ ಅವರು ಒಪ್ಪಿಕೊಂಡರು. ಆಗ ಶ್ರೀಧರ ಅವರ ತಮ್ಮಲ್ಲಿದ್ದ ಕಲಾವಿದರಲ್ಲಿ ಮೂರು ಜನರನ್ನು ಕಳುಹಿಸಿದರು. ಮಳೆಗಾಲ ಕ್ಯಾಂಪು ಕಲಬುರಗಿ ಬದಲು ಬಳ್ಳಾರಿಯಲ್ಲಿ ಮಾಡುವುದೆಂದು ನಿರ್ಧರಿಸಿ ಇನ್ನೇನು ಬಸವಕಲ್ಯಾಣದಿಂದ ಕಲಾವಿದರನ್ನು ಕೆಲವು ಸಲಕರಣೆಗಳೊಂದಿಗೆ ಬಳ್ಳಾಳಿಗೆ ಕಳಿಸಬೇಕೆಂದಾಗ ಸುಳ್ಯದ ದೇಸಾಯಿಯವರು ಹೇಳಿದ್ದು "ಹೆಗಡೆಯವರೆ ನಮ್ಮ ಮ್ಯಾನೇಜರ ನನ್ನ ಗಮನಕ್ಕೆ ತರದೆ ಬೇರೆಯವರಿಗೆ ಥೇಟರ ಕೊಟ್ಟು ಬಿಟ್ಟಿದ್ದಾನೆ. ದಯವಿಟ್ಟು ಕ್ಷಮಿಸಿ" ಎಂದಾಗ ಹೆಗಡೆಯವರಿಗೆ ದಿಕ್ಕೇ ತೋಚದಾಯಿತು. ಅಷ್ಟೋತ್ತಿಗಾಗಲೇ ಕಲಬುರಗಿ ಥೇಟರ್ ಬೇರೆಯವರಿಗೆ ಬಿಟ್ಟಾಗಿತ್ತು.

ಬೀದರಲ್ಲಿದ್ದ ಥೇಟರಾಗಲಿ, ಬಸವಕಲ್ಯಾಣದಲ್ಲಿದ್ದ ಥೇಟರಾಗಲಿ ಕಿತ್ತು ಬೇರೆಲ್ಲಾದರೂ ಹಾಕಲು ದಿನಗಳು ಕಳೆಯುತ್ತವೆ ಅಲ್ಲಿಯವರೆಗೆ ರಾಯಚೂರಿನ ವೀರಭದ್ರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಕೆಲವು ದಿವಸ ಕಳೆದರಾಯಿತೆಂದು ಶ್ರೀಧರ ಹೆಗಡೆಯವರು ಧೈರ್ಯ ಮಾಡಿ ರಾಯಚೂರಿಗೆ ಬಂದರು. ರಾಯಚೂರು ಕ್ಯಾಂಪು ಯಾವ ನಾಟಕ ಕಂಪನಿಯವರಿಗೂ ಬೇಡವಾದ ಊರು. ಅಲ್ಲಿ ಕ್ಯಾಂಪು ಮಾಡಿದವರಿಗ್ಯಾರಿಗೂ ಕಲೆಕ್ಷನ್ ಆಗಿರಲಿಲ್ಲವಂತೆ. ಶ್ರೀಧರ ಹೆಗಡೆಯವರು ಮಾತ್ರ ಧೈರ್ಯ ಮಾಡಿ "ಶ್ರೀರಾಘವೇಂದ್ರ ನಾಟ್ಯ ಸಂಘ" ರಾಯಚೂರಿಗೆ ತಂದು ಪ್ರಾರಂಭಿಸಿದರು.

೧೯೮೩ ಜೂನ ಮೊದಲವಾರದಲ್ಲಿ "ಚಿನ್ನದ ಗೊಂಬೆ" ನಾಟಕದಿಂದ್ಲ ಪ್ರಾರಂಭಗೊಂಡಿತು. ಶ್ರೀಧರ ಹಾಗೂ ಫಕೀರಪ್ಪ ನವರ ಅದೃಷ್ಟ ಚೆನ್ನಾಗಿತ್ತು ಪ್ರಾರಂಭದಿಂದಲೇ ಹೌಸ್‌ಫುಲ್. ಅನೇಕರ ಊಹೆ ತಪ್ಪಾಯಿತು ಕಲಾವಿದರ ಮಾಲಿಕರ ದುಗುಡು ನಿವಾರಣೆಯಾಗಿ ಮುಖದಲ್ಲಿ ಸಂತಸ ಮೂಡಿತು. ಕಂಪನಿ ಜಯಭೇರಿ ಬಾರಿಸುತ್ತ ಸಾಗಿದಾಗಲೇ ಮತ್ತೆ ವಿಪತ್ತು ಕಾದಿತ್ತು. ೧೯೩-೨೦

ದಿನಗಳಲ್ಲಿಯೇ ಕೋಮು ಗಲಭೆ ಪ್ರಾರಂಭಗೊಂಡು ಒಂದು ಸಿನಿಮಾ ಥೇಟರ ಸೇರಿ ನೂರಾರು ಮನೆಗಳು ಉರಿದು ಭಸ್ಮವಾದವು. ೧೪೪ನೇ ಕಲಂ ಜಾರಿಯಾಯಿತು. ಜನರು ಹೊರಬರಲು ಭಯ ಪಡುತ್ತಿದ್ದರು ನಾಟಕ ಪ್ರಯೋಗ ನಿಂತಿತು. ಹಲವಾರು ದಿವಸಗಳು ಕಲಾವಿದರು ಖಾಲಿ ಉಳಿದರು. ಆಗ ಮಳೆಗಾಲ ಥೇಟರ ಇಲ್ಲದೆ ಬೇರೆಲ್ಲಿಯೂ ಹೋಗುವಂತಿಲ್ಲ. ನಗರ ಶಾಂತವಾಗಿ ಮತ್ತೆ ನಾಟಕ ಸಿನಿಮಾ ಪ್ರಾರಂಭಗೊಂಡವು ಮೊದಲಿನಂತೆ ಜನರು ಬರಲಿಲ್ಲ ಹೇಗೂ ಮಳೆಗಾಲ ಕಳೆಯಬೇಕಿತ್ತು .ದೀಪಾವಳಿಯವರೆಗೂ ಕಂಪನಿ ಹಾನಿ ಅನುಭವಿಸುತ್ತಲೇ ಸಾಗಿತು.

ಬೀದರದಲ್ಲಿದ್ದ ಥೇಟರ ಜಾಗದ ಕಾಂಟ್ರಕ್ಟ ಮುಗಿದಿದ್ದರಿಂದ ಬೇರಡೆ ಜಾಗ ನೋಡಿ ಥೇಟರ ಕಿತ್ತು ಹಾಕಿಸಲು ಬೀದರ ಹತ್ತಿರದವರೇ ಆಗಿದ್ದ ಮ್ಯಾನೇಜರ ಸುಭಾಶ ಎನ್ನುವವರನ್ನು ಕಳಿಸಿ ಕೊಟ್ಟರು ಬೀದರಗೆ ಹೋದ ಮ್ಯಾನೇಜರ ೮-೧೦ ದಿನಗಳು ಕಳೆದರೂ ಅವರ ಸುದ್ದಿನೇ ಬರಲಿಲ್ಲ ಆಗ ಶ್ರೀಧರ ಅವರೆ ಬೀದರಿಗೆ ಬಂದಾಗ. ಗೊತ್ತಾಗಿದ್ದು ಮ್ಯಾನೇಜರ ಥೇಟರ ಸಾಮಾನುಗಳನ್ನೆಲ್ಲ ಮಾರಾಟ ಮಾಡಿ ಹೋಗಿದ್ದು ಮೊದಲೇ ಕಂಪನಿ ಹಾನಿ ಅನುಭವಿಸುವ ಸಮಯದಲ್ಲಿ ಮತ್ತೆ ಮತ್ತೆ ಇಂಥ ಅವಘಡ ಇಂಥ ಸಮಸ್ಯೆಗಳನ್ನೆದುರಿಸುತ್ತಲೇ ಕಂಪನಿ ಮುನ್ನಡೆಸಿಕೊಂಡು ಹೋಗ ಬೇಕಿತ್ತು. ಮ್ಯಾನೇಜರನನ್ನು ಹುಡುಕುತ್ತ ಹೋಗುವುದಕ್ಕಿಂತ ಮೊದಲು ಕ್ಯಾಂಪು ಗೊತ್ತು ಮಾಡಬೇಕಿತ್ತು. ಶ್ರೀಧರ ಅವರು ರಾಯಚೂರಿನಿಂದ ಹತ್ತಿರದ ಆಂದ್ರ-ಕರ್ನಾಟಕ ಗಡಿ ಭಾಗದವಾದ ಆದೋನಿಗೆ ಕಂಪನಿ ತಂದಿಳಿಸಿದರು.

೧೯೮೩ ನವೆಂಬರ ಎರಡನೆಯವಾರದಲ್ಲಿ ದಿನಾಂಕ ಗೊತ್ತುಪಡಿಸಿ ಆಗಿತ್ತು. ನಾಟಕ ಪ್ರಾರಂಭವಾಗಬೇಕೆನ್ನುವ ದಿನವೇ ಅಲ್ಲಿಯೂ ಹಿಂದು ಮುಸ್ಲಿಂ ಜಗಳ ಪ್ರಾರಂಭವಾಯಿತು. ಶ್ರೀಧರ ಅವರಿಗೆ ಆಕಾಶವೇ ಕಳಚಿಬಿದ್ದಂತಾಯಿತು. ಗಾಯದ ಮೇಲೆ ಗಾಯ ವಿಧಿ ಒಂದೊಂದು ಸಲ ಪೆಟ್ಟು ಹಾಕಲು ಪ್ರಾರಂಭಿಸಿದರೆ ಕಮ್ಮಾರನಿಗಿಂತ ಕಮ್ಮಾರನಾಗುತ್ತದೆಯಂತೆ ಪೆಟ್ಟಿನ ಮೇಲೆ ಪೆಟ್ಟು ಬಿದ್ದಾಗ ಶ್ರೀದರ ತತ್ತರಿಸಿದರು ಗಲಭೆ ಮುಗಿದು ಶಾಂತವಾದ ಮೇಲೆ ಸಾಯಂಕಾಲ ೬-೩೦ ರಿಂದ ೯-೩೦ ರ ವರೆಗೆ ನಾಟಕ ಪ್ರಯೋಗಿಸಲು ಅನುಮತಿ ದೊರೆಯಿತು. ಆದರೆ ಆ ದಿನಮಾನಗಳಲ್ಲಿ ನಾಟಕ ನೋಡುವದೆಂದರೆ ರಾತ್ರಿ ೧೦-೩೦ ರಿಂದಲೇ ಎನ್ನುವ ಜನರ ತಿಳವಳಿಕೆಯಾಗಿತ್ತು. ಹೀಗಾಗಿ ಕಲೆಕ್ಷನ್ ಹಿಡಿಯಲಿಲ್ಲ. ಕೌತಾಳದಿಂದ ನಾಟಕ ನೋಡಲು ಬಂದಿದ್ದ ಕೆಲವು ಜನರು "ನಮ್ಮೂರಿಗೆ ಕ್ಯಾಂಪು ಮಾಡಿರಿ ನಿಮಗೆ ಬೇಕಾದ ಸಹಾಯ ಮಾಡುತ್ತೇವೆ" ಎಂದರು ಶ್ರೀಧರ ಒಪ್ಪಿಕೊಂಡು ಕೌತಾಳತ್ತ ಸಾಗಿದರು.

ಡಿಸೆಂಬರ್ ೧೯೮೩ ರಂದು ಕೌತಾಳ ಕ್ಯಾಂಪು "ಚಿನ್ನದ ಗೊಂಬೆ" ನಾಟಕದಿಂದ ಪ್ರಾರಂಭಗೊಂಡಿತು. ಕಲೆಕ್ಷನ್ ಚೆನ್ನಾಗಿನೇ ಇತ್ತು. ಮತ್ತೆ ಅಲ್ಲೊಂದು ದುರಂತ ಕಾದಿತ್ತು. ನಾಟಕ ಪ್ರಾರಂಭವಾಗಿ ಒಂದು ವಾರದಲ್ಲಿ ನಾಟಕದ ಪ್ರಚಾರದ ಗಾಡಿ ಪ್ರಚಾರ ಮಾಡುತ್ತ ಹೋದಾಗ ಅದೇ ಊರಿನ ವ್ಯಾಪರಸ್ತರಾದ ನಾರಾಯಣ ಶೆಟ್ಟಿ ಅವರ ಹತ್ತು ಹನ್ನೊಂದು ವರ್ಷದ ಮಗ ಪ್ರಚಾರ ಕಾರಿಗೆ ಸಿಕ್ಕು ಅಸುನೀಗಿತು. ಕಾರಿನ ಡ್ರೈವರನ ತಪ್ಪು ಇರದಿದ್ದರೂ ಕೂಡಿದ ಜನರು ನಾಟಕ ಕಂಪನಿಯ ಮೇಲೆ ಮುತ್ತಿಗೆ ಹಾಕಿದರು. ಥೇಟರ ಧಂಸ ಮಾಡಲು ಮುಂದಾದಾಗ ಸ್ವತಃ ಮಗುವಿನ ತಂದೆ ನಾರಾಯಿಶೆಟ್ಟಿ ದೊಡ್ಡ ಮನಷ್ಯರು ತಾಳ್ಮೆ ಕಳೆದುಕೊಳ್ಳದೇ ಅವರು ಹೇಳಿದ್ದು "ಕಂಪನಿಗೆ ಎನೂ ಮಾಡಬೇಡಿ ಕಾಯ್ದೆ ಕಾನೂನುಗಳಿವೆ ತಪ್ಪಿಗೆ ಶಿಕ್ಷೆಯಿದೆ. ಎಂದು ನೆರೆದಿದ್ದ ಜನರಲ್ಲಿ ವಿನಂತಿಸಿದಾಗ ಜನರು ಚದುರಿದರು. ಆದರೂ ಪೋಲಿಸರ ಕಿರುಕಳದಿಂದ ತೊಂದರೆ ಅನುಭವಿಸಬೇಕಾಯಿತು. ನಾಟಕ ಕಂಪನಿಯ ಪ್ರಭಾವ ಕುಂದಿತು. ಬಹುಬೇಗ ಅಲ್ಲಿಂದ ಕ್ಯಾಂಪು ಕೋಜ್ ಮಾಡಬೇಕಾಯಿತು.

ಕೌತಾಳದಿಂದ ಕಂಪನಿ ಸಿಂಧೂರ ಹತ್ತಿರದ ಅಂಬಾ ಜಾತ್ರೆ ಕ್ಯಾಂಪು ಮಾಡಿತು. ಆಗಲೇ ಎರಡು ಕಂಪನಿಗಳು ಅಲ್ಲಿ ಬಂದಿದ್ದರಿಂದ ಇದು ಮೂರನೇ ಕಂಪನಿ ದಿ.೧೪-೧-೧೯೮೪ ರಂದು ಜಾತ್ರೆಯಲ್ಲಿ ಶ್ರೀಧರ ಅವರ ಕಂಪನಿ 'ಚಿನ್ನದ ಗೊಂಬೆ' ನಾಟಕ ಪ್ರದರ್ಶಿಸಿತು. ಶ್ರೀಧರ ಅವರ ಕಂಪನಿ ಭಾರೀ ಪ್ರಚಾರ ಪಡೆದು ಹೌಸ್‌ಫಲ್ಲಾಗಿತ್ತು ಥೇಟರದಲ್ಲಿ ಖುರ್ಚಿಗಳು ಕೇವಲ ಐದುನೂರು ಇದ್ದವು. ಹೊರಗಡೆ ಟಿಕೆಟ್‌ಗಾಗಿ ಕಾಯುತ್ತಿದ್ದ ಜನರು ಸಾವಿರಾರು. ಕಂಟ್ರೋಲ ತಪ್ಪಿತು. ಪೋಲೀಸ್ ವ್ಯಾನ ಬಂದಿತು. ಯಾರ ಮನವಿಗೂ ಜನರು ಗಮನಿಸದೇ ನೂಕು ನುಗ್ಗಲು ಜನರು ನೂಕ ನುಗ್ಗಲಿಗೆ ಥೇಟರ ಬಾಗಿತು ಹೇಗೋ ಮೂರು ನಾಟಕ ಪ್ರದರ್ಶಿಯಾಯಿತು. ಮಾರನೇ ದಿನ ಥೇಟರ ಸರಿಪಡಿಸಿ ಮುಂಗಡ ಟಿಕೆಟ್ ಕೊಟ್ಟು ಮುಂಜಾಗ್ರತೆಯಲ್ಲಿ ನಾಟಕ ಪ್ರಯೋಗಗೊಳ್ಳಹತ್ತಿತ್ತು.. ಹತ್ತು ಹದಿನೈದು ದಿನಗಳವರೆಗೂ ನೂಕು ನುಗ್ಗಲಲ್ಲಿಯೇ ನಾಟಕ ಪ್ರದರ್ಶನಗೊಂಡು ನಿಧಾನ ಜಾತ್ರೆಯ ಜನಸಂದಣಿ ಕಡಿಮೆಯಾದಂತೆ ನಾಟಕದತ್ತ ಪ್ರೇಕ್ಷಕರ ಸಂಖ್ಯೆಯೂ ಕಡಿಮೆಯಾಯಿತು. ಜಾತ್ರೆ ಕ್ಯಾಂಪು ಮುಗಿಸಿ ಕಂಪನಿ ಸಿಂಧನೂರಿಗೆ ಬಂದಿತು.

ದಿನಾಂಕ : ೩೧-೧-೧೯೮೪ ರಂದು ನಾಟಕ ಪ್ರಯೋಗಿಸುವುದೆಂದು ನಿರ್ಧರಿಸಿ ಪ್ರಚಾರ ಮಾಡಿಯಾಗಿದೆ. ಜಾತ್ರೆಯ ಕ್ಯಾಂಪುಕ್ಲೋಜಿಗೆ ಊರಿಗೆ ಹೋದ ಕಂಪನಿಯ ಮಾಲಿಕರಲ್ಲೊಬ್ಬರಾದ ಫಕೀರಪ್ಪನವರೇ ಬಂದಿರಲಿಲ್ಲ

ಅವರದೇ ಹಾಸ್ಯ ಪ್ರಮುಖ ಪಾತ್ರವಾಗಿತ್ತು. ಸಂಪರ್ಕಿಸಲು ಈಗಿನಂತೆ ಅನುಕೂಲಗಳಿರಲಿಲ್ಲ. ಹಳ್ಳಿಗಳಲ್ಲಿ ಗೊತ್ತು ಪಡಿಸಿದ ದಿನಾಂಕಿಗೆ ನಾಟಕವಾಗಬೇಕು. ಫಕೀರಪ್ಪನವರು ಬರಲಾಗುವುದಿಲ್ಲ, ಎರಡು ದಿನ ನಾಟಕದ ದಿನಾಂಕ ಮುಂದೂಡಿ ಎಂದು ಟೆಲಿಗ್ರಾಂ ಕೊಟ್ಟಿದ್ದು ಮಾರನೆಯ ದಿನ ಬಂದಿತ್ತು. ಗೊತ್ತುಪಡಿಸಿದ ದಿನಾಂಕಿಗೆ ನಾಟಕ ಪ್ರಯೋಗಿಸಲಾಗದಿದ್ದಕ್ಕೆ ಬಂದ ಪ್ರೇಕ್ಷಕರಲ್ಲಿ ಕ್ರಮಕೋರಿ ಕಳಿಸಿದ್ದರು, ಶ್ರೀಧರ ಹೆಗಡೆ.

ದಿನಾಂಕ:೩೧-೧-೧೯೭೪ ರಂದು ಪ್ರಾರಂಭವಾಗಬೇಕಿದ್ದ ನಾಟಕ ದಿನಾಂಕ:೬-೨-೧೯೭೪ ರಂದು **"ಚಿನ್ನದಗೊಂಬೆ"** ನಾಟಕದಿಂದ ಪ್ರಾರಂಭವಾಯಿತು. ಮೊದಲನೇ ದಿನ ನಾಟಕ ಪ್ರಯೋಗಗೊಳ್ಳದಿದ್ದುದೇ ಜನರಲ್ಲಿ ವಿಶ್ವಾಸ ಹೋಗಿತ್ತು. ಯಾಕೋ ಸಿಂಧನೂರು ಕ್ಯಾಂಪು ನಿರೀಕ್ಷೆಯಂತೆ ಯಶಸ್ವಿಯಾಗಲಿಲ್ಲ. ಮುಂದಿನ ಕ್ಯಾಂಪಿಗಾಗಿ ಯೋಚಿಸುವಾಗ ಶ್ರೀಧರ ಅವರಿಗೆ ಹೊಳೆದಿದ್ದು ಬಳ್ಳಾರಿ ಕ್ಯಾಂಪು. ಬಳ್ಳಾರಿಯಲ್ಲಿ ಜಾಗ ಹಿಡಿದು ಬಂದದ್ದಾಯಿತು.

ಫಕೀರಪ್ಪನವರ ಪರಿಚಿತರಾದ ಹೊಸ ಪೇಟೆಯ ಹೂಗಾರ ಮಲ್ಲಣ್ಣನವರಿಗೆ ಥೇಟರ ಹಾಕಿಕೊಡಲು ಒಪ್ಪಿಸಲಾಗಿತ್ತು. ಮಲ್ಲಣ್ಣ ಶ್ರೀಧರ ಅವರಿಗೆ ಹೇಳಿದ್ದು "ಥೇಟರ ಹಾಕಿ ಕೊಡುತ್ತೇನೆ ಆದರೆ ನಿಮ್ಮ ಕ್ಯಾಂಪು ಮುಗಿದೊಡನೇ ಥೇಟರ ತೆಗೆಯುವುದು ಸರಿ ಎನಿಸುವುದಿಲ್ಲ ಒಂದೆರಡು ವರ್ಷವಾದರೂ ಇರಬೇಕು ಅದಕ್ಕಾಗಿ ಜಾಗ ನನ್ನ ಹೆಸರಿನ್ಲಿ ಮಾಡಿಕೊಡಿ" ಎಂದಾಗ ಶ್ರೀಧರ ಒಪ್ಪಿ ಬರೆದುಕೊಟ್ಟರು. ಮಲ್ಲಣ್ಣನವರ ಹೆಸರಿನಲ್ಲಿ ಜಾಗ, ಅವರದೇ ಥೇಟರ ಎಂದಾಗ ಶ್ರೀಧರ ಅವರಿಗೆ ಹೇಳದೇ ಪ್ರಾರಂಭದಲ್ಲಿಯೇ ಥೇಟರ ಶ್ರೀ ಮಲ್ಲಿಕಾರ್ಜುನ ನಾಟ್ಯ ಸಂಘ, ಸೂಡಿ ಅವರಿಗೆ ಕೊಟ್ಟು ಬಿಟ್ಟಿದ್ದ. ಶ್ರೀಧರ ಅವರಿಗಿದು ನುಂಗಲಾರದ ತುತ್ತಾಯಿತು. ಹೊಸ ಪೇಟೆಗೆ ಹೋಗಿ ಮಲ್ಲಣ್ಣ ನಿನ್ನು ಇಬ್ಬರೂ ಮಾಲಿಕರು (ಫಕೀರಪ್ಪ, ಶ್ರೀಧರ) ವಿಚಾರಿಸಿದಾಗ ಬೇಜವಾಬ್ದಾರಿ ಉತ್ತರ ನೀಡಿದ. ಶ್ರೀಧರ ಅವರಿಗೆ ಅವರು ಕೊಟ್ಟ ಹಣ ಮಲ್ಲಣ್ಣ ಸಂದಾಯ ಮಾಡಿ ಕೈತೊಳೆದುಕೊಂಡ. ಶ್ರೀಧರ ಅವರಿಗೆ ಜಗಳಕಾಯಿಲು ಇಷ್ಟವಿರಲಿಲ್ಲ.

ಬಳ್ಳಾರಿ ಕ್ಯಾಂಪು ಆಗದೇ ಹೋದಾಗ ಶ್ರೀಧರ ಅವರಿಗೆ ಹೊಳೆದಿದ್ದು ಹೊಸಪೇಟೆ ಕ್ಯಾಂಪು. ಹೊಸಪೇಟೆ ಕೂಡ ಕಲೆಕ್ಷನ್ ಆಗದ ಊರೆಂದು ಪ್ರಸಿದ್ಧಪಡೆದಿತ್ತು. ದೊಡ್ಡ ದೊಡ್ಡ ಕಂಪನಿಗಳೆಲ್ಲ ಅಲ್ಲಿ ಹಾನಿ ಅನುಭವಿಸಿದ್ದ ಸುದ್ದಿಯೇ ಇತ್ತು ಅಲ್ಲದೆ ಸಿನಿಮಾ ಮಾಲೀಕರೆಲ್ಲಾ ಕಂಪನಿಯನ್ನು ಎತ್ತಂಗಡಿ ಮಾಡುವ ತಂತ್ರಗಾರಿಕೆ ಮಾಡುತ್ತಾರೆನ್ನುವ ಸುದ್ದಿಯೂ ಶ್ರೀಧರ ಅವರ ಧೈರ್ಯ

ಕುಂದಿಸಿತ್ತು. ಅಷ್ಟೊತ್ತಿಗೆ ಹಾನಿ ಅನುಭವಿಸಿದ್ದರಿಂದ ಹೊಸಪೇಟೆ ಕ್ಯಾಂಪು ಬಿಟ್ಟು ಕೊಪ್ಪಳ ಹತ್ತಿರದ ಹಿಟ್ನಾಳ ಗ್ರಾಮಕ್ಕೆ ಬಂದರು ಹಿಟ್ನಾಳ ಸುತ್ತಲೂ ಹಳ್ಳಿಗಳನ್ನೊಳಗೊಂಡ ಕೇಂದ್ರ ಬಿಂದು.

ಹಿಟ್ನಾಳ ಕ್ಯಾಂಪು ಬಟ್ಟೆ ಥೇಟರನ್ನೊಳಗೊಂಡಿದ್ದರಿಂದ ಕಷ್ಟವಾಯಿತು. ಮಳೆ ಬಂದ ದಿನ ನಾಟಕ ಬಂದು. ಮಳೆಯಿಲ್ಲದಾಗ ನಾಟಕ ಪ್ರಯೋಗ ಕಲಾವಿದವರೆಗೆ ಸರಿಯಾಗಿ ವೇತನ ಕೊಡಲಾಗುತ್ತಿಲ್ಲ. ಬೋರ್ಡಿಂಗಿಗೂ ತೊಂದರೆಯಾದಾಗ ಕೆಲವು ಕೆಲಸಗಾರರು, ಕಲಾವಿದರು ನಿರ್ಗಮಿಸಿದರು. ಹೆಗಡೆಯವರಿಗೆ ಏನೂ ತೋಚದಾಗ ಎರಡು ತಿಂಗಳು ಮಳೆಗಾಲ ಕಳೆಯುವವರೆಗೆ ಕಂಪನಿ ಬಂದಿಡಬೇಕೆಂದು ನಿರ್ಧರಿಸಿ ಕಲಾವಿದರಿಗೆಲ್ಲ ಕೆಲವು ದಿವಸ ಬೇರಡೆ ಹೋಗಲು ತಿಳಿಸಿದರು. ಆಗಿನ ಮಟ್ಟಿಗೆ ಕಂಪನಿಯ ಅಂಕದ ಪರದೆ ಜಾರಿತು.

ಮಳೆಗಾಲ ಮುಗಿಯುತ್ತಿದ್ದಂತೆ ಶ್ರೀಧರ ಸವದತ್ತಿಗೆ ಕಂಪನಿಯನ್ನು ಪುನ: ನಿರ್ಮಾಣ ಮಾಡಲು ಮುಂದಾಗಿ ಕೆಲಸದವರನ್ನು ಕರೆದುಕೊಂಡು ತಾವೇ ಥೇಟರ ಸಿದ್ಧಗೊಳಿಸಿ ಹೊರ ಹೋಗಿದ್ದ ಎಲ್ಲಾ ಕಲಾವಿದರಿಗೂ ಬರ ಹೇಳಿದರು ಕಲಾವಿದರೆಲ್ಲ ಮತ್ತೆ ಬಂದು ಸೇರಿದಾಗ ಹೊಸ ಕಂಪನಿ ಮಾಡಿದಷ್ಟೇ ಹಣ ಖರ್ಚಾಯಿತು. ಥೇಟರ ವೆಚ್ಚ, ಲೈಸನ್ಸ ಕಲಾವಿದರಿಗೆ ಅಡ್ವಾನ್ಸ, ಹೀಗೆ ಸಾಲ ಹೆಚ್ಚುತ್ತಲೇ ಸಾಗಿತ್ತು. ನಾಟಕ ಕಂಪನಿಯು ಮತ್ತೆ ಮತ್ತೆ ಹಾನಿ ಅನುಭವಿಸಿದರೆ.ಎಂಥ ಮಾಲಿಕನಿಗೂ ಸಹಿಸಿಕೊಳ್ಳುವುದು ಕಷ್ಟವಾಗುತ್ತದೆ. ಅದು ಮಳೆಗಾಲದಲ್ಲಿಂತೂ ಕಾಲಕಳೆಯುವುದೇ ದೊಡ್ಡ ಸಮಸ್ಯೆ.

೧೯೮೪ರ ಡಿಸೆಂಬರ ಮೊದಲನೇ ವಾರದಲ್ಲಿ ಸವದತ್ತಿ ಕ್ಯಾಂಪು **"ಚಿನ್ನದ ಗೊಂಬೆ"** ನಾಟಕದಿಂದ ಪ್ರಾರಂಭಗೊಂಡಿತು. ಪ್ರಾರಂಭದಲ್ಲಿ ಒಳ್ಳೆ ಕಲೆಕ್ಷನ್ನೇ ಆಯಿತು. ಮುಂದೆ ಮಧ್ಯಂತರ (೧೯೮೫ ಫೆಬ್ರವರಿ) ಚುನಾವಣೆ ಬಂದದ್ದರಿದ ಚುನಾವಣೆ ಪ್ರಚಾರದ ಬಿಸಿ ಕಂಪನಿಗೂ ತಾಗಿತ್ತು ಎನ್ನುವಾಗಲೇ ಮತ್ತೊಂದು ದುರಂತ ಕಾದಿತ್ತು. ಥೇಟರ ಎದುರಿಗೆನೇ ಎರಡು ರಾಜಕೀಯ ಪಾರ್ಟಿಯಲ್ಲಿ ಜಗಳವಾಗಿ ಒಬ್ಬನ ಸಾವು ಸಂಭವಿಸಿತು ಮುಂದೆ ಚುನಾವಣೆ ಮುಗಿಯುವವರೆಗೂ ಕಂಪನಿ ಬಂದಿಡಲಾಯಿತು. ಅದು ಅನಿವಾರ್ಯವಾಗಿತ್ತು.

ಚುನಾವಣೆ ಮುಗಿದ ಮೇಲೆ ಮತ್ತೆ ಕಂಪನಿ ಪ್ರಾರಂಭಗೊಂಡಿತು ನಾಟಕ ಬದಲಿಸಬೇಕೆನ್ನುವ ವಿಚಾರ ಬಂದಾಗ ಅಲ್ಲಿಯ ಜನರ ಸಲಹೆಯಂತೆ **"ಎಲ್ಲಮ್ಮ**

ದೇವಿ ಮಹಾತ್ಮೆ" ಪ್ರಾಕ್ಟೀಸ ಹಚ್ಚಲಾಯಿತು. ಫಕೀರಪ್ಪ ವರವಿ ಅವರ ನಿರ್ದೇಶನದಲ್ಲಿ ನಾಟಕ ಅದ್ದೂರಿಯಲ್ಲಿ ಪ್ರಾರಂಭಿಗೊಂಡಿತು. ಆ ನಾಟಕದ ಪ್ರಯೋಗಕ್ಕಾಗಿ ಬಹಳಷ್ಟು ಹಣ ಖರ್ಚು ಮಾಡಲಾಗಿತ್ತು. ನಾಟಕ ಚೆನ್ನಾಗಿನೇ ಇದ್ದರೂ ಅದೇನೋ ಮಾಲಿಕರ ದುರ್ದೈವ ಪ್ರಾದೇಶಿಕ ಹಿನ್ನೆಲೆಯಲ್ಲಿ, ಸ್ಥಳೀಯ ಅಧಿದೇವತೆಯ ನಾಟಕ ಎಂದಾಗ ಜನರು ನಾಟಕ ನೋಡಬೇಕಿತ್ತು. ಹಾಗಲಿಲ್ಲ ಆ ನಾಟಕದಿಂದ ಆಶಾವಾದಿಯಾಗಿದ್ದ ಶ್ರೀಧರ ಅವರಿಗೆ ಮತ್ತೆ ನಿರಾಶೆ ಕಾದಿತ್ತು ಅಷ್ಟೋತ್ತಿಗೆ ಸಾಲ ಇನ್ನೂ ಹೆಚ್ಚಾಗಿತ್ತು ಅಲ್ಲಿಗೆ ಇಬ್ಬರೂ ಮಾಲಿಕರು ಸೋತಿದ್ದರು ಕಂಪನಿ ನಿಲ್ಲಿಸುವ ಚಿಂತನೆ ನಡೆಯಿತು ಆದರೂ ಇನ್ನೊಂದು ಕ್ಯಾಂಪು ನೋಡಿದರಾಯಿತೆಂದು ವಿಜಯಪುರ ಜಿಲ್ಲೆ ಮುಧೋಳ ಕ್ಯಾಂಪು ಮಾಡಲು ನಿರ್ಧರಿಸಲಾಯಿತು.

ಸವದತ್ತಿ ಕ್ಯಾಂಪಿನಲ್ಲಿ ಶ್ರೀಧರ ಹೆಗಡೆಯವರ ಬದುಕಿನಲ್ಲೊಂದು ಹೃದಯಸ್ಪರ್ಶಿ ಸನ್ನಿವೇಶ ನಡೆದು ಹೋಯಿತು ಸುಮಾರು ದಶಕದ ಹತ್ತಿರ ಹತ್ತಿರವಾಗಿತ್ತು. ಶ್ರೀಧರ ಅವರು ಊರು, ಮನೆ ಬಿಟ್ಟು, ಅಲ್ಲಿಯವರೆಗೆ ಯಾರದರ್ಶನವೂ ಆಗಿರಲಿಲ್ಲ ಯಾರ ಸುದ್ದಿಯೂ ಗೊತ್ತಿರಲ್ಲಿಲ್ಲ ಮನೆಯವರಿಗೆ ನೆನಪುಗಳು ಕಾಡಿದಂತೆ ಶ್ರೀಧರ ಅವರಿಗೂ ಕಾಡುತ್ತಿತ್ತು. ಮನೆಯವರೆಲ್ಲ ಶ್ರೀಧರನನ್ನು ಹುಡಿಕಿಸಿ ಆಗಿತ್ತು. ಹೀಗಾಗಿ ಎಲ್ಲಿದ್ದಾನೋ ಹೇಗಿದ್ದಾನೋ ಎನ್ನುವ ಚಿಂತೆ ಕುಟುಂಬ ಸದಸ್ಯರಿಗೆ, ಅದರಲ್ಲೂ ತಂದ ತಾಯಿಗಳಿಗೆ ಹೆಚ್ಚು ಕಾಡುತ್ತಿತ್ತು. ಎಲ್ಲೇ ಇರಲಿ ಚೆನ್ನಾಗಿರಲೆನ್ನುವುದೇ ತಂದೆ ತಾಯಿಗಳ ಆಶಯವಾಗಿತ್ತು.

ಶ್ರೀಧರ ಅವರ ತಮ್ಮ, ದಿವಾಕರ ಧಾರವಾಡಕ್ಕೆ ನೌಕರಿಗಾಗಿ ಸಂದರ್ಶನ ಕೊಡಲು ಬಂದಾಗ ಸವದತ್ತಿಯಲ್ಲೊಂದು ಕಂಪನಿ ಇದೆಯೆಂದು ಆ ಕಂಪನಿಯಲ್ಲಿ ಶ್ರೀಧರ ಇದ್ದಾನೆಂದು ಅವರಿಗೆ ರಂಗ ಕಲಾವಿದರ ಮೂಲಕ ಹೇಗೋ ಮಾಹಿತಿ ದೊರೆತಿತ್ತು. ಹೀಗಾಗಿ ಸವದತ್ತಿಗೆ ಬಂದ ದಿವಾಕರ ನೇರವಾಗಿ ನಾಟಕ ಕಂಪನಿಗೆ ಹೋಗಿ ವಿಚಾರಿಸಿದಾಗ ಇಲ್ಲಿ ಶೀಧರ ಅನ್ನೋರು ಯಾರೂ ಇಲ್ಲವೆಂದು ಕೆಲಸದ ಹುಡುಗ ಹೇಳಿದಾಗ ನಿರಾಶೆಯಿಂದ ಮರಳಿದ್ದ ದಿವಾಕರ ಅವರಿಗೆ ಹೊರಗೆ ಹೋಗಿದ್ದ ಅಣ್ಣ ಶ್ರೀಧರ ಎದುರಿಗನೇ ಬಂದು ಮುಖಾಮುಖಿಯಾದಾಗ ಅದೊಂದು ಹೃದಯ ಸ್ಪರ್ಶ ಸನ್ನಿವೇಶ. ಹತ್ತು ವರ್ಷಗಳ ಹಿಂದೆ ಇನ್ನೂ ಪ್ರೈಮರಿ ಓದುತ್ತಿದ್ದ ತಮ್ಮ ಇದೀಗ ಪದವೀಧರ ಅಣ್ಣನಷ್ಟೇ ಬೆಳೆದು ನಿಂತಿದ್ದಾನೆ. ಹಾಗೆ ಒಬ್ಬರಿಗೊಬ್ಬರು ನೋಡುತ್ತ ನಿಂತಾಗ ಇಬ್ಬರ ಕಣ್ಣುಗಳಲ್ಲಿ ಆನಂದ ಬಾಷ್ಪಗಳು ಒಬ್ಬರನ್ನೊಬ್ಬರು ಅಪ್ಪಿಕೊಂಡು ಖುಷಿಪಟ್ಟಾಗ ಇಬ್ಬರಲ್ಲಿಯೂ ಸಂಭ್ರಮ ಇಬ್ಬರಿಗೂ ಕಳೆದು ಹೋದ ಒಂದು ಅಮೂಲ್ಯ ವಸ್ತು ಸಿಕ್ಕಂತೆ. ತಮಗೆ

ಪ್ರೀತಿಸುವ ಒಂದು ಹೃದಯ ಇರುವವರೆಗೆ "ತನ್ನನ್ನು ಪ್ರೀತಿಸುವ ಒಬ್ಬ ಮನುಷ್ಯ ಇರುವವರೆಗೆ ಯಾವನೊಬ್ಬ ಮನುಷ್ಯನೂ ತಾನೂ ಯಾರಿಗೂ ಇಲ್ಲ ತನ್ನವರು ಯಾರೂ ಇಲ್ಲ ಎಂದು ತಿಳಿಯಬಾರದು." ಶ್ರೀಧರ ಹೃದಯದೊಳಗೆ ಬತ್ತಿದ್ದ ಸೋದರ ಪ್ರೀತಿಯ ಒರತೆ ಚಿಮ್ಮಿತು. ಕಣ್ಣುಗಳು ಒಣಗಿದಂತೆ ಕಾಣುತ್ತಿದ್ದರೂ ಒಳಗೆ ಆ ಸೆಲೆ, ಇದ್ದೇ ಇತ್ತು ಆ ಮಿಲನ ಸೋದರರಲ್ಲಿ ಅವಿಸ್ಮರಣೀಯ.

ತಮ್ಮ ದಿವಾಕರನನ್ನು, ಥೇಟರಿಗೆ ಕರೆದುಕೊಂಡು ಹೋಗಿ ಆತಿಥ್ಯ ನೀಡಿ ಮನೆಯವರ್ನನೆಲ್ಲ ಸ್ಮರಿಸಿಕೊಳ್ಳುತ್ತ ಅವರ ಸುಖ ದು:ಖ ವಿಚಾರಿಸುತ್ತ ಶ್ರೀಧರ ಸಂತಸ ಪಟ್ಟರು. ತಮ್ಮ ದಿವಾಕರ ಹೇಳುತ್ತಿದ್ದ ಹತ್ತು ವರ್ಷದ ಎಲ್ಲಾ ಸುದ್ದಿ ಕೇಳಿ ಖುಷಿ ಪಡುತ್ತ ಮತ್ತೆ ಮತ್ತೆ ಎಲ್ಲರನ್ನೂ ನೆನಪಿಸಿಕೊಳ್ಳುತ್ತ ಅಂದಿನ ರಾತ್ರಿ ಖುಷಿಕೊಟ್ಟಿತು. ಪ್ರೀತಿ, ಕರುಣೆ, ಅಂತ:ಕರಣ ತುಂಬಿಕೊಂಡಿರುವ ಹೃದಯವು ಆಗ ಕಾರಂಜಿಯಂತೆ ಚಿಮ್ಮಿತು ಮಾರನೆಯದಿನ ಭಾರವಾದ ಹೃದಯಲ್ಲಿ ತಮ್ಮ ದಿವಾಕರನನ್ನು, ಬಿಳ್ಕೊಟ್ಟು ಮತ್ತೆ ತಮ್ಮ ಕಾಯಕದತ್ತ ತಿರುಗಿದರು, ದಿವಾಕರ ಊರಿಗೆ ಹೋಗಿ ಅಣ್ಣ ಶ್ರೀಧರನ ಬಗ್ಗೆ ಹೇಳಿದಾಗ ಮನೆಯಲ್ಲಿ ಎಲ್ಲರ ಮುಖದಲ್ಲಿ ಸಂತಸ ಅವಳಿತ್ತು.

ಸಹೋದರ ದಿವಾಕರ ತಮ್ಮ ಲೇಖನವೊಂದರಲ್ಲಿ ಆ ದಿನಗಳನ್ನು ಸ್ಮರಿಸಿಕೊಳ್ಳುತ್ತ ಶ್ರೀಧರ ಅವರ ಬಗ್ಗೆ ಸಂತಸದಲ್ಲಿ ಅಭಿಮಾನದಲ್ಲಿ ಹೇಳಿಕೊಂಡಿದ್ದಾರೆ. "ನಾನು ಅಣ್ಣನನ್ನು ನೋಡದೆ ಹತ್ತು ವರ್ಷಗಳಾಗಿದ್ದವು. ೧೯೭೮ರಲ್ಲಿ ಸೆಪ್ಟಂಬರ ತಿಂಗಳಲ್ಲಿ ಯಾವುದೋ ಕೆಲಸದ ನಿಮಿತ್ಯ ಧಾರವಾಡಕ್ಕೆ ಹೋದಾಗ ಸವದತ್ತಿ ನಾಟಕ ಕಂಪನಿಯಲ್ಲಿ ನನ್ನಣ್ಣ ಇರುವದು ತಿಳಿದು ಅಣ್ಣನನ್ನು ಹುಡಿಕಿಕೊಂಡು ಹೋದೆ ಅಂದು ಅಣ್ಣ ಪಾತ್ರ ಮಾಡಿರಲಿಲ್ಲ. ಆ ಹತ್ತು ವರ್ಷಗಳಲ್ಲಿ ಆರನೆಯ ತರಗತಿಯಲ್ಲಿದ್ದ ನಾನು ಪದವಿಶಿಕ್ಷಣ ಮುಗಿಸಿದ್ದೆ ನನ್ನಣ್ಣ ನನ್ನ ಕಲ್ಪನೆಗೂ ಮೀರಿ ಬೆಳೆದಿದ್ದ ಅಂದಿನಿಂದ ನಾವು ಸಂಬಂಧ ಸೀಮೆಯನ್ನು ಮೀರಿ ಸ್ನೇಹಿತರಾದೆವು.

ಮುಂದಿನ ನಾಲ್ಕು ವರ್ಷ ನನ್ನ ರಜೆಗಳಲ್ಲಿ ಅಣ್ಣನ ನಾಟಕ ಕಂಪನಿಯ ಜೊತೆ ಕಳೆದಿದ್ದೇನೆ ಅಣ್ಣ ನಟನಾಗಿ ರಂಗದ ಮೇಲೆ ಅಭಿನಯಿಸಿದ ಹತ್ತಾರು ಪಾತ್ರಗಳನ್ನು, ಕಂಪನಿಯ ಮಾಲಿಕನಾಗಿ ಕಂಪನಿ ನಡೆಸಿದ್ದನ್ನೂ ಕಂಡಿದ್ದೇನೆ. ನನಗೆ ನನ್ನಣ್ಣ ಈಗಲೂ ಹಿರೋ ಅನಿಸುತ್ತಾನೆ.

ಒಂದು ರಂಗದ ಬದುಕು ಪ್ರತಿನಿಧಿಸುವ ಸೃಜನ ಶೀಲ ವ್ಯವಹಾರ ಇನ್ನೊಂದು ನಾಟಕ ಕಂಪನಿಯ ಬದುಕಿನ ಮರ್ಯಾದೆಯ ನಿತ್ಯ ಬದಲಾವಣೆಗೆ ಪಕ್ಕಾದ್ದೆ ಆಗಿದೆ. ಬಣ್ಣದ ಹುಚ್ಚಿಗೆ ಬಿದ್ದ ಜೀವಿಗಳು ಸಮಾಜದ ಯಾವುದೋ ವರ್ಗ ವರ್ಣಗಳಿಂದ ಬಂದು ಸೇರಿ ಒಂದೇ ಕಲಾ ಕುಟುಂಬವಾಗಿ ಬದುಕುವ ಪರಿ ಅಚ್ಚರಿಯದು ಅತ್ಯಂತ ಸಂಕೀರ್ಣವಾದದ್ದು ಇಂತಹ ಕಲಾ ಕುಟುಂಬದ ಸದಸ್ಯನಾಗಿ, ಯಜಮಾನನಾಗಿ, ಮಾರ್ಗದರ್ಶಕನಾಗಿ ಮೂರು ದಶಕಗಳನ್ನು ಕಂಡ ನನ್ನಣ್ಣನ ಜೀವನಾನುಭವ ಬಹಳ ದೊಡ್ಡದು. ಸಾಂಪ್ರದಾಯದ ಚೌಕಟ್ಟಿನಲ್ಲಿಯೇ ಬದುಕನ್ನು ಕಂಡ ನಮ್ಮ ಮನೆಯಲ್ಲಿ ಉಳಿದ ಯಾರಿಗೂ ಈ ರೀತಿಯ ಕಲ್ಪನೆ ಕೂಡ ಇಲ್ಲ. **ಬೇಲಿಗಳನ್ನೆಲ್ಲ ದಾಟಿ ಬಯಲಿಗೆ ಬಂದವನು ನನ್ನಣ್ಣ.**

ನನ್ನಣ್ಣ ಮಲೆನಾಡಿನಿಂದ ಬಂದು ಬಯಲು ಸೀಮೆಯ ಭಾಷೆ ವೇಷ, ಒಡನಾಟದಲ್ಲಿ ಬೆರೆತ ರೀತಿ ಅನನ್ಯವಾದುದು ಗಳಿಸಿದ ಜನ ಮನ್ನಣೆಯೂ ದೊಡ್ಡದು ಅವರ ರಂಗ ಸೇವೆಯನ್ನು ಗುರುತಿಸಿ ಕರ್ನಾಟಕ ನಾಟಕ ಅಕಾಡೆಮಿ ಗೌರವಪ್ರಶಸ್ತಿ ನೀಡಿ ಸನ್ಮಾನಿಸಿದಾಗ ಅಂದಿನ ಸಮಾರಂಭದಲ್ಲಿದ್ದು ಸಂತಸ ಪಟ್ಟಿದ್ದೇನೆ ಇಂತಹ ಸಾಧನೆಯನ್ನು ನಮ್ಮ ಕುಟುಂಬದಲ್ಲಿ ಒಬ್ಬನಾದರೂ ಮಾಡಿದರಲ್ಲ ಎನ್ನುವ ಹೆಮ್ಮೆ ನನಗೆ.

ನನ್ನಣ್ಣನಿಗಾಗಿ ಇಂದಿಗೂ ಹೆತ್ತವರು ಹಂಬಲಿಸುತ್ತಾರೆ ಆದರೆ ನನ್ನಣ್ಣ ಗುಬ್ಬಿಯ ಗೂಡಿನಲ್ಲಿ ಹುಟ್ಟಿದ ಗರುಡ. ರೇಷ್ಮೆಯ ಬೆಚ್ಚನೆಯ ಗೂಡನ್ನು ಹರಿದು ಬಂದ ಚಿಟ್ಟೆ ಮತ್ತೆ ಗೂಡಿಗೆ ಬರಲಾರದು ಚಿಟ್ಟೆಯ ಬದುಕಿನ ಆನಂದ ಆತಂಕಗಳು ಗೂಡಿನೊಳಗಿನ ಜೀವಕ್ಕೆ ಅರ್ಥವಾಗಲಾರವು. ಎಲ್ಲ ಮೌಲ್ಯಗಳನ್ನೂ ಪ್ರಶ್ನಿಸುವಂತಿರುವ ನನ್ನಣ್ಣನ ಬದುಕು ಬಣ್ಣದ ಪ್ರತಿಭಟನೆಯಾಗಿದೆ ಎಂದು ನನಗನಿಸುವುದಿಲ್ಲ.

ಕನಸುಗಳನ್ನು ಮಾರುವ ಕಲಾವಿದ ಎಂದೂ ಹಳಬನಾಗಲಾರ. ಸಮಾಜದ ಎಲ್ಲ ಸಂಘರ್ಷಗಳ ಸಂಗಡ ಅವನು ಸಕ್ರೀಯನಾಗಿರುತ್ತಾನೆ. ಸಮಾಜದಲ್ಲಿ ಶಾಂತಿ ಸಮೃದ್ಧಿಯಿದ್ದಾಗ ಮಾತ್ರ ಕಲಾವಿದನ ಬದುಕು ಅನುಕೂಲವಾಗಿರುತ್ತದೆ. ಸಾಮಾಜಿಕ ಶಾಂತಿಗಾಗಿ ಪ್ರಾರ್ಥಿಸುವರಲ್ಲಿ ಕಲಾವಿದನೆ ಮೊದಲಿಗನಾಗಿರುತ್ತಾನೆ.

ರಂಗ ನಟನೊಬ್ಬ ಹಗಲಿನ ವಿದ್ಯಾರ್ಥಿ, ರಾತ್ರಿಯ ಶಿಕ್ಷಕನಾಗಿರಬೇಕು. ನನ್ನಣ್ಣ ಬದುಕಿನ ಪಾಠಶಾಲೆಯ ವಿದ್ಯಾರ್ಥಿ, ಬಣ್ಣ ಅವರ ಬದುಕಿನಲ್ಲಿ ಬೆಳಗಲೆಂದು ಬಯಸುತ್ತೇನೆ."

–ದಿವಾಕರ ಹೆಗಡೆ – ಕೃಪೆ:"ರಂಗಾಂತರಂಗ"

ಸವದತ್ತಿಯಿಂದ ಮುಧೋಳಗೆ ಬಂದ ಶ್ರೀಧರ ಹೆಗಡೆಯವರ ಕಂಪನಿ ಅಲ್ಲಿ ೧೯೮೫ ಜೂನ್ ಎರಡನೇ ವಾರದಲ್ಲಿ **"ಚೆನ್ನಪ್ಪ ಚೆನಗೌಡ"** ನಾಟಕದಿಂದ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಚೆನ್ನಾಗಿನೇ ನಡೆಯಿತು. ಇಪ್ಪತ್ತು ಪ್ರಯೋಗವಾದೊಡನೆ ನಾಯಕಿಪಾತ್ರ ಮಾಡುತ್ತಿದ್ದ ಕಲಾವಿದೆ. ಶೈಲಾ ಜೇವರ್ಗಿ ಇದ್ದಕ್ಕಿದ್ದಂತೆ ಫಕೀರಪ್ಪನವರ ಜೊತೆ ಜಗಳ ಕಾದು ಹೊರಟು ಹೋದಳು ಆ ಪಾತ್ರಕ್ಕೆ ಮತ್ತೊಬ್ಬ ನಟಿಯನ್ನು ತಂದರು ಜನರಲ್ಲಿ ಮೊದಲು ಅಭಿನಯಿಸಿದ ಕಲಾವಿದೆ ಪ್ರಭಾವ ಬೀರಿದ್ದರಿಂದ ಹೊಸದಾಗಿ ಬಂದ ನಟಿಯ ಅಭಿನಯ ಮೆಚ್ಚಿಕೊಳ್ಳಲಿಲ್ಲ. ಕಲೆಕ್ಷನ್ ಕಡಿಮೆಯಾಗುತ್ತ ಸಾಗಿತು.

ಫಕೀರಪ್ಪವರದಿ – ಶ್ರೀಧರ ಹೆಗಡೆ ಇರ್ವರೂ ಪರಸ್ಪರ ಹೊಂದಿಕೊಂಡು ವಿಶ್ವಾಸದಲ್ಲಿ ಸಾಗಿಬಂದಿದ್ದರೂ ಬೇರೆ ಬೇರೆ ಕಾರಣಗಳಿಂದ ಕಂಪನಿ ಅವನತಿಯತ್ತ ಸಾಗಿತು. ಕಲಾವಿದರ ದೌರ್ಬಲ್ಯ, ಕಲಾವಿದರ ಬೇಜವಾಬ್ದಾರಿ ಸಹಜವಾಗಿ ಕಂಪನಿಯ ಮೇಲೆ ಪ್ರಭಾವ ಬೀರಿದವು. ಸಾಲದ ಮೇಲೆ ಸಾಲ ದುಡಿದಿದ್ದೆಲ್ಲ ಬರೀ ಸಾಲಕ್ಕನೇ ಹೊಂದಿಸುವುದಾಗಿತ್ತು. ಅದುವರೆಗಿನ ದೀರ್ಘ ರಂಗ ಬದುಕಿನಲ್ಲಿ ಗಳಿಸಿದ್ದೆಂದರೆ ಹೆಸರು, ಪಾತ್ರ ಅಭಿನಯದ ಬಗ್ಗೆ ಪ್ರೇಕ್ಷಕರ ಮೆಚ್ಚುಗೆನೆ, ಅದೇ ಆಸ್ತಿಯಾಗಿತ್ತು. ಆರ್ಥಿಕವಾಗಿ ಏನೂ ಮಾಡಿಕೊಳ್ಳಲಾಗಲಿಲ್ಲ. ಶ್ರೀಧರ **ಅವರಿಗೆ ಗಣಿತದಲ್ಲಿ ಕಳೆಯುವುದೊಂದೇ ಗೊತ್ತು ಕೂಡಿಸುವುದು ಕಲಿಯಲೇ** ಇಲ್ಲ. ಸೋತು ಸುಸ್ತಾಗಿ ಕಂಪನಿ ನಿಲ್ಲಿಸುವ ನಿರ್ಧಾರವನ್ನು ಫಕೀರಪ್ಪನವರಿಗೆ ತಿಳಿಸಿದರು. ಇಬ್ಬರದೂ ಒಂದೇ ವಿಚಾರವಾಯಿತು.ಇಬ್ಬರಲ್ಲಿ ಎಂದೂ ಭಿನ್ನಾಭಿಪ್ರಾಯವಿರಲಿಲ್ಲ ಈಗಲೂ ಇಬ್ಬರಲ್ಲಿ ಅದೇ ವಿಶ್ವಾಸಿ. ಅದೇ ಗೌರವ ಭಾವನೆ. ಅದೇ ಆತ್ಮೀಯತೆ ೧೯೮೫ ಅಗಷ್ಟ ತಿಂಗಳ ಸಂಘ ಮಂಗಲ ಹಾಡಿತು.

**ಮತ್ತೆ ತಿರುಗಾಟ:**

ಮುಧೋಳ ಕ್ಯಾಂಪಿನಲ್ಲಿ ಕಂಪನಿ ಬಂದಾದ ನಂತರ ಶ್ರೀಧರ ಅವರು ಬೇರೆ ಬೇರೆ ಕಂಪನಿಯಲ್ಲಿ ದುಡಿಯುತ್ತ ಆಗಾಗ ಟ್ರಿಪ್ ಮಾಡುತ್ತ ಹಳ್ಳಿ ಹಳ್ಳಿಗಳಲ್ಲಿ ನಾಟಕ ಪ್ರಯೋಗಿಸುತ್ತ ಸಾಗಿದರು. ಒಂದು ಸ್ವತಂತ್ರ ಕಂಪನಿ ಕಟ್ಟಿಕೊಂಡು ನಾಡಿನೆಲ್ಲೆಲ್ಲಿ ಸುತ್ತಿ ಜಯಭೇರಿ ಬಾರಿಸಿ ಈಗ ಮತ್ತೊಬ್ಬರ ಕಂಪನಿಯಲ್ಲಿ

ನಾಟಿನಾಗಿ ದುಡಿತಯವುದು ನೋವುಂಟು ಮಾಡಿದರೂ ಬೇರೆ ಗತಿನೇ ಇರಲಿಲ್ಲ ಸಣ್ಣ ಕಂಪನಿಗಳಲ್ಲೇ ನಟರಾಗಿ, ನಿರ್ದೇಶಕರಾಗಿ ಸೇವೆಸಲ್ಲಿಸುತ್ತ ಸಾಗಿದ ಶ್ರೀಧರ ಅವರಿಗೆ ಮತ್ತೆ ಅನಾಥ ಪ್ರಜ್ಞೆ ಕಾಡುತ್ತಿತ್ತು. ಏಕಾಂಗಿಯಾಗಿ ಸಾಗಿದ್ದು. ತಾರಾ ಪತ್ನಿಯರೂ ದೂರಾಗಿದ್ದರು. **"ನಗುವಾಗ ಎಲ್ಲ ನಂಟರು ಅಳುವಾಗ ಯಾರೂ ಇಲ್ಲ"** ಎನ್ನುವ ಹಾಡು ಇಲ್ಲಿ ಅಕ್ಷರಸಹ ಅರ್ಥ ಪಡೆದಿತ್ತು. ಶ್ರೀಧರ ಅವರ ಬದುಕಿನಲ್ಲಿ ಬಂದು ಹೋದ ಸ್ನೇಹಿತೆಯರಿಗೆ ಪ್ರೀತಿ, ವಿಶ್ವಾಸದ ಬದುಕು ಇರಲಿಲ್ಲ. ಆಡಂಬರ, ಮಾಲಿಕತ್ವ, ಆಗ ಮಾಲೀಕರ ಪತ್ನಿ ಎನ್ನಿಸಿಕೊಳ್ಳುವುದು ಅವರ ಜೀವನದ ಗುರಿಯಾಗಿತ್ತು. ಅವರಿಗೆ ಪ್ರೀತಿ ಸ್ನೇಹಿತಕ್ಕಿಂತ ಮುಖ್ಯವಾದುದು ಸ್ವಾತಂತ್ರ್ಯ. ಐಷರಾಮ್ಯ. ಅವರು ಹೊರಟು ಹೋದಾಗಲೂ ಶ್ರೀಧರ ಅವರು ಮಾತ್ರ ದೃತಿಗೆಡಲಿಲ್ಲ.

ಜೀವನವು ಸದಾಕಾಲ ಸುಖಿಯಾಗಿಯೇ ಇರುವುದಿಲ್ಲ ಜೀವನವೆಂದರೆ ಹೋರಾಟ ಒಂದು ಸ್ಪರ್ಧೆ, ಗೆಲ್ಲಬೇಕೆನ್ನುವ ಮನುಷ್ಯ ಹೋರಾಟದ ಸಿದ್ಧತೆಯಲ್ಲಿರಬೇಕು, ತನ್ನ ದಾರಿಯಲ್ಲಿ ಕಲ್ಲು ಮುಳ್ಳುಗಳಿವೆಯಂದು ಹೆದರಿನಿಂತರಾಗುವುದಿಲ್ಲ ಅವುಗಳನ್ನು ಕಿತ್ತೊಗೆದು ಮುನ್ನಡೆಯಬೇಕು ಇಲ್ಲವೆ ಅವುಗಳನ್ನು ಜಿಗಿದು ಹೋಗುವ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಮನುಷ್ಯನ ಪ್ರಯತ್ನ ಮನುಷ್ಯನ ಅಳತೆಗೆ ಮೀರಿದ್ದಾವುದೂ ಇಲ್ಲ. ಯಾವುದೇ ಸ್ಪರ್ಧೆಯಿರಲಿ ಅದನ್ನು ಗೆದ್ದೇ ತೀರುತ್ತೇನೆನ್ನುವ ಮನೋಭಾವ ಹೊಂದಿರಬೇಕು ಆಗ ಅಸಾಧ್ಯಗಳೆಲ್ಲ ಸಾಧ್ಯವಾಗುತ್ತವೆ. ಅಂಥ ಮನೋಭಾವನೆ, ಮನೋ ನಿರ್ಧಾರ ಶ್ರೀದರ ಹೆಗಡೆಯವರದಾಗಿತ್ತು.

ಕಂಪನಿ ಬಂದಾದ ನಂತರ ಫಕೀರಪ್ಪ ವರವಿ ತಮ್ಮ ಗ್ರಾಮವಾದ ವರವಿಗೆ ಸಾಗಿದರೆ ಶ್ರೀಧರ ಹೆಗಡೆ ಮುಧೋಳದಲ್ಲಿ ಒಂದು ರೂಂ ಹಿಡಿದುಕೊಂಡು ಇರತೊಡಗಿದರು. ಅಭಿನಯಕ್ಕೆ ಕರೆದಾಗ ಇಲ್ಲವೇ ಹೊಸ ಹೊಸ ಚಿಕ್ಕ ಕಂಪನಿಗಳು ಹುಟ್ಟಿಕೊಳ್ಳುವಾಗ ಅಲ್ಲಿ ಹೆಗಡೆಯವ ಮಾರ್ಗದರ್ಶನ, ಪಾತ್ರಗಳಿಗೆ ನಿರ್ದೇಶನ ವಿರುತ್ತಿತು ಕೆಲಸವಿಲ್ಲದಾಗ, ಪಾತ್ರಗಳಿಲ್ಲದಾಗ ಮುಧೋಳ ಗ್ರಂಥಾಲಯಕ್ಕೆ ಹೋಗುವುದು ಪೇಪರ, ಪುಸ್ತಕ ಓದುವುದು ರೂಂಗೆ ಹೋಗಿ ಮಲಗುವುದೇ ಕೆಲಸವಾಯಿತು. ಒಬ್ಬರ ಬದುಕು ಹೇಗೋ ಸಾಗಿತ್ತು. ಕೆಲವು ದಿವಸಗಳು ಖಾಲಿನೇ ಉಳಿಯಬೇಕಾಯಿತು. ಯಾರೂ ಪಾತ್ರಕ್ಕೆ ಕರೆಯಲೇ ಇಲ್ಲ ಇದ್ದ ಸ್ವಲ್ಪ ಹಣ ತೀರಿ ಹೋಗಿತ್ತು ಮತ್ತೆ ಪ್ರಾರಂಭದ ಬದುಕು ನೆನಪಾಯಿತು. ಉಪವಾಸ, ವನವಾಸ ಬಸ್ ಸ್ಟ್ಯಾಂಡ್ ಎಲ್ಲವೂ ನೆನಪಾದವು.

ಇಂಥ ಪ್ರತಿಭಾನ್ವಿತ ಕಲಾವಿದರಿಗೆ ಒಂದು ಕಂಪನಿಯಲ್ಲಿ ಸ್ಥಾನಸಿಗಲಿಲ್ಲವೇಕೆ? ಎನ್ನುವ ಪ್ರಶ್ನೆ ಬಂದಾಗ ಉತ್ತರವಿಷ್ಟೆ. ದೊಡ್ಡ ದೊಡ್ಡ ಕಂಪನಿಯವರಿಗೆ ಇವರನ್ನು ನೇಮಿಸಿಕೊಳ್ಳಲು ಭಯ, ಮತ್ತೆಲ್ಲಿ ಕಲಾವಿದರ ತಲೆ ತುಂಬಿ ಕರೆದುಕೊಂಡು ಹೋಗಿ ಕಂಪನಿ ಪ್ರಾರಂಭಿಸುತ್ತಾನೋ ಎನ್ನುವುದು. ಹೀಗಾಗಿ ದೊಡ್ಡ ದೊಡ್ಡ ಕಂಪೆನಿಗಳಲ್ಲಿ ಅವಕಾಶಗಳು ದೊರೆಯದೇ ಹೋಗುತ್ತಿದ್ದವು.

ಮುಧೋಳದಲ್ಲಿ ಅಜ್ಞಾತವಾಸ ಕಳೆಯುತ್ತಿದ್ದ ಹೆಗಡೆಯವರನ್ನು ಹೇಗೋ ಹುಡಿಕಿಕೊಂಡು ಬಂದ ಬ್ಯಾಡಿಗಿ ರಾಜಣ್ಣಾ ಶ್ರೀಧರ ಅವರನ್ನು ಭೇಟಿಯಾಗಿ ತಮ್ಮ ಕಂಪನಿಯಲ್ಲಿ ಎರಡು ಹೊಸ ನಾಟಕಗಳನು ಕೂಡಿಸಿ ಒಂದೆರಡು ಕ್ಯಾಂಪಿನಲ್ಲಿ ಪಾತ್ರಮಾಡಿ ಕೊಡಬೇಕೆಂದು ಮಾತನಾಡಿ ಒಂದಿಷ್ಟು ಮುಂಗಡ ಹಣ ಕೊಟ್ಟು ಹೋದಾಗ ಶ್ರೀಧರ ಅವರಿಗೆ ಮತ್ತೆ ಜೀವ ಬಂದಂತಾಯಿತು.

ಗೊತ್ತು ಪಡಿಸಿದಂತೆ ಬ್ಯಾಡಿಗಿ ರಾಜಣ್ಣನವರ ಕಂಪನಿಗೆ ಹೋಗಿ ನಾಟಕ ಪ್ರಾಕ್ಟೀಸ ಮಾಡಿಸಿಕೊಟ್ಟು ಆಗಾಗ ಪಾತ್ರಗಳನ್ನೂ ಮಾಡುತ್ತ ಕೆಲವು ದಿವಸ ಕಳೆದಾಯಿತು ಹಾಗೆ ಬ್ಯಾಡಗಿ ರಾಜಣ್ಣನವರ ಕಂಪನಿಯಲ್ಲಿ ಪಾತ್ರ ಮಾಡಲು ಅಥಣಿ ತಾಲೂಕಿನ ಐನಾಪೂರ ಕ್ಯಾಂಪಿನಲ್ಲಿ ಕೆಲವರ ಪರಿಚಯವಾಯಿತು. ಪರಿಚಯ ಸ್ನೇಹದಲ್ಲಿ ಪರಿವರ್ತನೆಯಾದಾಗ ಅವರೆಲ್ಲ ನಾವು ಸಹಾಯ ಮಾಡುತ್ತೇವೆ ನೀವು ಕಂಪನಿ ಮಾಡಿರೆಂದು ಪ್ರೋತ್ಸಾಹಿಸಿದಾಗ ಹೆಗಡೆಯವರಿಗೆ ಮತ್ತೆ ಕಂಪನಿಯ ಕನಸು.

ಕನಸು ನನಸಾಯಿತು, ಅಥಣಿಯಿಂದ ೨೫-೫-೧೯೮೮ ರಂದು ಶ್ರೀಧರ ಹೆಗಡೆಯವರ ಸ್ವತಂತ್ರ ಕಂಪನಿ **"ಶ್ರೀ ರಾಘವೇಂದ್ರ ನಾಟ್ಯ ಸಂಘ"** ಸಿದ್ಧಾಪುರ ಎಂದು  ಪ್ರಾರಂಭಿಗೊಂಡಿತು ಪ್ರಪ್ರಥಮ ನಾಟಕ ಕೆ.ಮಹಾದೇವಯ್ಯ ನವರು ರಚಿಸಿದ **"ನನ್ನವರು ನನ್ನ ಹಡೆದವರು"**. ಪ್ರಾರಂಬದ ಕಲಾವಿದರೆಂದರೆ ಲೋಕೇಶ ತುಮಕೂರ, ಸಂಗಮೇಶ, ಸಂಗಮ, ಅಯ್ಯಣ್ಣಾ ಸ್ವಾಮಿ, ಶ್ರೀಶೈಲ ರಬಿಕವಿ, ಶಿವಣ್ಣಾ ಶ್ರೀಗೇರಿ ಮನೋರಂಜಿನ, ಶೋಭಾ ತುಮಕೂರು, ರೇಣುಕಾ ಹೊಸಪೇಟೆ ಹಾರ್ಮೋನಿಯಂ ಕಲಾವಿದರಾಗಿ ಎಲ್.ಬಿ.ಶೇಖಮಾಸ್ತರ. ೧೯೮೦ ರಿಂದಲೇ ಶ್ರೀಧರ ಹೆಗಡೆಯವರಿಗೆ ಶೇಖ ಮಾಸ್ತರ ಪರಿಚಯವಿತ್ತು ಗ್ರಾಮೀಣ ಪ್ರದೇಶದಲ್ಲಿ ಆಗ ಶೇಖ ಮಾಸ್ತರ ಸಂಗೀತ ಮಾಸ್ತರರಾಗಿ ಸೇವೆ ಸಲ್ಲಿಸುತ್ತಿದ್ದರು ಮುಂದೆ ೧೯೮೫ ರಲ್ಲಿ **"ಶ್ರೀ ಗುರುಕುಮಾರೇಶ್ವರ ನಾಟ್ಯ ಸಂಘ ಹಾನಗಲ್"** ಕಂಪನಿ ಪ್ರಾರಂಭಿಸಿ ೧೯೮೭ ವರೆಗೆ ಕಂಪನಿ ನಡೆಸಿ ಬಂದು ಮಾಡಿದರು. ಹೀಗಾಗಿ ಸಂಗೀತಕ್ಕೆ ಶೇಖಮಾಸ್ತರರನ್ನು ತಮ್ಮ ಕಂಪನಿಗೆ ಆಮಂತ್ರಿಸಿದ್ದರು.

ಹೆಗಡೆಯವರ ಕಂಪನಿ ಅಥಣಿಯಲ್ಲಿ ಯಶಸ್ವಿಯಾಗಿ ನಾಟಕ ಪ್ರಯೋಗಿಸುತ್ತ ಜನಮನ ಸೆಳೆದು ಉತ್ತಮ ರೀತಿಯಲ್ಲಿಯೇ ನಡೆಯಿತು. ಆದರೆ ಅಲ್ಲಿಯವರೆಗೂ ಇರದ ಮಳೆ ಇದ್ದಕ್ಕಿದ್ದಂತೆ ಪ್ರಾರಂಭಿವಾಗಿ ಪ್ರತಿದಿನ ನಾಟಕದ ಸಮಯಕ್ಕನೇ ಪ್ರಾರಂಭಿವಾಗುತ್ತದ್ದರಿಂದ ಪ್ರೇಕ್ಷಕರ ಸಂಖ್ಯೆ ಕ್ಷೀಣಿಸುತ್ತ ಸಾಗಿತು. ನಿರಂತರ ಮಳೆ ಸುರಿಯುತಿತಿದ್ದರಿಂದ ಏನೂ ಮಾಡಲು ಸಾದ್ಯವಾಗಲಿಲ್ಲ. ಮತ್ತೆ ಹಾನಿ ಪ್ರಾರಂಭಗೊಂಡಿತು ಥೇಟರ್ ಸಂಪೂರ್ಣ ಬಾಡಿಗೆಯದ್ದಾಗಿಗಿದ್ದರಿಂದ ಖರ್ಚಿನ ಮೇಲೆ ಖರ್ಚು ಹೆಚ್ಚುತ್ತಲೇ ಸಾಗಿತು.  ಮಳೆಗಾಲ ಮುಗಿಯುವವರೆಗೂ ಹೇಗೋ ದಿನಗಳನ್ನು ಕಳೆಯುತ್ತ ನಂತರ ಸಿನಿಮಾ ತಾರೆಯರನ್ನು ಕರೆಯಿಸಿ ನಾಟಕ ಪ್ರದರ್ಶಿಸುತ್ತ ಸಾಗಿದಾಗ ಸಾಲತೀರಿ ಸ್ವಲ್ಪ ಅನುಕೂಲವಾಯಿತು. ಆದರೆ ಕಂಪನಿಯ ಪ್ರಮುಖ ಕಲಾವಿದ ಶ್ರೀಧರ ಅವರ ಆತ್ಮೀಯ ವ್ಯಕ್ತಿಯಿಂದಲೇ ಶ್ರೀಧರ ಅವರು ಹಿಂಸೆ ಅನುಭವಿಸಬೇಕಾಯಿತು. ಅವನನ್ನು ದೂರ ಮಾಡುವಂತೆಯೂ ಇಲ್ಲ, ಕಂಪನಿಯಲ್ಲಿ ಇರಿಸಿಕೊಳ್ಳುವಂತೆಯೂ ಇಲ್ಲ ಅಂಥ ಸಂದರ್ಭ ಆತ್ಮೀಯ ವ್ಯಕ್ತಿಯಿಂದಲೇ ಅವರಿಗೆ ಬಹಳ ವ್ಯಥೆಯಾಯಿತು.

ಅಥಣಿ ಕ್ಯಾಂಪಿನಲ್ಲಿ ಚೊಂಚ ವಿಜಯ ಎನ್ನುವ ವ್ಯಕ್ತಿ ಮ್ಯಾನೇಜರಾಗಿ ಬಂದರು. ಶೇಖ ಮಾಸ್ತರರ ಸೂಚನೆಯಂತೆ ಕಂಪನಿಯಲ್ಲಿ ಅವರಿಗೆ ಅವಕಾಶಕೊಟ್ಟಾಗಿತ್ತು. ಚೊಂಚ ವಿಜಯ ಒಬ್ಬ ಸಂಘಟಕ, ಒಬ್ಬ ಉತ್ತಮ ಆಡಳಿತಗಾರ ಕೆಲಸದ ಬಗ್ಗೆ ಸಂಘಟನೆಯ ಬಗ್ಗೆ ಎರಡು ಮಾತಿಲ್ಲ, ಆದರೆ ಬದ್ಧತೆಗೆ, ನಿಷ್ಠೆಗೆ, ಪ್ರಾಮಾಣಿಕತೆಗೆ ಅಹಟ ವಲ್ಲವೆನ್ನುವುದೇ ಶ್ರೀಧರ ಅವರ ವಿಚಾರ. ಶೇಖ ಮಾಸ್ತರರ ನಂಬಿಕೆಯ ವ್ಯಕ್ತಿಯಾಗಿದ್ದರಿಂದ ಶ್ರೀಧರ ಹೆಗಡೆ ಹೆಚ್ಚು ಆಲೋಚಿಸಲಿಲ್ಲ. ಅವರು ಆಲೋಚಿಸಿದ್ದು ಜವಾಬ್ದಾರಿಗಳಿಂದ ಸರಿದು ಮಾಲಿಕತ್ವದಿಂದ ಹೊರಬಂದು ನಟನಾಗಿ ದುಡಿಯುವುದುದಾಗಿತ್ತು. ಅಲ್ಲಿಗೆ ಅವರ ಕಂಪನಿ ಮಾಲೀಕತ್ವ ಮುಗಿದಂತಾಯಿತು.

೧೯೮೮ ನವೆಂಬ್ವರ ತಿಂಗಳಲ್ಲಿ ಮಹಾಲಿಂಗಪುರ ಕ್ಯಾಂಪಿನಿಂದ ಶೇಖಮಾಸ್ತರ ಅವರ ಮಾಲಿಕತ್ವದಲ್ಲಿ **"ಶ್ರೀಗುರು ಕುಮಾರೇಶ್ವರ ನಾಟ್ಯ ಸಂಘ"** ಹಾನಗಲ್ ಎಂದು ಕಂಪನಿ ನಾಂದಿ ಹಾಡಿತು ಶ್ರೀಧರ ಹೆಗಡೆಯವರು ನಟರಾಗಿ, ನಿರ್ದೇಶಕರಾಗಿ ಕಂಪನಿಯ ಒಳಾಂಗಣದ ಜವಾಬ್ದಾರಿಯೊಂದಿಗೆ ಕಾರ್ಯನಿರ್ವಹಿಸ ಹತ್ತಿದರು. ಶೇಖ ಮಾಸ್ತರರ ಒಡೆತನದಲ್ಲಿ ಕಂಪನಿ ಸಾಗಿತ್ತು ಅಂದಿನಿಂದ ಇಂದಿನ ವರೆಗೂ ಅದೇ ಮೇನ್ ಬೋರ್ಡಿನಲ್ಲಿ ಅದೇ ಶೇಖ ಮಾಸ್ತರರ ಒಡೆತನದಲ್ಲಿ ಶ್ರೀಧರ ಹೆಗಡೆಯವರು ಸಂಚಾಲಕರಾಗಿ ಸಾಗಿಬಂದಿದ್ದಾರೆ. ಈ ಮೂವತ್ತು ವರ್ಷಗಳ ಅವಧಿಯಲ್ಲಿ ಶೇಖ ಮಾಸ್ತರ ಹಾಗೂ ಶ್ರೀದರ ಹೆಗಡೆಯವ

**ಪರಸ್ಪರ ಸ್ನೇಹದಿಂದ ವಿಶ್ವಾಸದಿಂದ ಆತ್ಮೀಯವಾಗಿ ಬಂದಿರುವದು ಬಹಳ ಜನ ಮಾಲಿಕರಿಗೆ ಅಚ್ಚರಿ.**

ಮಹಾಲಿಂಗಪೂರದಿಂದ ಕಂಪನಿ ಕೊಪ್ಪಳ ಜಾತ್ರೆಗೆ ಬಂದಿತು **"ಹೆಸರಿಗೊಬ್ಬ ಗಂಡ"** ಎನ್ನುವ ನಾಟಕದೊಂದಿಗೆ (೧೯೮೯ ಜನವರಿ ೧೯ ರಂದು) ಜಾತ್ರೆ ಕ್ಯಾಂಪು ಪ್ರಾರಂಭಗೊಂಡಿತು. ಜಾತ್ರೆಯಲ್ಲಿ ಇನ್ನೆರಡು ಕಂಪನಿಗಳಿದ್ದರೂ ಶೇಖಮಾಸ್ತರರ ಕಂಪನಿಗೆ ವಜ್ರ ಮುನಿ ಬಂದದ್ದರಿಂದ ಥೇಟರ ಹೌಸ್ ಫುಲ್ಲಾಗಿತ್ತು ಎರಡನೇ ನಾಟಕ ಇನ್ನೇನು ಪ್ರಾರಂಭವಾಗಬೇಕೆನ್ನುವ ಸಮಯದಲ್ಲಿ ಕರೆಂಟು ಹೋಯಿತು ಜನರೇಟರ್ ಪ್ರಾರಂಭವಾಗಲಿಲ್ಲ. ಜನರ ತಾಳ್ಮೆ ಕಳೆದು ಹೋಯಿತು. ಎಷ್ಟು ಸಮಾಧನ ಪಡಿಸಿದರೂ ಜನರ ಆಕ್ರೋಶ ನಿಲ್ಲಲಿಲ್ಲ ಪ್ರೇಕ್ಷಕರ ಕೋಪಕ್ಕೆ ತಟ್ಟಿ ಥೇಟರ ಕಿತ್ತು ಹೋಯಿತು. ಬಯಲಿನಲ್ಲಿಯೇ ನಾಟಕವಾಡಿ ಮುಗಿಸಿದ್ದಾಯಿತು. ಮರುದಿನ ವಜ್ರಮುನಿ ಹೇಳದೇ ಕೇಳದೇ ಐ.ಬಿ.ಯಿಂದ ಬೆಂಗಳೂರಿಗೆ ಹೋಗಿ ಬಿಟ್ಟಿದ್ದರು. ಮತ್ತೆ ಬೇರೆ ಬೇರೆ ಚಲನಚಿತ್ರ ನಟ – ನಟಿಯರನ್ನು ಕರೆತಂದು ಯಶಸ್ವಿಯಾಗಿನೇ ಜಾತ್ರೆ ಕ್ಯಾಂಪು ಮುಗಿಸಿದ್ದಾಯಿತು. ಮುಂದೆ ಅಲ್ಲಿಂದ ಕಂಪನಿ ಲಕ್ಷ್ಮೇಶ್ವರಕ್ಕೆ ಸಾಗಿತು.

ಲಕ್ಷ್ಮೇಶ್ವರದಲ್ಲಿ ಕಂಪನಿ ಯಶಸ್ವಿಯಾಗಿನೇ ನಡೆಯಿತು ಅಲ್ಲಿ ಸಮಸ್ಯೆಯಾಗಿ ಕಾಡಿದ್ದು ಮ್ಯಾನೇಜರ ಚೊಂಚ ವಿಜಯ. ಪ್ರತಿದಿನ ಬುಕಿಂಗಿನಲ್ಲಿ ಹಣ ಪಡೆಯುತ್ತಿದ್ದ ಅದನ್ನೇನು ಮಾಡುತ್ತಿದ್ದ ಎನ್ನುವ ಲೆಕ್ಕನೇ ಗೊತ್ತಾಗುತ್ತಿರಲಿಲ್ಲ, ಕೊನೆಗೆ ಗೊತ್ತಾಗಿದ್ದು ಪ್ರತಿದಿನ ಗದಗ ಕ್ಲಬ್ಬಿನಲ್ಲಿ ಇಸ್ಪೀಟು ಆಡುತ್ತಿದ್ದುದು. ಶೇಖಮಾಸ್ತರರಿಗೆ ವಿಜಯಕುಮಾರನ ಮೇಲಿದ್ದ ನಂಬಿಕೆ ಹೋಯಿತು. ಅವನಿಂದ ಸಾಲ ಹೆಚ್ಚುತ್ತ ಕಂಪನಿ ಬಂದು ಮಾಡಿ ಬರಿಗೈಯಿಂದ ಶೇಖಮಾಸ್ತರ ಶ್ರೀಧರ ಹೆಗಡೆಯವರು ವಿಜಯಪುರಕ್ಕೆ ಮರುಳುವಂತಾಯಿತು. ಶೇಖಮಾಸ್ತರ ಕೆವ್ರುದಿವಸ ವಿಜಯಪುರ ಮನೆಯಲ್ಲಯೇ ಉಳಿದರೆ ಶ್ರೀಧರ ಹೆಗಡೆ ಅವರು ಕೂಡಾ ಅಲ್ಲಿಯೇ ರೂಂ ಹಿಡಿದುಕೊಂಡು ಉಳಿದರು.

ಬೇಸಿಗೆಯ ದಿನಗಳಲ್ಲಿ, ಸಣ್ಣ ಸಣ್ಣ ಜಾತ್ರೆಗಳಲ್ಲಿ ಟ್ರೈಪ್ ಮಾಡಿಕೊಂಡು ಶ್ರೀ ಶೇಖ ಮಾಸ್ತರ, ಶ್ರೀಧರ ಹೆಗಡೆ ಅದೇ ಮೇನ್ ಬೋರ್ಡಿನಲ್ಲಿ **"ಶ್ರೀಗುರು ಕುಮಾರೇಶ್ವರ ನಾಟ್ಯ ಸಂಘ"** ಹಾನಗಲ್ ಎಂದು ಸಾಗಿದರು. ಆಗಾಗ ಟ್ರೈಪ್ ಬಂದು ಮಾಡಿ ಮತ್ತೆ ಅಮೇಚೂರ, ನಾಟಕಗಳಿಗೆ. ಶೇಖಮಾಸ್ತರ ಸಂಗೀತ ಮಾಸ್ತರರಾಗಿ ಹೋದರೆ ಹೆಗಡೆಯವರು ಅತಿಥಿ ನಟರಾಗಿ ಹೋಗುತ್ತಿದ್ದರು. ಸುಮಾರು ಎರಡು ವರ್ಷಗಳ ಕಾಲ ಹೀಗನೇ ಸಾಗಿತು ಈ ಸ್ನೇಹಿತರ ಬದುಕು.

ಶ್ರೀಧರ ಹೆಗಡೆಯವರಿಗೆ ಯಾಕೋ ಏನೋ ನಾಟಕ ಕಂಪನಿ ನಟನೆ ಸಾಕೆನಿಸಿ ರೋಸಿ ಹೋಯಿತು. ಆದರೆ ಅದನ್ನು ಬಿಟ್ಟರೆ ಬೇರೆನೂ ಉದ್ಯೋಗ ಗೊತ್ತಿರಲಿಲ್ಲ. ಅಲ್ಲದೇ ಬೇರೆ ಉದ್ಯೋಗ ಪ್ರಾರಂಭಿಸಬೇಕೆಂದರೆ ಬಂಡವಾಳ ತೊಡಗಿಸಬೇಕು. ಇಬ್ಬರಲ್ಲಿಯೂ ಹಣ ಇರಲಿಲ್ಲ. ಶೇಖಮಾಸ್ತರ ಶ್ರೀಧರ ಅವರಿಗೆ ಹೇಳಿದ್ದು **"ಹೆಗಡೆಯವರೇ ನಾವೆಲ್ಲಿ ಕಳೆದುಕೊಂಡಿದ್ದೇವೆಯೋ ಅಲ್ಲಿಯೇ ಹುಡುಕೋಣ"** ವೆಂದರು.

ಬೇಸಿಗೆಯ ದಿನಗಳು ಪ್ರಾರಂಭವಾಗುತ್ತಿದ್ದಂತೆ ಸಣ್ಣ ಸಣ್ಣ ಜಾತ್ರೆಗಳ ಕ್ಯಾಂಪಿಗಾಗಿ ಜಾತ್ರೆ ಜಾಗ ಹಿಡಿದುಕೊಂಡು ಬಂದು ಬಾಡಿಗೆ ಸಲಕರಣೆಗಳಲ್ಲಿ, ಮತ್ತೆ ಶೇಖಮಾಸ್ತರ ಒಡೆತನದಲ್ಲಿ ಕಂಪನಿ ಮುನ್ನಡೆಯಿತು ಹಾಗೆ ಜಾತ್ರೆ ಕ್ಯಾಂಪಿನಿಂದ ಉಳಿದ ಹಣ ಹಾಗೂ ಶೇಖ ಮಾಸ್ತರರ ಸ್ನೇಹಿತರು ಕೊಟ್ಟಿರ ಸಾಲದ ಹಣದಲ್ಲಿ ಮತ್ತೆ ಸುಸಜ್ಜಿತ ಥೇಟರ ನಿರ್ಮಾಣ ಗೊಂಡಿತು.

೧೯೬೫ ಡಿಸೆಂಬರ ೭ ರಂದು ಸಿಂದಗಿ ತಾಲೂಕಿನ ಕಲಕೇರಿ ಗ್ರಾಮದಿಂದ ನಾದೇ ನರಸಿಂಹ ಕವಿ ರಚಿಸಿದ **"ಎಚ್ಚರ ತಂಗಿ ಎಚ್ಚರ"** ನಾಟಕದಿಂದ ಕಂಪನಿ ಮತ್ತೆ ಪ್ರಾರಂಭಗೊಂಡು ಉಳಿದ ಕಂಪನಿಗಳಲ್ಲಿ ತನ್ನ ಅಸ್ತಿತ್ವ ಗುರುತಿಸಿಕೊಂಡು ಜನಮನ ಸೆಳೆಯುತ್ತ ಒಂದೇ ವರ್ಷದಲ್ಲಿ ಸಂಪೂರ್ಣ ಸ್ವತಂತ್ರ ಸಲಕರಣೆಗಳನ್ನು ಹೊಂದಿ ನಾಡಿನ ದೊಡ್ಡ ದೊಡ್ಡ ಕಂಪನಿಗಳಲ್ಲೊಂದಾಗಿ ಮುನ್ನಡೆಯಿತು. ಕಂಪನಿ ಹಾನಿ ಅನುಭವಿಸಿದಾಗ ಶೇಖ ಮಾಸ್ತರ ಹಣ ತಂದು ಹಾಕಿದರೆ ಶ್ರೀಧರ ಹೆಗಡೆ ಕಂಪನಿಯ ಒಳ ಜವಾಬ್ದಾರಿಗಳನ್ನೆಲ್ಲ ನಿಭಾಯಿಸುತ್ತಿದ್ದರು.

ಶೇಖ ಮಾಸ್ತರ ಮನೆ, ಸಂಸಾರ ಮರೆತು ಸಂಘಕ್ಕಾಗಿ ತೊಡಗಿಸಿಕೊಂಡಿದ್ದರೆ ಏಕಾಂಗಿಯಾಗಿದ್ದ ಶ್ರೀಧರ ಹೆಗಡೆಯವರ ಜೀವನವಂತೂ ಪೂರ್ತಿ ಥೇಟರಿನಲ್ಲಿಯೇ ಸಾಗಿತ್ತು. ಕಂಪನಿಯ ಸರ್ವತೋಮುಖದ ಬೆಳವಣಿಗೆನೇ ಇಬ್ಬರ ಗುರಿಯಾಗಿತ್ತು. ಇಬ್ಬರ ಧ್ಯೇಯವಾಗಿತ್ತು.

ಕಂಪನಿ ಯಶಸ್ವಿಯಾಗಿನೇ ಅನೇಕ ಕ್ಯಾಂಪುಗಳಲ್ಲಿ ಒಳ್ಳೆ ಕಲೆಕ್ಷನ್ ಪಡೆಯುತ್ತ ಮುನ್ನಡೆಯಿತು. ಕಂಪನಿಯ ಯಶಸ್ವಿಯಿಂದ ಹಣ ಸ್ವಲ್ಪ ಸಂಗ್ರಹವಾದುದ್ದರಿಂದ ಶೇಖಮಾಸ್ತರ ಬ್ರ್ಯಾಂಚ ಕಂಪನಿ ಚಿಂತಿಸಿ ಪ್ರಾರಂಭಿಸಿದರು. ಬ್ರಾಂಚ ಕಂಪನಿಗೆ ಹೆಚ್ಚು ಗಮನ ಕೊಡಲಾಗದ್ದರಿಂದ ಅದು ಬಹುಬೇಗ ಹಾನಿ ಅನುಭವಿಸಿ ಬಂದಾಯಿತು.

ಹೆಡ್ ಕಂಪನಿ ಮಾತ್ರ ಚೆನ್ನಾಗಿನೇ ಸಾಗಿತ್ತು. ಕಲೆಕ್ಷನ್ ಏರಿಳಿತದಲ್ಲಿದ್ದರೂ ಹಾನಿ ಅನುಭವಿಸಿರಲಿಲ್ಲ. ೧೯೯೮ ಎಪ್ರಿಲ್ ಚಿಕ್ಕೋಡಿ ತಾಲೂಕಿನ ಸದಲಗಾ ಕ್ಯಾಂಪು, ಸಾಧಾರಣ ಕಲೆಕ್ಷನ್ ೧೫-೨೦ ದಿನಗಳು ಕಳೆದಿರಬೇಕು ಆಕಸ್ಮಿಕ ಬೀಸಿದ ಬಿರುಗಾಳಿಗೆ ಥೇಟರ ಸಂಪೂರ್ಣ ನೆಲಕಚ್ಚಿತು. ಕ್ಯಾಂಪು ಕ್ಲೋಜ ಮಾಡುವ ವಿಚಾರದಲ್ಲಿದ್ದ ಶೇಖಮಾಸ್ತರರಿಗೆ, ಊರಿನವರು ಕ್ಲೋಜ್ ಮಾಡಬೇಡಿ ಮತ್ತೆ ಥೇಟರ ಹಾಕಿಸಿರಿ, ಚೆನ್ನಾಗಿ ಆಗುತ್ತದೆ ಎಂದರು. .ಒಮ್ಮೆ ಥೇಟರ ಬಿದ್ದ ಮೇಲೆ ಮತ್ತೆ ಕಲೆಕ್ಷನ್ ಆಗುವುದು ಕಷ್ಟ ಕ್ಲೋಜ ಮಾಡುವುದೇ ಸರಿಯೆನ್ನುವ ನಿರ್ಧಾರಕ್ಕೆ ಶೇಖ ಮಾಸ್ತರ ಬಂದಿದ್ದರೂ ಜನರ ಒತ್ತಾಯಕ್ಕೆ, ಶ್ರೀಧರ ಹೆಗಡೆ ಥೇಟರ ಹಾಕಿಸಿ ನಾಟಕ ಪ್ರಾರಂಭಿಸಿದರು.

ಅಲ್ಲಿಯ ಜನರ ನಿರೀಕ್ಷೆಯಂತೆ ಉತ್ತಮ ಕಲೆಕ್ಷನ್ ಆಯಿತು. ಕಂಪನಿ ಮುನ್ನಡೆದಿದ್ದು ಮಾಲಿಕರಿಗೆ ಶ್ರೀಧರ ಅವರಿಗೆ ಸಮಾಧಾನ ತಂದಿತು. ಮೊದಲು ಪ್ರಾರಂಭದಲ್ಲಿ ಕಲೆಕ್ಷನ್ ರೂ ೯,೦೦೦/- ಇದ್ದರೆ ನಂತರ ೧೫,೦೦೦/- ನ್ನು ಮೀರಿತು. ಕ್ರಮೇಣ ಸುಮಾರು ಒಂದು ಒಂದೂವರೆ ವರ್ಷದವರೆಗೂ ಬೇರೆ ಬೇರೆ ಕ್ಯಾಂಪಿನಲ್ಲಿ ಕಂಪನಿ ಯಶಸ್ಸಿನಲ್ಲೇ ನಡೆಯಿತು.

೧೯೯೯ ಜೂನ ತಿಂಗಳಲ್ಲಿ, ಬಾಗಲಕೋಟೆ ಕ್ಯಾಂಪು ಅಲ್ಲಿಯೂ ಕಂಪನಿ ಯಶಸ್ವಿಯಾಗಿನೇ ನಡೆಯಿತು. ಆದರೆ ಅಲ್ಲಿಯ ಒಬ್ಬ ಪ್ರತಿಷ್ಠಿತ ವ್ಯಕ್ತಿ ತಮ್ಮ ರಾಜಕೀಯ ಪ್ರಭಾವದಿಂದ ಲೈಸನ್ಸ ರದ್ದುಗೊಳಿಸಿದಾಗ ಅನಿವಾರ್ಯವಾಗಿ ಕ್ಯಾಂಪು ಕ್ಲೋಜ್ ಮಾಡಬೇಕಾಯಿತು. ಮುಂದಿನ ಕ್ಯಾಂಪುಗಳಲ್ಲಿ ಸಂಘ ಹಾನಿ ಅನುಭವಿಸುತ್ತಲೇ ಸಾಗಿತು. ಮುಂದೆ ಕಂಪನಿಗೆ ಆಸರೆಯೆಂದರೆ ಶ್ರೀಮತಿ ಉಮಾಶ್ರೀ. ಪ್ರತಿ ಕ್ಯಾಂಪಿ ಕ್ಲೋಜಿನಲ್ಲಿ **"ಖಾನಾವಳಿ ಚೆನ್ನಿ"** ನಾಟಕದಲ್ಲಿ ಚನ್ನಿ ಪಾತ್ರದಲ್ಲಿ ಅಭಿನಯಿಸಿದಾಗ ಆ ನಾಲ್ಕಾರು ದಿನ ಕಲೆಕ್ಷನ್ ಚೆನ್ನಾಗಿ ಆಗುತ್ತಿದ್ದರಿಂದ ಅದು ಕಲಾವಿದರ ವೇತನಕ್ಕೆ, ಮುಂದಿನ ಕ್ಯಾಂಪು ಪ್ರಾರಂಭಕ್ಕೆ ಸಹಾಯವಾಗಿ ಕಂಪನಿಗೆ ಸಾಲದ ಭಾರ ತಗ್ಗುತ್ತಿತ್ತು.

೨೦೦೦ನೇ ಇಸ್ವಿ ಅಗಷ್ಟ ತಿಂಗಳಲ್ಲಿ **"ಶ್ರೀಗುರು ಕುಮಾರೇಶ್ವರ ನಾಟ್ಯ ಸಂಘ"** ಹಾನಗಲ್ ಮುಧೋಳ ತಾಲೂಕಿನ ಮಹಾಲಿಂಗಪೂರಕ್ಕೆ ಬಂದಿತು. **"ಕಿವುಡ ಮಾಡಿದ ಕಿತಾಪತಿ"** ನಾಟಕ ಪ್ರಾರಂಭದಲ್ಲಿಯೇ ಗಲ್ಲಾಪೆಟ್ಟಿಗೆ ತುಂಬಿಸುತ್ತ ಸಾಗಿತು. ಮಾಲಿಕರಿಗೆ ಸಂಚಾಲಕರಿಗೆ ಸಮಾಧಾನ. ಸಾಲ ಕರಗುತ್ತ ನೆಮ್ಮದಿ ಮೂಡಿತು. ಅದೇ ಸಮಯದಲ್ಲಿ ಶೇಖಮಾಸ್ತರರ ಶ್ರೀಧರ ಹೆಗಡೆಯವರ ಬಹು ದಿನದ ಕನಸು ನನಸಾಯಿತು. ಪರಮ ಪೂಜ್ಯ ಪುಟ್ಟರಾಜ ಕವಿಗಳ

ನಾಣ್ಯ ತುಲಾಭಾರ ಥೇಟರರಲ್ಲಿ ಜರುಗಿತು. ಮಹಾಲಿಂಗಪುರ ಕಲಾಭಿಮಾನಿಗಳು, ಊರಿನ ಗಣ್ಯರು ಸಹಕರಿಸಿದ್ದರಿಂದ, ಆ ಪುಣ್ಯ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು. **ಪೂಜ್ಯ ಪುಟ್ಟರಾಜ ಕವಿಗಳ ಇಂಥ ತುಲಾಭಾರ ಕಂಪನಿಯ ಚರಿತ್ರೆಯಲ್ಲಿ ದಾಖಲೆ.**

ಶ್ರೀಧರ ಹೆಗಡೆಯವರು ಕಂಪನಿಯ ಸಂಚಾಲಕರಾಗಿ, ಕಂಪನಿ ನಿಭಾಯಿಸುತ್ತ ಹೆಚ್ಚಿನ ಕಾಳಜಿವಹಿಸಿ, ನಿಷ್ಠೆಯಿಂದ ದುಡಿಯುತ್ತ ಬಂದುದು ಶೇಖಮಾಸ್ತರ ಮರೆಯುವಂತಿಲ್ಲ. ಶೇಖ ಮಾಸ್ತರರು ತಿರುಗಾಟದಲ್ಲಿದ್ದರೆ, ಶ್ರೀಧರ ಹೆಗಡೆ ಥೇಟರಿಂದ ಅಗಲದೇ ಹಗಲು ರಾತ್ರಿ ಥೇಟರನ್ನೇ ಮನೆ ಮಾಡಿಕೊಂಡು ಎಲ್ಲವನ್ನೂ ನಿಭಾಯಿಸುತ್ತ ಬಂದವರು. ಕಂಪನಿಯ ಆಗು ಹೋಗುಗಳ ಜೊತೆ ಕಲಾವಿದರ, ಕೆಲಸಗಾರರ ಕಷ್ಟ-ನಷ್ಟಗಳಿಗೆ, ಅವರ ಸಮಸ್ಯೆಗಳಿಗೆ , ಸ್ಪಂದಿಸುತ್ತ ಬಂದವರು. ೨೦೦೧ ಮಾರ್ಚ ತಿಂಗಳಲ್ಲಿ ಇಂಡಿ ಕ್ಯಾಂಪಿನಲ್ಲೊಂದು ದುರಂತ ಜರುಗಿದಾಗ, ಬಹಳ ಕಷ್ಟಕ್ಕೀಡಾಗಿದ್ದರು. ನಾಟಕ ಬಿಟ್ಟ ಮೇಲೆ ಒಂದು ದಿನ ಇದ್ದಕ್ಕಿದ್ದಂತೆ ಭಾರೀ ಮಳೆ ಸುರಿದಾಗ, ರಾತ್ರಿ ಹನ್ನೊಂದು ಘಂಟೆಯಾಗಿರಬಹುದು ಥೇಟರ ಹುಡುಗರಾರೋ ಬಂದು ಹೆಗಡೆಯವರನ್ನು ಎಬ್ಬಿಸಿದಾಗ ಅವರಿಗೂ ಗಾಬರಿ, ವಿಚಾರಿಸಿದಾಗ ವಿಜಯ ಎನ್ನುವ ಹುಡುಗನಿಗೆ ಹಾವು ಕಚ್ಚಿತ್ತು. ಮಾಲಿಕರು (ಶೇಖಮಾಸ್ತರ) ಇರಲಿಲ್ಲ. ಯೋಚಿಸಿತ್ತ ಹೆಚ್ಚು ತಡಮಾಡುವಂತಿಲ್ಲ. ಎಲ್ಲಿಯೂ ದವಾಖಾನೆ ತೆರೆದ ಸೂಚನೆ ಕಾಣಲಿಲ್ಲ. ಆಗ ಶ್ರೀಧರ ಹೆಗಡೆಯವರು ಕಾರೊಂದನ್ನು ಬಾಡಿಗೆ ಮುಗಿಸಿಕೊಂಡು ವಿಜಯಪರಕ್ಕೆ ಕರೆದುಕೊಂಡು ಹೊರಟರು. ದಾರಿಗುಂಟ ಹಾವು ಕಚ್ಚಿಸಿಕೊಂಡ ಹುಡುಗನನ್ನು ಮಾತನಾಡಿಸುತ್ತ ಸಮಾಧಾನ ಹೇಳುತ್ತಲೆ ಇದ್ದರು. ವಿಜಯರಪುರ ದವಾಖಾನೆ ಬಂತು, ದವಾಖಾನೆ ಪ್ರವೇಶಿಸುತ್ತಲೇ ಅವನ ಪ್ರಾಣ ಪಕ್ಷಿ ಹಾರಿತ್ತು. ಹಾಗಾದಾಗ ಡಾಕ್ಟರಗಳ ಪೋಲೀಸರು ಹಲವಾರು ಪ್ರಶ್ನೆಗಳಿಗೆ ಉತ್ತರಿಸುತ್ತ ಸಮಸ್ಯೆಗಳೆನ್ನದುರಿಸುತ್ತ ಯಾರ್‍ಯಾರಿಗೋ ವಿನಂತಿಸುತ್ತ ಪೋಷ್ಟಮರ್ಟನ್ ಮುಗಿಸಿ, ಅವನ ಊರಿಗೆ ಪಾಲಕರಿಗೆ ಒಪ್ಪಿಸಿದಾಗ, ಅವರಿಂದ ಅನೇಕ ಪ್ರಶ್ನೆಗಳು, ಅನೇಕ ಸಮಸ್ಯೆಗಳು, ಕುಟುಂಬದ ಸದಸ್ಯರ ಕೋಪ ತಾಪಕ್ಕೆ ಶೀಧರ ತತ್ತರಿಸಿ ಹೋದರು ಅಲ್ಲಿಂದ ಮರಳಿ ಬರುವುದೇ ಕಷ್ಟಕರವಾಗಿತ್ತು.

೨೦೦೩ರಲ್ಲಿ ತಿಂಥಿಣಿ ಜಾತ್ರೆ ಕ್ಯಾಂಪು, ಒಂದೆರಡು ದಿನಗಳ ಹಿಂದೆ ಬೇರೆ ಕಂಪನಿಯ ನಟ ಉಡುಪಿ ಚಂದ್ರು ಬಂದಿದ್ದ ರಂಗ ಕಲಾವಿದ ಉಡುಪಿ ಚಂದ್ರುಗೆ ಆರೋಗ್ಯ ಸರಿ ಇಲ್ಲದಾಗ ಶ್ರೀಧರ ಹೆಗಡೆಯವರೇ ದವಾಖಾನೆಗೆ ಕರೆದುಕೊಂಡು ಹೋಗಿ ಬಂದಿದ್ದರು ಔಷಧಿ ಕುಡಿಸಿ, ರಾತ್ರಿ ಮಲಗಿಸಿ ಹೋದರು.

ಶ್ರೀಧರ ಅವರಿಗೆ ಬೆಳಿಗ್ಗೆ ೫.೦೦ ಗಂಟೆಗೆ ಎಚ್ಚರವಾದಾಗ ಚಂದ್ರುನಲ್ಲಿ ಹೋಗಿ ಮಾತನಾಡಿಸಿಕೊಂಡು ಬಂದರಾಯಿತೆಂದು ಬಂದ ಶ್ರೀಧರ ಅವರಿಗೆ ಆಘಾತ ಕಾದಿತ್ತು. ಚಂದ್ರು ಮಲಗಿದಲ್ಲಿಯೇ ಜೀವ ಬಿಟ್ಟಿದ್ದ. ಜಾತ್ರೆ ಕ್ಯಾಂಪಾಗಿದ್ದರಿಂದ, ಅಲ್ಲಿ ಹತ್ತಿರದಲ್ಲಿ ಫೋನ್ ಬೂತಿರಲಿಲ್ಲ. ನಾಲ್ಕು ಕಿ.ಮೀ. ದೂರದ ಕಕ್ಕೇರಿಗೆ ಬರಬೇಕು. ಯಾರ ಯಾರಿಗನೋ ಫೋನ್ ಮಾಡಿ ಕುಂದಾಪುರ ಹತ್ತಿರವಿದ್ದ ಕುಟುಂಬದವರಿಗೆ ತಿಳಿಸಿದಾಗ ಅವರಿಂದ ಬಂದ ಉತ್ತರ ನೀವೇ ಅಲ್ಲೆ ಅಂತ್ಯ ಕ್ರಿಯೆ ಮಾಡಿಬಿಡಿ ಎಂದು ಹೇಳಿ ಫೋನ್ ಇಟ್ಟು ಬಿಟ್ಟಾಗ, ಶ್ರೀಧರ ಅವರಿಗೆ ಆಶ್ಚರ್ಯವೆನಿಸಿತು. ಕನಿಷ್ಟ ಅಂತ್ಯ ದರ್ಶನವನ್ನಾದರೂ ಕುಟುಂಬದವರಾರೂ ಬಯಸಲಿಲ್ಲ. ಕಲಾವಿದರ ಸಂಬಂಧಗಳ ಬಗ್ಗೆ ಗಂಭೀರವಾಗ ವಿಚಾರಿಸುತ್ತ ಶ್ರೀಧರ ಅವರು ಅಂತ್ಯ ಕ್ರಿಯೆ ನೆರವೇರಿಸಿದರು.

ಇಂಥ ಅನೇಕ ಪ್ರಸಂಗಗಳನ್ನು ಆಘಾತಗಳನ್ನು ಸಮಸ್ಯೆಗಳನ್ನು ಎದುರಿಸುತ್ತ ಶ್ರೀಧರ ಹೆಗಡೆಯವರು ಕೆಲವಡೆ ಮಾನವೀಯತೆಯಿಂದ ಮೇರೆದಿದ್ದಾರೆ. ಕಲಾವಿದರಿಗೆ ತಮ್ಮಿಂದಾದ ಸಹಾಯ, ಸಹಕಾರ ನೀಡುತ್ತ ಪರೋಪಕಾರ ಗುಣದಲ್ಲಿ ಬಂದಿದ್ದಾರೆ. ಕಲಾವಿದರ ಮಕ್ಕಳ ಶಿಕ್ಷಣಕ್ಕೆ, ಕಲಾವಿದರು ಅನಾರೋಗ್ಯದಲ್ಲಿ ಬಳುತ್ತಿದ್ದಾಗ ಆಸ್ಪತ್ರೆಗೆ ಹಣ ನೀಡಿ ಸಹಾಯ ಮಾಡಿದ್ದಾರೆ ತಿಂಥಿಣಿಯಿಂದ ಕಂಪನಿ ಚಿಂಚೋಳಿ ಕ್ಯಾಂಪು ಮುಗಿಸಿದಾಗ, ಶ್ರೀಧರ ಅವರಿಗೆ ಗುಲಬರ್ಗಾ ಕ್ಯಾಂಪು ಮಾಡುವ ವಿಚಾರ ಬಂದಿತು. ಈ ಕ್ಯಾಂಪು ಅವರ ಬಹುದಿನದ ಕನಸಾಗಿತ್ತು. ಗುಲಬರ್ಗಾ ಕ್ಯಾಂಪು ಮಾಡುವದು ಮಾಲಿಕರಿಗೆ, ಕಲಾವಿದರಿಗೆ ಇಷ್ಟವಿರಲಿಲ್ಲ ಗುಲಬರ್ಗಾದಲ್ಲಿ ಕೆಲವು ಕಂಪನಿಗಳು ಹಿಂದೆ ಸಮಸ್ಯೆಗಳನ್ನು ಎದುರಿಸಿದ್ದವು. ಗುಂಡಾ ಜನರು ಥೇಟರ ಹತ್ತಿರ ಹಲವು ಬಾರಿ ಜಗಳ ಕಾದು ಹೊಡೆದಾಟವಾದ ಪ್ರಸಂಗಗಳೂ ಕಲಾವಿದರಿಗೆ ಗೊತ್ತಿತ್ತು. ಅದೇನೇ ಇರಲಿ ಗುಲಬರ್ಗಾ ಕ್ಯಾಂಪು ಮಾಡುವುದೇ ಎಂದು ಶ್ರೀಧರ ಹೆಗಡೆಯವರು ಹಠ ಹಿಡಿದಾಗ ಮಾಲಿಕರು, ಕಲಾವಿದರು ಅನಿವಾರ್ಯವಾಗಿ ಒಪ್ಪಿದರು.

ಶ್ರೀಧರ ಅವರಿಗೆ ಗುಲಬರ್ಗಾ ಕ್ಯಾಂಪು ಹೊಸದಾಗಿದ್ದರೂ, ಚಿಂಚೋಳಿಯಲ್ಲಿ ಪರಿಚಯವಾಗಿದ್ದ ಎಸ್.ಬಿ.ಐ ಬ್ಯಾಂಕ ಮ್ಯಾನೇಜರ, ಶ್ರೀಧನಂಜಯ ಒಡೆಯರ ಗುಲಬರ್ಗಾದವರಾಗಿದ್ದರು. ಅವರು ನಿತ್ಯ ಗುಲಬರ್ಗಾದಿಂದ ಬಂದು ಹೋಗುತ್ತಿದ್ದರು. ಅವರಿಂದ ಎಲ್ಲ ರೀತಿಯ ಸಹಾಯ ಪಡೆದು ಗುಲಬರ್ಗಾ ಕ್ಯಾಂಪು ಮಾಡಿದರು. ಗುಲಬರ್ಗಾ ಕ್ಯಾಂಪಿಗೆ ಕಾರಣವಾದ ಒಡೆಯರ ಶ್ರೀಧರ ಅವರ ಮನದಲ್ಲಿ ಹೃದಯದಲ್ಲಿ ಇಂದಿಗೂ ಉಳಿದಿದ್ದಾರೆ.

೨೨-೮-೨೦೦೩ ರಲ್ಲಿ **"ಕಿವುಡ ಮಾಡಿ ಕಿತಾಪತಿ"** ನಾಟಕ ಅಂದಿನ ಡಿ.ಐ.ಜಿ. ಕೆಂಪಯ್ಯನವರಿಂದ ಉದ್ಘಾಟನೆಗೊಂಡು ಪ್ರಾರಂಭವಾಯಿತು. ಅಂದು ಪ್ರಾರಂಭವಾದ ಕ್ಯಾಂಪು ಇಂದಿಗೂ ಗುಲಬರ್ಗಾದಲ್ಲಿಯೇ ಇದೆ ಹದಿಮೂರು ವರ್ಷದಲ್ಲಿ ಒಂದೆರಡು ತಿಂಗಳು ಜಾತ್ರೆಗಳ ಕ್ಯಾಂಪಿಗಾಗಿ ಹೊರಗೆ ಹೋಗಿ ಬರುವದು ಬಿಟ್ಟರೆ ನಿರಂತರವಾಗಿ ಹದಿಮೂರು ವರ್ಷಗಳಿಂದ ಗುಲಬರ್ಗಾದಲ್ಲಿಯೇ ಕಳೆಯುತ್ತ ಈಗಲೂ ಅಲ್ಲೇ ನೆಲೆ ನಿಂತಿರುವುದು ಆಶ್ಚರ್ಯ. ಕರ್ನಾಟಕದ ಬೇರಾವ ಕಂಪನಿಯೂ ಇಷ್ಟು ದೀರ್ಘ ಅವಧಿ. ಒಂದೇ ಸ್ಥಳದಲ್ಲಿ ನೆಲಸಲು ಇದುವರೆಗೂ ಸಾಧ್ಯವಾಗಿಲ್ಲ. ಇದೊಂದು ವೃತ್ತಿ ನಾಟಕ ಕಂಪನಿಗಳಲ್ಲೇ ದೊಡ್ಡ ದಾಖಲೆ.

ಗುಲಬರ್ಗಾ ರಂಗಾಸಕ್ತರ ಸಹಾಯ, ಸಹಕಾರ ದೊಡ್ಡದು ಗುಲಬರ್ಗಾ ಕ್ಯಾಂಪು ಸುವರ್ಣ ಕಾಲವೆನ್ನದಿರಲಾಗದು. ನ ಭೂತೋ ನ ಭವಿಷ್ಯತಿ ಎನ್ನುವಂತೆ ಹಿಂದೆಯಾಗಿಲ್ಲ ಮುಂದೆ ಆಗೋದಿಲ್ಲ ಎನ್ನುವಂಥ ಕ್ಯಾಂಪು ಇದು. ಕಲಬುರಗಿ ನಾಡಿಗೆ ಕಾಲಿರಿಸಿದ ಕಂಪನಿ ಮಾಲಿಕರಿಗೂ, ಸಂಚಾಲಕರಿಗೂ, ಗ್ರಹಗತಿಗಳು ಪೂರಕವಾದವು. ಶೇಖಮಾಸ್ತರ ಇಲ್ಲಿಗೆ ಬಂದು ಕ್ಯಾಂಪು ಪ್ರಾರಂಭಿಸಿದ ಕೆಲವೇ ದಿನಗಳಲ್ಲಿ ಸಾಲ ಮುಕ್ತರಾದರು. ಪ್ರಾರಂಭದ **"ಕಿವುಡ ಮಾಡಿದ ಕಿತಾಪತಿ"** ೧೦೧ನೇ ಪ್ರಯೋಗದಲ್ಲಿ ಮೆರವಣಿಗೆಯಾಗಿ ಅದ್ದೂರಿ ಕಾರ್ಯಕ್ರಮ ಜರುಗಿತು. ಸುಮಾರು ಮುನ್ನೂರು ಪ್ರಯೋಗದತ್ತ ಸಾಗಿ ಇಡೀ ಕಲಬುರಗಿ ನಗರದಲ್ಲಿ ಪ್ರೇಕ್ಷಕರ ಗಮನ ಸೆಳೆದು ಭಾರೀ ಯಶಸ್ಸು ಪಡೆಯಿತು. ಈ ನಾಟಕದಲ್ಲಿ ಶ್ರೀಧರ ಹೆಗಡೆಯವರ ಗುಕ್ಕನ **ಪಾರ್ಥಸಾರಥಿ** ಹಾಗೂ ದಾವಣಗೇರೆ ಗಿರಿಧರ (ಕಿವುಡ) ಅಡಿಗೆ ಭಟ್ಟ ಪಾತ್ರಗಳು ಪ್ರೇಕ್ಷಕರ ಗಮನ ಸೆಳೆಯುತ್ತ ಜನಮನದಲ್ಲಿ ಇಂದಿಗೂ ಉಳಿದಿವೆ.

ಶೇಖಮಾಸ್ತರರಿಗೆ, ಶ್ರೀಧರ ಅವರಿಗೆ ಕಲಬುರಗಿಯ ಕ್ಯಾಂಪು ಸುವರ್ಣ ಯುಗವೆಂದೇ ಹೇಳಬೇಕು. ಇಲ್ಲಿಂದಲೇ ಶೇಖಮಾಸ್ತರ ಅವರು ನಾಟಕ ಅಕಾಡೆಮಿ ಅಧ್ಯಕ್ಷರಾಗಿದ್ದರೆ . ಶ್ರೀಧರ ಅವರಿಗೆ ಇಲ್ಲಿಂದಲೇ ಹಾರಕೋಡ ಶ್ರೀಮಠದ ಚೆನ್ನ ಪ್ರಶಸ್ತಿ ಲಭಿಸಿ ಅವರ ವ್ಯಕ್ತಿತ್ವಕ್ಕೆ ಘನತೆ ಬಂದಿದೆ. ಇಲ್ಲಿಯ ರಂಗತಜ್ಞರು, ರಂಗ ಕಲಾವಿದರು, ರಂಗ ಕರ್ಮಿಗಳು, ಎಲ್ಲರಿಗೂ ಮಿಗಿಲಾಗಿ ಪ್ರೇಕ್ಷಕರು ಬೆಳ್ಳಿ ಕೀರಟವಿಟ್ಟು ಪ್ರಶಸ್ತಿ ಪತ್ರ, ನೀಡಿದ್ದು ಅವರ ಜೀವವಾನದಲ್ಲಿಯೇ ಮರೆಯಲಾರದಂಥದ್ದು ಗುಲಬರ್ಗಾಕ್ಕೆ ೫-೬ ಲಕ್ಷ ಸಾಲ ಹೊತ್ತುಕೊಂಡೇ ಬಂದಿದ್ದ ಕಂಪನಿ, ಎರಡು ವರ್ಷಗಳಲ್ಲಿ ಎಲ್ಲಾ ಸಾಲ ತೀರಿಸಿ ೧೦-೧೫ ಲಕ್ಷ ಬಂಡವಾಳದಲ್ಲಿ ಬ್ರಾಂಚ ಕಂಪನಿಗೆ ಹುಟ್ಟು ಹಾಕಿದ್ದು ಸಾಮಾನ್ಯ ಮಾತಲ್ಲ.

ಗುಲಬರ್ಗಾದಲ್ಲಿ ಪ್ರಾರಂಭದಲ್ಲಿಯೇ ಹಾಕಿದ್ದ ನಾಟಕ, ಕಿವುಡ ಮಾಡಿದ ಕಿತಾಪತಿ ೧೦೦ ಪ್ರಯೋಗಗಳವರೆಗೂ ಹೌಸ್‌ಫುಲ್ಲಾಗೇ ಸಾಗಿತು. ರವಿವಾರವಂತೂ ಟಿಕೆಟ್ ಪಡೆಯುವುದು ಸುಲಭದ ಮಾತಾಗಿರಲಿಲ್ಲ. ವಿದ್ಯಾವಂತರು, ಅಧಿಕಾರಿಗಳು, ನೌಕರದಾರರು, ವ್ಯಾಪರಸ್ಥರು, ಸರತಿಯ ಸಾಲಿನಲ್ಲಿ ನಿಂತು ಟಿಕೆಟ್ ಪಡೆದಿದ್ದು ರಂಗಾಕಸಕ್ತರಿಗೆ ಇನ್ನೂ ಕಣ್ಣು ಕಟ್ಟಿದೆ.

ಉತ್ತಮ ಕಲಾವಿದರಿಂದ, ಹಾಸ್ಯಭರಿತ ನಾಟಕದಿಂದ ಶ್ರೀಧರ ಹೆಗಡೆ ಪ್ರಮುಖವಾಗಿ ಗಮನಸೆಳೆದಿರು. ಆ ದೀರ್ಘ ಕ್ಯಾಂಪು ಕಲಾವಿದರ, ಮಾಲಿಕರ, ಸಂಚಾಲಕರ ಕಲಬುರಗಿಯ ಜನರ ಬಾಂಧ್ಯವ್ಯಕ್ಕೆ, ಅಭಿಮಾನಕ್ಕೆ ಕಾರಣವಾಯಿತು ಹಾಗಂತಲೇ ಕಲಬುರಗಿಯ ಜನರು, ಮಾಲಿಕರಗೆ ಸಂಚಾಲಕರಿಗೆ ಕಲಾವಿದರಿಗೆ ಅದ್ದೂರಿಯ ಅಭಿನಂದನ ಕಾರ್ಯಕ್ರಮಕ್ಕೆ ಮುಂದಾದರು. ಈ ಎಲ್ಲ ಕಾರ್ಯಕ್ರಮಕ್ಕೆ ಅವ್ಯಕ್ತವಾಗಿ ಕಾರಣರಾಗಿದ್ದು ಶ್ರೀಮತಿ ಉಮಾಶ್ರೀ ಅವರು. ಅವರು ಅಭಿನಂದನ ಸಮತಿಯ ಗೌರವಾಧ್ಯಕ್ಷರಾಗಿದ್ದರು. ಅಲ್ಲಮಪ್ರಭು ಪಾಟೀಲ ವಿಧಾನ ಪರಿಷತ್ ಸದಸ್ಯರು, ಅಧ್ಯಕ್ಷರಾಗಿ ಊರಿನ ಅನೇಕ ಗಣ್ಯಮಾನರು ಸಮಿತಿಯಲ್ಲಿದ್ದು ಕಾರ್ಯಕ್ರಮನ್ನು ಯಶಸ್ವಿಯಾಗಿ ನೆರವೇರಿಸಿದ್ದು ಈಗಲೂ ಸಿನಿಮಾದ ರೀಲಿನಂತೆ ಆ ಕಾರ್ಯಕ್ರಮ ಕಣ್ಣು ಮುಂದೆ ಓಡುತ್ತಿದೆ.

೪-೧-೨೦೦೭ ರಂದು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ ಹಾಗೂ ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ, ವಿರೋಧ ಪಕ್ಷದ ನಾಯಕರು, ಶ್ರೀಮತಿ ಉಮಾಶ್ರೀ, ವಿಧಾನ ಪರಿಷತ್ ಸದಸ್ಯರು ಶೇಖಮಾಸ್ತರರಿಗೆ, ಶ್ರೀಧರ ಹೆಗಡೆಯವರಿಗೆ ಬೆಳ್ಳಿ ಕಿರೀಟ ಧರಿಸಿ ಕಲಾವಿದರಿಗೆಲ್ಲ ಬೆಳ್ಳಿ ಜೋಡು ಸಮೆ (ದೀಪ ಕಂಬ) ಅರ್ಪಿಸಿ ಪ್ರಶಸ್ತಿ ಪತ್ರಗಳೊಂದಿಗೆ ಸನ್ಮಾನಿಸಿದರು. ಆ ವೈಭವ, ಆ ಸಂಭ್ರಮ, ಆ ಜನಸಾಗರ ನೋಡಿದಾಗ ಶ್ರೀಧರ, ಶ್ರೀ ಶೇಖಮಾಸ್ತರ ಅವರ ಜೀವನ ಸಾರ್ಥಕತೆ ಪಡೆದಿತ್ತೆನ್ನಬಹುದು. ಇದೇ ಸಮಯದಲ್ಲಿ ಶ್ರೀ ಗವೀಶ ಹಿರೇಮಠ ಅವರ ಸಂಪಾದಕತ್ವದಲ್ಲಿ ಸುಮಾರು ೧೫೦ ಪುಟಗಳ ರಾಯಲ್ ಸೈಜಿನ ಸ್ಮರಣೆ ಸಂಪುಟ "ರಂಗಾಂತರರಂಗ" ಆತ್ಯಾಕರ್ಷಕ ಮುದ್ರಣದಿಂದ ಬಿಡುಗಡೆಯಾಯಿತು. ರಂಗಾಂತರಂಗ ಮಾಲಿಕರ, ಸಂಚಾಲಕರ, ಕಲಾವಿದರ ಪರಿಚಯದೊಂದಿಗೆ ಕಂಪನಿಯ ಇತಿಹಾಸವನ್ನೊಳಗೊಂಡಿತ್ತು. ಕಂಪನಿಯ ಎಲ್ಲಾ ಕಲಾವಿದರ ಭಾವಚಿತ್ರಗಳ ಮುಖಪುಟ ಆತ್ಯಾಕರ್ಷಕವಾಗಿ ಮೂಡಿ ಬಂದು. ಈಗಲೂ ಮತ್ತೆ ಮತ್ತೆ ಸಂಚಿಕೆಯ ಪುಟಗಳನ್ನು ತಿರುಗಿಸಬೇಕೆನ್ನುವ ಸಂಚಿಕೆ. ಒಟ್ಟಿನಲ್ಲಿ ಗುಲಬರ್ಗಾ ಕ್ಯಾಂಪು ಶ್ರೀಧರ ಅವರಿಗೆ, ಶೇಖ ಮಾಸ್ತರರಿಗೆ ಎಲ್ಲ ರೀತಿಯ ಯಶಸ್ಸು ತಂದು ಕೊಟ್ಟಿದೆ. ಈ ಕ್ಯಾಂಪು ಕಷ್ಟದ ದಿನಗಳನ್ನು ಮರೆಯಿಸಿ

ಅವರೀರ್ವರಿಗೆ, ಧನ್ಯತಾ ಭಾವನೆ ತಂದುಕೊಟ್ಟಿದೆ.

೭ನೇ ಜನೇವರಿ ೨೦೧೩ರಲ್ಲಿ ಮತ್ತೆ ಇಂಥದ್ದೇ ಅದ್ದೂರಿಯ ಕಾರ್ಯಕ್ರಮ. ಗುಲಬರ್ಗಾದಲ್ಲಿ ಕ್ಯಾಂಪು ಹತ್ತು ವರ್ಷ ಪೂರೈಸಿದ ಸಂದರ್ಭದಲ್ಲಿ ಕ್ಯಾಂಪಿನ ದಶಮಾನೋತ್ಸವ ಕೂಡ ವಿಜೃಂಭಣೆಯಿಂದಲೇ ಜರುಗಿತು. ಆಗ **"ಶ್ರೀಗುರು ಕುಮಾರೇಶ್ವರ ನಾಟ್ಯ ಸಂಘ"** ನೇ ಕಾರ್ಯಕ್ರಮ ಹಮ್ಮಿಕೊಂಡು ಆ ಹತ್ತು ವರ್ಷಗಳವರೆಗೆ ಸಹಕರಿಸಿದ ಮಹನೀಯರನ್ನು, ತಾವಾಡಿಸಿದ ನಾಟಕಗಳ ನಾಟಕಕಾರರನ್ನು, ತಮ್ಮ ಕಂಪನಿಯಲ್ಲಿ ಅಭಿನಯಿಸಿ ಹೋದ ಹಿರಿ-ಕಿರಿಯ ಕಲಾವಿದರನ್ನು ಕರೆಯಿಸಿ, ಪೂಜ್ಯಶ್ರೀ ಹಾರಕೂಡ ಶ್ರೀಗಳ ಸಾನಿಧ್ಯದಲ್ಲಿ ಸನ್ಮಾನಿಸಿ ಗೌರವಿಸಿದ್ದು ಅರ್ಥಪೂರ್ಣ ಕಾರ್ಯಕ್ರಮವಾಗಿತ್ತು.

ಈ ಕಂಪನಿಯ ವಿಶೇಷತೆಯ ಬಗ್ಗೆ, ಸಾಧನೆಯ ಬಗ್ಗೆ ಹೇಳುವಾಗ ಶ್ರೀಧರ ಅವರ ಬಗ್ಗೆ ಹೇಳಿದಂತೆ. ಎಲ್ಲವೂ ಶ್ರೀಧರ ಅವರ ಸುತ್ತ ಹೆಣೆದುಕೊಂಡ ಚರಿತ್ರೆಯಾಗಿದೆ. **"ಶ್ರೀಗುರು ಕುಮಾರೇಶ್ವರ ನಾಟ್ಯ ಸಂಘದ"** ರಥ ಎಳೆದುಕೊಂಡು ಹೊರಟ ಶ್ರೀಧರ ಇಂದಿಗೂ ಬಹಳ ಜವಾಬ್ದಾರಿ ವಹಿಸಿದ್ದಾರೆ.

**ಅಭಿನಯ:**

ಶ್ರೀಧರ ಹೆಗಡೆಯವರು ನಾಲ್ಕು ದಶಕಗಳ ಅವಧಿಯಲ್ಲಿ ಮಾಡಿದ ಪಾತ್ರಗಳಿಗೆ ಲೆಕ್ಕವಿಲ್ಲ ಲೆಕ್ಕವಿಡಲೂ ಆಗದಷ್ಟು ಪಾತ್ರಗಳಲ್ಲಿ ಕಾಣಿಸಿ ಕೊಂಡಿದ್ದಾರೆ. ಪ್ರೇಕ್ಷಕರ ಮನಸೂರೆಗೊಂಡಿದ್ದಾರೆ. ಅವರ ಪ್ರತಿಭೆಗೆ ಅನೇಕ ಪಾತ್ರಗಳಿದ್ದರೂ, ಕೆಲವು ವಿಶಿಷ್ಟ ಪಾತ್ರಗಳ ಅಭಿನಯ ಕುರಿತು ಹೇಳಲೆಬೇಕು.

**ರೇಣುಕಾ ಎಲ್ಲಮ್ಮ ನಾಟಕದ ಪರಶುರಾಮ:**

ಇದೊಂದು ಪೌರಾಣಿಕ ನಾಟಕ. ಈ ನಾಟಕದಲ್ಲಿ ಪರಶುರಾಮನ ಪಾತ್ರ ಬಹಳ ವಿಶಿಷ್ಟವಾಗಿ ಹೆಚ್ಚು ಗಮನ ಸೆಳೆಯುತ್ತದೆ. ತಂದೆ ಜಮದಗ್ನಿಯ ಆಜ್ಞೆಯಂತೆ ಪರಶುರಾಮ ತಾಯಿ ರೇಣುಕಾಳ ಶಿರಶ್ಛೇದ ಮಾಡುತ್ತಾನೆ ನಂತರ ತಾಯಿಯ ಪುನರ್ ಜನ್ಮಕ್ಕೂ ಕಾರಣನಾಗುತ್ತಾನೆ.

ಈ ಪಾತ್ರದ ಗುಣ ಸ್ವಭಾವ ಅರಿತು ಅಭಿನಯಿಸುವ ಶ್ರೀಧರ ಉತ್ತಮ ಅಭಿನಯ ನೀಡಿದ್ದಾರೆ. ಪಾತ್ರಕ್ಕೆ ಜೀವ ತುಂಬುವ ರೀತಿ ಪ್ರೇಕ್ಷಕರನ್ನು ಗಮನ ಸೆಳೆಯುವ ಹಾಗೂ ಆ ರೌದ್ರ ಸನ್ನಿವೇಶದಲ್ಲಿ ಪ್ರೇಕ್ಷಕ ತನಗರಿವಿಲ್ಲದಂತೆ ಉದ್ವೇಗಕ್ಕೊಳಗಾಗುವ ಸಂದರ್ಭ ತರುತ್ತದೆ.

ಪರಶುರಾಮನಿಗೆ ಒಂದು ರೀತಿಯ ಅಗ್ನಿ ಪರೀಕ್ಷೆ, ಒಂದೆಡೆ ತಂದೆಯ ಆಜ್ಞೆ ಮತ್ತೊಂದೆಡೆ ತಾಯಿಯ ಶಿರಶ್ಛೇದನ ಮಾಡಬೇಕು. ಆ ಸಂದರ್ಭದ ಮಾನಸಿಕ ಸ್ಥಿತಿ, ಆ ತೊಳಲಾಟದಲ್ಲಿ ತೆಗೆದುಕೊಳ್ಳುವ ಪಾತ್ರದ ದಿಟ್ಟ ನಿರ್ಧಾರ, ಎಲ್ಲವೂ ಶ್ರೀಧರ ಅವರ ಪ್ರತಿಭೆಗೆ ನಿದರ್ಶನ.

ಇಡೀ ನಾಟಕದಲ್ಲಿ ಇದೊಂದು ವಿಶಿಷ್ಟ ಪಾತ್ರವಾಗಿ ಪ್ರೇಕ್ಷಕರ ಗಮನ ಸೆಳೆಯುತ್ತ, ಕುತೂಹಲ ಕೆರಳಿಸುತ್ತ, ವೀರ ರಸದ ಹಾಗೂ ಮಾತೃ ವಾತ್ಸಲ್ಯದ ಮಾತುಗಳು, ರೌದ್ರ ಸನ್ನಿವೇಶಗಳು ಪ್ರೇಕ್ಷಕರ ಗಮನ ಸೆಳೆಯುತ್ತ ಶ್ರೀಧರ ಹೆಗಡೆ ಒಬ್ಬ ಯಶಸ್ವಿ ನಟರಾಗಿ ಕಾಣುತ್ತಾರೆ.

**ಗೌರಿ ಹೋದಳು ಗಂಗೆ ಬಂದಳು:**

ಇದು ಶ್ರೀ ಎಸ್.ಎಂ.ಖೇಡಗಿ ಕವಿಗಳು ರಚಿಸಿದ ನಾಟಕ. ಜಾನಪದ ಕಥನಕಾವ್ಯದ **"ಕೆರೆಗೆ ಹಾರ"** ಕಥಾ ವಸ್ತು. ಈ ಕಥೆಯ ನಾಯಕಿ ಭಾಗೀರಥಿಯನ್ನು, ಇಲ್ಲಿ ನಾಟಕಕಾರ ಗೌರಿ ಎನ್ನುವ ಹೆಸರಿನಲ್ಲಿ ಪರಿವರ್ತಿಸಿದ್ದಾನೆ. ಗೌರಿ ಕೆರೆಯೊಳಗೆ ಹೋಗುತ್ತ ಆಹುತಿಯಾದಾಗ, ಗಂಗೆ ಬೋರ್ಗರೆದು ಬರುತ್ತಾಳೆ. ಮೂಲ ಕಥೆಗೆ ಧಕ್ಕೆ ಬಾರದಂತೆ ಕಥೆಗೊಂದು ಹೊಸ ಸ್ಪರ್ಶ ನೀಡಿದ್ದಾನೆ ಕವಿ. ಈ ನಾಟಕದಲ್ಲಿ ನಾಯಕಿ ಗೌರಿಯಷ್ಟೇ, ಮನೆಯ ಯಜಮಾನ ಮಲ್ಲನಗೌಡ ಪ್ರಮುಖವಾಗಿ ಗುರುತಿಸಿಕೊಳ್ಳುತ್ತಾನೆ. ಮಲ್ಲನಗೌಡ ನೀತಿ, ನ್ಯಾಯ, ಧರ್ಮವೆಂದು ಬದುಕುವ ಆದರ್ಶ ವ್ಯಕ್ತಿ ಇಡೀ ಗ್ರಾಮವೇ ಗೌರವಿಸುವ ವ್ಯಕ್ತಿತ್ವ.

ಊರಿನ ಜನರಿಗಾಗಿ ನೀರಿನ ಅಭಾವವಾದಾಗ ಮಲ್ಲನಗೌಡ ತನ್ನ ಹೊಲದಲ್ಲಿ ಕೆರೆ ಕಟ್ಟಿಸುತ್ತಾನೆ. ನೀರು ಬಾರದಾಗ ಮತ್ತೆ ಕೆರೆಯಲ್ಲಿಯೇ ಭಾವಿ ತೋಡಿಸುತ್ತಾನೆ. ಆಗಲೂ ನೀರು ಬಾರದಾಗ ಜೋಯಿಶರನ್ನು ಕೇಳಿದಾಗ, ನಿಮ್ಮ ಮನೆಯ ಕಿರಿ ಸೊಸೆ ಗೌರಿಯನ್ನು ಬಲಿಕೊಟ್ಟರೆ ಗಂಗೆ ಬರುತ್ತಾಳೆಂದು ಹೇಳುತ್ತಾರೆ. ಪ್ರತಿ ಜೀವಿಗೂ ಬದುಕುವ ಹಕ್ಕಿದೆ ಎಂದು ಹೇಳುವ ಮಲ್ಲನ ಗೌಡರಿಗೆ ಇದು ಅಸಾಧ್ಯವಾದಾಗ ಗೌರಿ ಆಹುತಿಯಾಗಲು ಮುಂದಾಗುತ್ತಾಳೆ. ಊರ ಜನರ ಕಲ್ಯಾಣಕ್ಕಾಗಿ ತನ್ನ ಜೀವವನ್ನು ಅರ್ಪಿಸಿಕೊಳ್ಳಲು ಮುಂದಾಗುತ್ತಾಳೆ. ಇದು ಸಾಧ್ಯವಿಲ್ಲವೆಂದು ಮಾವ ಮಲ್ಲನಗೌಡ ತಡೆಯುತ್ತಾನೆ. "ನೀನು ಹೋಗುವುದಾದರೆ ನನ್ನದಾಟಿ ಹೋಗು" ಎಂದು ದಾರಿಗೆ ಅಡ್ಡ ಮಲಗಿದಾಗ, ಗೌರಿಗೆ ಜನರ ಕಲ್ಯಾಣವೇ ಮುಖ್ಯವೆನಿಸಿದಾಗ ಮಾವನನ್ನೂ ದಾಟಿ ಹೋಗಿ ಆ ಭಾವಿಯಲ್ಲಿ ಜಿಗಿಯುತ್ತಾಳೆ. ಭಾವಿಯಲ್ಲಿ ಬೋರ್ಗರೆದು ನೀರು ತುಂಬಿ ಬರುತ್ತದೆ. ಇದು ಇಲ್ಲಿಯ ಕಥಾವಸ್ತು.

ಮಲ್ಲನಗೌಡನ ಪಾತ್ರದಲ್ಲಿ, ಶ್ರೀಧರ ಅದ್ಭುತ ಅಭಿನಯ ನೀಡಿ ಕಥಾ ನಾಯಕಿಯನ್ನೂ ಮರೆಸಿ ಬಿಡುತ್ತಾರೆ. ನಾಟಕಕಾರ ಗೌರಿಯ ತ್ಯಾಗ, ಬಲಿದಾನ, ಅರ್ಪಣಾಭಾವ ಚಿತ್ರಸುವಷ್ಟೇ ಮಲ್ಲನಗೌಡನ ಮಾನವೀಯ ಗುಣಗಳನ್ನು ಚಿತ್ರಿಸುತ್ತಾನೆ. ಎರಡೂ ಪಾತ್ರಗಳ ತೂಕ ಈ ನಾಟಕದಲ್ಲಿ ಸಮಾನವಾಗುತ್ತವೆ. ಗೌರಿಯ ತ್ಯಾಗ, ಅತ್ಯಂತ ದಾರುಣವಾಗಿ ಮನ ಕಲಕುವಂತನೇ ಮಲ್ಲನಗೌಡನ ಆದರ್ಶ ಗುಣಗಳನ್ನೂ ನೋಡಿ ಆನಂದಿಸಿ ಮೆಚ್ಚಿಕೊಳ್ಳುತ್ತಾರೆ. ಅವನ ಜೀವನದ ಆದರ್ಶ ಗುಣಗಳೂ ಪ್ರೇಕ್ಷಕರಿಗೆ ಪರಿಣಾಮ ಬೀರುತ್ತವೆ. ಆತನ ಸೊಸೆಯ ಮೇಲಿನ ಪ್ರೀತಿ, ಆಕೆಯನ್ನು ಬಲಿಕೊಡಲು ಸಾಧ್ಯವಿಲ್ಲವೆನ್ನುವ ಅವನ ಅಂತಃಕರಣೆ ಎಲ್ಲವೂ ವೈವಿಧ್ಯಮಯ ಅಭಿನಯದೊಂದಿಗೆ ಆಕರ್ಷಿಸುತ್ತಾರೆ. ಮಲ್ಲನಗೌಡ ವ್ಯಕ್ತಿತ್ವ, ಗುಣ ಸ್ವಭಾವ, ಕೊನೆ ಕೊನೆಗೆ ಅವನ ಮಾನಸಿಕ ಸ್ಥಿತಿ ವ್ಯಕ್ತಪಡಿಸುವಲ್ಲಿ ಶ್ರೀಧರ ಕಾರಣರಾಗುತ್ತಾರೆ. ನಾಟಕಾರನ ಪ್ರತಿ ಮಾತುಗಳಲ್ಲಿ ಅಡಕವಾಗಿರುವ ಮುಖ್ಯ ವಿಷಯವನ್ನು ಒತ್ತಿ ಹೇಳುವ ಹಲವು ಸಲ ದೀನನಾಗಿ ಭಾವನೆಗಳನ್ನು ವ್ಯಕ್ತಪಡಿಸುವ ರೀತಿ ಮೆಚ್ಚುವಂಥದ್ದು.

ಹದಿಹರೆಯದ ಶ್ರೀಧರ ಹೆಗಡೆ ಅವರು, ಈ ಯಜಮಾನನ ವೇಷದಲ್ಲಿ ಬಂದಾಗ ಯಾರೂ ಗುರುತಿಸಲು ಸಾಧ್ಯವಿರಲಿಲ್ಲ. ಅಂಥ ಅದ್ಭುತ ಮೇಕಪ್, ಅವರ ವೇಷ ಭೂಷಣ ಕೂಡ ಎಷ್ಟು ಪ್ರಭಾವ ಗೊಳಿಸುತ್ತವೆಂದರೆ ಕೆಲವಡೆ ಆ ಪಾತ್ರ ನೋಡಿ ಪ್ರೇಕ್ಷಕರು ಹೇಳಿದ್ದು, **"ನಿಮ್ಮ ತಂದೆಯವರೂ ಪಾತ್ರ ಮಾಡುವುದು ನಮಗೆ ಗೊತ್ತೆ ಇರಲಿಲ್ಲ."** ಶ್ರೀಧರ ಆ ಪಾತ್ರ ನಾನೇ ಮಾಡಿದ್ದು ಎಂದರೆ ಅವರಿಗೆ ನಂಬಲಾಗುತ್ತಿರಲ್ಲಿಲ್ಲ. ನಾಯಕ ಪಾತ್ರಗಳಲ್ಲಿ ಬಣ್ಣವನ್ನೇ ಹಚ್ಚಿಕೊಳ್ಳದೇ ನೈಜ ರೂಪದಲ್ಲಿ ಕಾಣಿಸಿಕೊಳ್ಳುವ. ಶ್ರೀಧರ ಹೆಗಡೆ ಇಲ್ಲಿ ಅಚ್ಚರಿ ಪಡುವಂಥ ಮೇಕಪ್‌ಮಾಡಿಕೊಂಡು ನಿಜವಾಗಿನೂ ವಯೋವೃದ್ಧ ಯಜಮಾನ ಎನ್ನುವಂತೆನೆ ಕಾಣಿಸಿಕೊಳ್ಳುತ್ತಾರೆ.

**ದಾರಿದೀಪ:**

ಈ ನಾಟಕ ಕೆ.ಎನ್.ಸಾಳುಂಕೆ ಅವರದು, ಇದೊಂದು ಗ್ರಾಮೀಣ ಪ್ರದೇಶ ಶ್ರೀಮಂತ ರೈತ ಕುಟುಂಬದ ಕಥೆ. ಅಣ್ಣ ತಮ್ಮಂದಿರ ಸುತ್ತು ಹೆಣೆದುಕೊಂಡ ಕಥೆ. ಅಣ್ಣ ವ್ಯಾಪಾರಿ, ತಮ್ಮ ಬಾಪು ಕಾಲೇಜ ವಿದ್ಯಾರ್ಥಿ, ಉತ್ತಮ ಗುಣ ಸ್ವಭಾವಹೊಂದಿದವನು. ಬಾಪು ಶೋಷಣೆಗೊಳಪಟ್ಟ ಅನಾಥ ಹುಡಿಗೆಯನ್ನು ಪ್ರೀತಿಸಿ ಮದುವೆಯಾಗಲು ಮುಂದಾದಾಗ ಅವಳು ತಾನು ಬದಕಲು ಅನರ್ಹಳೆಂದು ಭಾವಿಸಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಆತ್ಮಹತ್ಯೆಗೊತ್ತಾದಾಗ ಬಾಪು ಬಹಳಷ್ಟು ದುಃಖಿತನಾಗಿ ಆ ಶವಕ್ಕೆ ಮಾಂಗಲ್ಯ ಧಾರಣೆ ಮಾಡಿ ಅಂತ್ಯ

ಸಂಸ್ಕಾರ ಮಾಡಿ ತಾನು ಮದುವೆಯಾಗದೇ ದೇಶ ಸೇವೆಯ ನಿರ್ಧಾರದಲ್ಲಿ ಮಿಲಟರಿ ಸೇರುತ್ತಾನೆ.

ಇಲ್ಲಿಯೂ ಬಾಪುವಿನ ಪಾತ್ರದಲ್ಲಿ ಶ್ರೀಧರ ಅವರ ಮನೋಜ್ಞ ಅಭಿನಯ, ಶ್ರೀಧರ ಯಾವುದೇ ಪಾತ್ರ ಮಾಡಲಿ ಅಲ್ಲಿ ತಮ್ಮ ಛಾಪು ಮೂಡಿಸುತ್ತಾರೆ. ಅಪೂರ್ವ ಪ್ರತಿಭೆಯನ್ನು ಮರೆಯುತ್ತಾರೆ. ಸಮಾಜದ ಕ್ರೌರ್ಯ, ಮೂಢ ನಂಬಿಕೆ ಇವುಗಳಿಂದ ರೋಷಿ ಹೋದ ಬಾಪು, ಆ ಶೋಷಿತ ಹುಡಿಗೆಯ ಮೇಲಿದ್ದ ಪ್ರೀತಿ ಎಲ್ಲವೂ ಇಲ್ಲಿ ಪ್ರದರ್ಶಿಸಿ ಶೀಧರ ಆಕರ್ಷಿಸುತ್ತಾರೆ. ಶ್ರೀಧರ ಹೆಗಡೆಯವರು ತಮ್ಮ ಪಾತ್ರಗಳಲ್ಲಿ ತೋರುತ್ತ ಬರುವ ಅಭೀನಯ, ಭಾಷೆ, ಶೈಲಿ ರಂಗದಲ್ಲಿ ತೋರುತ್ತ ಬಂದಿರುವುದಕ್ಕೆ ಅವರ ಪಾತ್ರಗಳು ಸಾಕ್ಷಿಯಾಗುತ್ತವೆ.

**ಶ್ರೀಧರ ಅವರನ್ನು ಕುರಿತು:**

ಶ್ರೀಧರ ಹೆಗಡೆ **"ಶ್ರೀಗುರು ಕುಮಾರೇಶ್ವರ ನಾಟ್ಯ ಸಂಘ"**ದ ಸಂಚಾಲಕ ಮಾತ್ರವಲ್ಲ. ಅವರೊಬ್ಬ ವಿಚಾರವಂತ ನಟ, ನಿರ್ದೇಶಕ, ಸಮಕಾಲೀನ ಸಂಗತಿಗಳಿಗೆ ಸ್ಪಂದಿಸಬಲ್ಲ ರಂಗಕರ್ಮಿ. ರಂಗ ಕಲರವಕ್ಕೆ ಮಿಡಿದ ಹುಶೇರಿ ಮನುಷ್ಯ ದಾವಣಗೇರೆಯಂತಹ ವೃತ್ತಿರಂಗ ತವರೂರಲ್ಲಿ ಎಪ್ಪತ್ತರ ದಶಕದಲ್ಲಿ **"ಶ್ರೀ ಮಹಾಕೂಟೇಶ್ವರ ನಾಟಕ"** ಕಂಪನಿ ನಾಲ್ಕು ವರ್ಷಗಳ ನಿರಂತರ ರಂಗ ಪ್ರಯೋಗದ ನಂತರ ರಂಗ ಸಾಹಸ ಮೆರೆದಿದ್ದು **"ಶ್ರೀ ಗುರುಕುಮಾರೇಶ್ವರ ನಾಟ್ಯ ಸಂಘ"** ಹಾನಗಲ್. ಶ್ರೀಧರ ಅವರನ್ನು ಅತ್ಯಂತ ಗೌರವದಿಂದ ಕಾಣುತ್ತೇನೆ. ಬದಲಾಗುತ್ತಿರುವ ರಂಗ ಸ್ಥಿತ್ಯಂತರಗಳ ಸಂದರ್ಭದಲ್ಲಿ ರಂಗ ಸಾಧನೆ ಕುರಿತು ಅರ್ಥಪೂರ್ಣ ವಿಚಾರ ಸಂಕಿರಣ ನಡೆಯಬೇಕು. ಅದು ಅಕಾಡೆಮಿಕ್ ಮಾತ್ರವಲ್ಲದ ಸಹೃದಯ ಪ್ರೇಕ್ಷಕನ **"ತಲಸ್ಪರ್ಶ"** ವಿಚಾರವೂ ಆಗಿರಬೇಕು.

ಮಲ್ಲಿಕಾರ್ಜುನ ಕಡಕೋಳ

ದಾವಣಗೆರೆ

ಕೃಪೆ: ರಂಗಾಂತರಂಗ ಸ್ಮರಣ ಸಂಚಿಕೆ

ವೃತ್ತಿ ರಂಗಭೂಮಿಯಲ್ಲಿ ಹಾಸ್ಯ ನಟರಾಗಿ ಮೆರೆದು ಇಂದಿಗೂ ಹಾಸ್ಯ ಪಾತ್ರಗಳಲ್ಲಿ ಗುರುತಿಸಿಕೊಳ್ಳುವ ಶ್ರೀಧರ ಹೆಗಡೆ, ತಮ್ಮದೇ ಆದ ಪ್ರೇಕಕ್ಷ ವರ್ಗವನ್ನೇ ಸೃಷ್ಟಿಸಿದ್ದಾರೆ. ಶ್ರೀಧರ ರಂಗಭೂಮಿ ಕಂಡಿರುವ ಅಪರೂಪದ ಕಲಾವಿದರು. ಕಲಬುರಗಿಯಲ್ಲಿ ದೀರ್ಘಕಾಲ ಬೀಡು ಬಿಟ್ಟಿರುವ **"ಶ್ರೀಗುರು ಕುಮಾರೇಶ್ವರ ನಾಟ್ಯ ಸಂಘ"** ದಿಂದ **ಕಿವುಡ ಮಾಡಿದ ಕಿತಾಪತಿ, ಬಸ್ ಕಂಡೆಕ್ಟರ, ಬದುಕು**

ಬಂಗಾರವಾಯ್ತು ಸಾಕ್ಷಿಗೆ ಬಂದ ಸಾವಿತ್ರಿ ಮುಂತಾದ ನಾಟಕಗಳಲ್ಲಿ ಹಾಸ್ಯ ಪಾತ್ರಗಳಿಂದ ರಂಜಿಸಿ ಪ್ರೇಕ್ಷಕರ ನೆಚ್ಚಿನ ನಟರಾಗಿದ್ದಾರೆ. ನಾಟಕ ಬಿಟ್ಟ ಮೇಲೆ ಶ್ರೀಧರ ಹೆಗಡೆಯವರ ಕೈಕುಲಕಿ ಅಭಿನಂದನೆ ಹೇಳಿ ಹೋಗುವುದೇ ಪ್ರೇಕ್ಷಕರಿಗೊಂದು ಸಂತೋಷದ ಸಂದರ್ಭ, ಪ್ರಬುದ್ಧ ನಟರು, ನಿರ್ದೇಶಕರು, ಪ್ರೇಕ್ಷಕರಿಗೆಲ್ಲ ಶ್ರೀಧರ ಆತ್ಮೀಯ ಸ್ನೇಹಿತರಾಗಿದಾರೆ.

**ಕಾಂತಾಚಾರಿ ಮಣ್ಣೂರ**

ಸಂಯುಕ್ತ ಕರ್ನಾಟಕ, ಕಲಬುರಗಿ

ಶ್ರೀಧರ ಹೆಗಡೆ ಅವರು ಒಬ್ಬ ಉತ್ತಮ ನಟರು, ನಿರ್ದೇಶಕರು. ಇವರ ನಾಟಕ ನಿರ್ದೇಶಕನವಂತೂ ಸೂಪರ್, ವೈರಿ ಕೂಡ ಮೆಚ್ಚಿಕೊಳ್ಳಬೇಕು. ಇವರಿಂದ ನಿರ್ದೇಶನ ಪಡೆದ ನೂರಾರು ಕಲಾವಿದರು ಉತ್ತಮ ನಟರಾಗಿ ಹೊರ ಬಂದಿದ್ದಾರೆ. ಅನೇಕ ರಂಕ ಕಲಾವಿದರು ಹೆಮ್ಮೆಯಿಂದ ಇವರ ಹೆಸರು ಹೇಳಿಕೊಂಡು ಬಣ್ಣ ಹಚ್ಚುತ್ತಾರೆ.

ಶ್ರೀಧರ ಹೆಗಡೆ ಅವರು ಉತ್ತಮ ನಟರೂ ಹೌದು. ಅರವತ್ತು ದಾಟಿದರೂ ರಂಗಭೂಮಿಯಲ್ಲಿ ನಾಯಕ ನಟರಾಗಿ ಅಭಿನಯಿಸಿದಾಗ ಇನ್ನೂ ಯುವಕರೇ ಸರಿ. ಪ್ರೇಕ್ಷಕರು ಅವರನ್ನು ಈಗಲೂ ನಾಯಕ ಪಾತ್ರಗಳಲ್ಲಿ ನೋಡಲಿಚ್ಛಿಸುತ್ತಾರೆ. ಯಾವುದೇ ಪಾತ್ರ ಮಾಡುವ ಸಾಮರ್ಥ್ಯ ಇದೆ. ಅದ್ಭುತ ಕಲ್ಪನೆಗಳಿರುವ ಈ ಮನುಷ್ಯ ರಂಗಭೂಮಿಯ ಆಳಕ್ಕಿಳಿದಿದ್ದಾನೆ.

ನೇರ ಮಾತು, ನಿಷ್ಠೂರ ಮಾತು, ತಮ್ಮದೇ ಆದ ನಿರ್ಧಾರ. ರಾಜಿಯಾಗುವ ಸ್ವಭಾವ ಇವರದಲ್ಲವೇ ಅಲ್ಲ. ಪ್ರಾಮಾಣಿಕವಾಗಿ ಕರ್ತವ್ಯಮಾಡುವ ಮನುಷ್ಯ ಯಾರಿಗೂ ಅಂಜುವುದಿಲ್ಲ, ರಾಜಿಯಾಗುವುದಿಲ್ಲ. ಇದ್ದುದ್ದನ್ನು ಇದ್ದಂಗೆ ಮಾತಾಡುವ ಶ್ರೀಧರ್ ಹೆಗಡೆ ಅವರು ನನಗೆ ಹೆಚ್ಚು ಪ್ರಿಯರು.

**ರಾಜಣ್ಣ ಜೇವರಗಿ**

ಮಾಲಿಕರು, ವಿಶ್ವಜ್ಯೋತಿ ಶ್ರೀ ಪಂಚಾಕ್ಷರ ನಾಟ್ಯ ಸಂಘ, ಜೇವರಗಿ

ರಂಗಭೂಮಿಯ ನಿರಂತರ ಸೇವೆಯಲ್ಲಿ ಸಾಗಿ ಬಂದಿರುವ ಶ್ರೀಧರ ಹೆಗಡೆ ಈಗಿನ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಎಲ್.ಬಿ. ಶೇಖಮಾಸ್ತರ್ ಇವರ ಜೊತೆಗೂಡಿ 'ಶ್ರೀ ಗುರು ಕುಮಾರೇಶ್ವರ ನಾಟ್ಯ ಸಂಘ', ಹಾನಗಲ್

ಎಂಬ ಸಂಸ್ಥೆಯನ್ನು ಕಟ್ಟಿ ಅದರ ಸಂಚಾಲಕರಾಗಿ ಕಲಬುರ್ಗಿ ನಗರದಲ್ಲಿ ನಿರಂತರ ಹದಿಮೂರು ವರ್ಷಗಳ ಕಾಲ ನಾಟಕ ಪ್ರದರ್ಶನ ಮಾಡಿ ಬೆಳ್ಳಿ ಕಿರೀಟ ಹಾಕಿಸಿಕೊಂಡ ಕೀರ್ತಿಗೆ ಪಾತ್ರರಾಗಿದ್ದಾರೆ.

ಶ್ರೀಧರ ಹೆಗಡೆ ಅವರು ನಾಟಕ ಲೇಖಕರಲ್ಲದಿದ್ದರೂ ನಾಟಕ ರಚಿಸಿದ ಲೇಖಕರ ಭಾವನೆಗಳಿಗೆ ತಕ್ಕಂತೆ ನಾಟಕ ನಿರ್ದೇಶನ ಮಾಡುವ ಜಾಣ್ಮೆ ಉಳ್ಳವರು. ಇವರ ನಿರ್ದೇಶನದಲ್ಲಿ ಅನೇಕ ಹೊಸ ಕಲಾವಿದರು ತಯಾರಾಗಿದ್ದಾರೆ. ಕಲಾವಿದರ ಕೊರತೆ ಅನುಭವಿಸುತ್ತಿರುವ ರಂಗಭೂಮಿಗೆ ಹೊಸ ಹೊಸ ಕಲಾವಿದರನ್ನು ಅಣಿಗೊಳಿಸಿದ್ದು ಇವರ ಶ್ರಮ, ಶ್ರದ್ಧೆಗೆ ಸಾಕ್ಷಿ.

**ಬಸವರಾಜ ಪಂಚಗಲ್**

ರಂಗ ಸಾಹಿತಿ, ಕೊಡೇಕಲ್.

ಶ್ರೀಧರ ಹೆಗಡೆಯವರು ನನ್ನ ರಂಗಭೂಮಿಯ ಗುರುಗಳು, ರಂಗ ಬದುಕಿನ ಮಾರ್ಗದರ್ಶಕರು ಇವತ್ತು ಕರ್ನಾಟಕದಲ್ಲಿ ಸಾವಿರಾರು ಪ್ರೇಕ್ಷಕರನ್ನು ನಾನು ಪಡೆದಿದ್ದರೆ ಅದು ಅವರ ಕೃಪೆ. ಗುಲಬರ್ಗಾದಲ್ಲಿ ಪ್ರಯೋಗಿಸುತ್ತಿದ್ದ **"ಕಿವುಡ ಮಾಡಿದ ಕಿತಾಪತಿ"** ನಾಟಕದಲ್ಲಿ ಪ್ರಪ್ರಥಮವಾಗಿ ಮಂತ್ರಿ ಪಾತ್ರಕ್ಕೆ ಬಣ್ಣ ಹಚ್ಚಿ ಅಭಿನಯ ಹೇಳಿಕೊಟ್ಟು ರಂಗಭೂಮಿಗೆ ಕಳಿಸಿದವರೇ ಅವರು. ಅವರು ತಮ್ಮ ಪ್ರತಿಭೆಯನ್ನು, ರಂಗ ಅನುಭವವನ್ನು ನನ್ನಂಥ ನೂರಾರು ಕಲಾವಿದರಿಗೆ ಧಾರೆ ಎರೆದಿದ್ದಾರೆ. ನಾನು ಅವರ ಬಹುಪಾಲು ನಾಟಕಗಳನ್ನು ನೋಡಿದ್ದೇನೆ. ಅವರ ಜೊತೆ ಅಭಿನಯಿಸಿದ್ದೇನೆ. ಹಾಗೆ ಅಭಿನಯಿಸುವಾಗ ಭಯಪಟ್ಟಿದ್ದೇನೆ. ಅವರು ನನ್ನನ್ನು ತಿದ್ದಿ, ತೀಡಿ, ಒಂದು ಸುಂದರ ಮೂರ್ತಿ ಮಾಡಿದ್ದಾರೆ. ನಾನವರಿಗೆ ಅನಂತ ಕೃತಜ್ಞತೆಗಳೊಂದಿಗೆ ಸದಾ ಋಣಿಯಾಗಿರುತ್ತೇನೆ. ಅವರ ಶಿಷ್ಯನೆಂದು ಹೇಳಿಕೊಳ್ಳುವುದೇ ನನಗೆ ಹೆಮ್ಮೆ.

ಇತ್ತೀಚೆಗೆ ಹಾರಕೂಡ ಶ್ರೀಮಠದಿಂದ **"ಚೆನ್ನರತ್ನ"** ಪ್ರಶಸ್ತಿ ಅವರಿಗೆ ದೊರೆತಿದ್ದು ಕೇಳಿ ನನಗೆ ಖುಷಿಯಾಗಿದೆ. ಆ ಪ್ರಶಸ್ತಿ ನನಗನೇ ಬಂದಷ್ಟು ಆನಂದವಾಗಿದೆ. ವೃತ್ತಿ ರಂಗ ಭೂಮಿಗೆ ಅಪಾರ ಸೇವೆ ಸಲ್ಲಿಸಿದ ನನ್ನ ಗುರುಗಳಿಗೆ ಇನ್ನೂ ಇಂಥ ಹಲವಾರು ಪ್ರಶಸ್ತಿಗಳು ಬರಲೆಂದು ಪ್ರಾರ್ಥಿಸುತ್ತೇನೆ. ಅವರ ಪ್ರತಿಭೆ ಅವರ ಪಾತ್ರಗಳು ಹೇಗೆ ಎನ್ನುವುದಕ್ಕೆ ಅವರ ಗುಲಬರ್ಗಾದ ೧೩ ವರ್ಷದ ಕ್ಯಾಂಪೇ ಸಾಕ್ಷಿ **"ಕಿವುಡ ಮಾಡಿದ ಕಿತಾಪತಿ"** ನಾಟಕ ಬಹುದೊಡ್ಡ ದಾಖಲೆ ಮಾಡಿದೆ.

**ದಯಾನಂದ ಬೀಳಗಿ**

ರಂಗ ಕಲಾವಿದ.

## ಅಭಿಮಾನಿಗಳ ಪತ್ರದಿಂದ:

ಆತ್ಮೀಯರಾದ ಶ್ರೀಧರಣ್ಣ ಹಾಗೂ ಶೇಖಮಾಸ್ತರ ಅವರಿಗೆ ಡಾ|| ಎಂ.ಡಿ.ಪಾಟೀಲ ಮಾಡುವ ವಂದನೆಗಳು.

**ಶ್ರೀಧರಣ್ಣ,** ತಾವು ಚೆನ್ನಾಗಿದ್ದೀರೆಂದು ತಿಳಿದಿರುವೆ. ನಾಟಕ ಕಂಪನಿ ಕೂಡ ಚೆನ್ನಾಗಿ ನಡೆದಿದೆಯಂದು ಭಾವಿಸಿದ್ದೇನೆ. **"ಕುಮಾರೇಶ್ವರ ನಾಟ್ಯ ಸಂಘ"** ಹಾನಗಲ್ ಕರ್ನಾಟಕದ ನಂ.೧ ವೃತ್ತಿ ನಾಟಕ ಕಂಪನಿಯನ್ನಾಗಿ ಮಾಡಿರುವುದಕ್ಕೆ ಅಭೀನಂದನೆಗಳು. ವೃತ್ತಿ ರಂಗಭೂಮಿಯಲ್ಲಿ ನೀವು ಇಷ್ಟು ಎತ್ತರಕ್ಕೆ ಬೆಳೆಯಲು ನಿಮ್ಮ ಶ್ರಮ, ಶ್ರದ್ಧೆ, ಪ್ರತಿಭೆ ಕಾರಣ. ಇವತ್ತಿನ ಸಂದರ್ಭದಲ್ಲಿ ಒಂದು ಕಂಪನಿಯನ್ನು ಕಟ್ಟಿ ನಡೆಸುವದೆಂದರೆ ಸಾಮಾನ್ಯ ಮಾತಲ್ಲ. ಮಿತಿ ಮೀರಿ ಹಣ ಖರ್ಚು ಮಾಡಬೇಕು. ಕೆಲವು ದಿನಗಳು ಲಾಭವಾದರೆ ಮತ್ತೆ ಕೆಲವು ದಿನಗಳು ಹಾನಿ. ಕ್ಯಾಂಪು ಬದಲಿಸುವಾಗ ಖರ್ಚು, ಕಲಾವಿದರ ಪೋಷಣೆ, ಪ್ರೇಕ್ಷಕರ ಅನಿಶ್ಚತತೆ, ಜಾತ್ರೆಯ ಸಂದರ್ಭದಲ್ಲಿ ಕಂಪನಿಗಳ ಸ್ಪರ್ಧೆ. ಮಳೆಗಾಲದಲ್ಲಿ ೩-೪ ತಿಂಗಳು ನಷ್ಟ ಇಂಥ ಹಲವಾರು ಸಮಸ್ಯೆಗಳನ್ನೆದುರಿಸುತ್ತ ಕಂಪನಿ ನಡೆಸಬೇಕೆಂದರೆ ತುಂಬ ಕಷ್ಟ.

ಐದು ವರ್ಷಗಳ ಹಿಂದೆ ನಿಮ್ಮ ಕಂಪನಿ ಹೇಗಿತ್ತೆಂಬುದನ್ನು ನಾನು ಬಲ್ಲೆ. ಶೇಖಮಾಸ್ತರ ಶೇಕಡಾ ೫/೧೦ ರಂತೆ ಬಡ್ಡಿ ಸಾಲ ತಂದು ಕಂಪನಿ ನಡೆಸಿದ್ದರು. ಚಿಕ್ಕೋಡಿಯಲ್ಲಿ ಉಮಾಶ್ರೀ ಬರೋದಕ್ಕಿಂತ ಮುಂಚೆ ನಿಮ್ಮ ಕಲೆಕ್ಷನ್ ಎರಡು ನಾಟಕ ಸೇರಿ ೧೨೦೦ ರಿಂದ ೧೫೦೦ ದಾಟುತ್ತಿರಲಿಲ್ಲ. ಮುಂದೆ ಉಮಾಶ್ರೀ ಬಂದಾಗ **ಬಸ್ ಕಂಡೆಕ್ಟರ** ನಾಟಕದಿಂದ ಭರ್ಜರಿ ಕಲೆಕ್ಷನ್ ಆಯಿತು. ಈಗ ಮೊದಲಿನ ಆ ಕಷ್ಟದ ದಿನಗಳಿರಲಿಕ್ಕಿಲ್ಲ. ತುಂಬ ಕಷ್ಟ ಪಟ್ಟು ಈಗ ಉತ್ತಮ ಸ್ಥಿತಿಗೆ ಬಂದಿದ್ದೀರಿ. ಒಂದು ರೂಪಾಯಿ ಖರ್ಚು ಮಾಡಬೇಕಾದರೂ ಯೋಚನೆ ಮಾಡಿ.

**ಶ್ರೀಧರಣ್ಣ,** ನಿಮ್ಮ ಹಾಗೂ ಶೇಖಮಾಸ್ತರ ಸ್ನೇಹ, ಬಾಂಧವ್ಯ ಹಿಂದೂ-ಮುಸ್ಲಿಂ ಭಾವಕ್ಯತೆ ಸಂಕೇತವಾಗಿದೆ. ಹೆಚ್ಚೇನು, ನಿಮ್ಮ ಕಂಪನಿ ಕರ್ನಾಕಟದಲ್ಲಿ ಇನ್ನೂ ಹೆಸರು ಮಾಡಲಿ, ನೂರಾರು ಕಲಾವಿದರಿಗೆ ಆಶ್ರಯಕೊಡಲಿ ಪ್ರೇಕ್ಷಕರಿಗೆ

ಉತ್ತಮ ನಾಟಕಗಳಿಂದ ಮನರಂಜನೆ ನೀಡಲಿ **"ಶ್ರೀಗುರು ಕುಮಾರೇಶ್ವರ ನಾಟ್ಯ ಸಂಘ"** ಹಾನಗಲ್ ನಾಡಿನಲ್ಲಿ ಅದ್ವಿತೀಯ ಕಂಪನಿಯಾಗಬೇಕೆಂಬುದೇ ನಮ್ಮೆಲ್ಲರ ಆಶೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಸಹಿ

**(ಎಂ.ಬಿ.ಪಾಟೀಲ)**

ಕೆರೂರ

ಶ್ರೀಧರ ಮಾಲಿಕರಿಗೆ

ವಂದನೆಗಳು,

ಚಿಕ್ಕೋಡಿಯಲ್ಲಿ ನಿಮ್ಮ ಕಂಪನಿ ಅಭಿನಯಿಸಿದ ಎಲ್ಲಾ ನಾಟಕಗಳನ್ನು ನೋಡಿ ಈ ಪತ್ರ ಬರೆಯುತ್ತಿದ್ದೇನೆ. ತಮ್ಮೆಲ್ಲಾ ಪಾತ್ರಗಳಲ್ಲಿ **"ಗೌರಿ ಹೋದಳು ಗಂಗೆ ಬಂದಳು"** ನಾಟಕದ ಮಲ್ಲನಗೌಡನ ಪಾತ್ರ ನನಗೆ ಬಹಳ ಮೆಚ್ಚಿಗೆಯಾಯಿತು. ಎಲ್ಲ ಪಾತ್ರಗಳಿಗಿದು ಕಳಸ ಪ್ರಾಯವಾದದ್ದು. ನಾನು ಇದುವರೆಗೆ ನನ್ನ ಜೀವನದಲ್ಲಿ ನೋಡಿದ ನಾಟಕ ಪಾತ್ರಗಳಲ್ಲೇ ಸರ್ವ ಶ್ರೇಷ್ಠವೆನಿಸಿತು. ಸಂದರ್ಭಕ್ಕೆ ತಕ್ಕಂತೆ ಅಭಿನಯ, ಮಾತುಗಳ ಏರಿಳಿತ ಕಥೆಗೆ, ಪಾತ್ರಕ್ಕೆ ಒಪ್ಪುಕಟ್ಟಿ ಮನಮುಟ್ಟಿ ಈಗಲೂ ಹಚ್ಚಹಸಿರಾಗಿ ಉಳಿಯುತ್ತಿದೆ ಆ ನಿಮ್ಮ ಪಾತ್ರ, ಹಾಡಿನಲ್ಲಿ ಮಾತ್ರ ಕೊರೆತ ಎದ್ದು ಕಾಣುತ್ತಿತ್ತು.

ರಂಗ ಸಜ್ಜಿಕೆ, ದೃಶ್ಯಾವಳಿಗಳ ಸೀನ್ಸ ಆಕರ್ಷಕವಾಗಿದ್ದವು. ಕೆರೆಯಲ್ಲಿ ತೊಟ್ಟಿಲು ತೂಗುವ ದೃಶ್ಯ ತುಂಬ ಪ್ರಭಾವ ಬೀರಿತು. ನಾಟಕದ ಕೊನೆಯಲ್ಲಿ ತಾವು ಲೆಕ್ಚರ ಕೊಡಲು ಬಂದಾಗ, ತಾವು ವಿನಯದಿಂದ "ತಮ್ಮ ಪಾದಾರವಿಂದಗಳಲ್ಲಿ ಬೇಡಿಕೊಳ್ಳುವೆ" ಎನ್ನುವ ಮಾತು. ನನ್ನ ಮನಕರಗಿಸಿತು. ತಮ್ಮ ಸಂಘದ ಎಲ್ಲಾ ಕಲಾವಿದರಿಗೂ (ವಾದ್ಯ ವೃಂದವನ್ನೊಳಗೊಂಡು) ಧನ್ಯವಾದಗಳು. ತಮ್ಮ ಹಾಗೂ ಸಂಘದ ಎಲ್ಲಾ ಕಲಾವಿದರ ಶ್ರಯೋಭಿವೃದ್ಧಿಯಾಗಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಇಂತಿ

ತಮ್ಮ ಅಭಿಮಾನಿ

ಸಹಿ

(ಎನ್.ವ್ಹಿ.ಶಿರಗಾಂವಕರ್), ಚಿಕ್ಕೋಡಿ

**ಕೌಟುಂಬಿಕ ಬದುಕು:**

ಶ್ರೀಧರ ಅವರ ಪ್ರತಿಭೆ, ಅಭಿನಯ, ರಂಗ ಸಾಧನೆಯ ಬಗ್ಗೆ ಹೇಳಿ ಕೌಟಂಬಿಕ ಬದುಕಿನ ಬಗ್ಗೆ ಹೇಳದೇ ಹೋದರೆ ಅವರ ಜೀವನ ಚರಿತ್ರೆಯ ಪುಸ್ತಕ ಅಪೂರ್ಣವಾದೀತೇನೋ? ಕಲಾವಿದರ ಅದರಲ್ಲೂ ವೃತ್ತಿ ರಂಗ ಕಲಾವಿದರ ಜೀವನದಲ್ಲಿ ಸಹಜವಾಗಿ ಘಟಿಸಿ ಹೋಗುವ ಘಟನೆಗಳು ಶ್ರೀಧರ ಅವರ ಬದುಕಿನಲ್ಲಿಯೂ ಘಟಿಸಿ ಹೋಗಿವೆ. ಅವರೂ ಕೂಡ ಅವುಗಳನ್ನೆಲ್ಲ ತೆರೆದಿಟ್ಟಿದ್ದಾರೆ. ಶ್ರೀಧರ ಹೆಗಡೆ ಸುರದ್ರೂಪಿ. ಎರಡು ದಶಕಗಳ ಹಿಂದೆ ಅವರನ್ನು ನೋಡಿದವರು ಈಗಲೂ ಹೇಳುತ್ತಾರೆ. ರಂಗಭೂಮಿಯ ನಾಯಕ ಪಾತ್ರಗಳಿಗೆ ಹೇಳ ಮಾಡಿಸಿದ ವ್ಯಕ್ತಿ. ರಂಗಭೂಮಿಗೆ ಅಂಥ ರೂಪವಂತರು ಅಪರೂಪ ಈಗಲೂ ಆಕರ್ಷಕರಾಗಿನೇ ಇದ್ದಾರೆ. ಆದರೆ ಆ ಹದಿಹರೆಯದ ರೂಪನೇ ಬೇರೆ. ಆಕರ್ಷಣೆಯೇ ಬೇರೆ. ಅವರೆಂದೂ ರಂಗದಲ್ಲಿ ಬಣ್ಣ ಹಚ್ಚಲೇ ಇಲ್ಲ. ಬಣ್ಣಕ್ಕೂಮಿಗಿಲಾದ ಬಣ್ಣ ಅವರದಾಗಿತ್ತು.

ಉದ್ದನೆ ಮೂಗು, ವಿಶಾಲ ಹಣೆ, ಹೊಳೆಯುವ ಬೆಕ್ಕಿನ ಕಣ್ಣುಗಳು, ಗೋದಿ ಬಣ್ಣದಂತಹ ನಸುಗೆಂಪು ಬಣ್ಣ, ಹೀಗನೇ ಒಬ್ಬ ಸುರದ್ರೂಪಿಗೆ ಇರಬೇಕಾದ ಎಲ್ಲ ಲಕ್ಷಣಗಳಿದ್ದವು. ಈ ರೂಪದ ಜೊತೆ ಅಭಿನಯದ ಪ್ರತಿಭೆ ಬೇರೆ ಹೀಗಾಗಿ ಅನೇಕ ಮನಸ್ಸುಗಳನ್ನು, ಅನೇಕ ಹೃದಯಗಳನ್ನು ಗೆದಿದ್ದ ಶ್ರೀಧರ ಅವರಿಗೆ ಕಲಾವಿದೆಯರ ಸ್ನೇಹ ಬಹುಬೇಗವಾಗುತ್ತಿತ್ತು.

ಆ ಹದಿಹರೆಯದ ಕೆಲವು ಕಾಲ ಶ್ರೀಧರ ಅವರಿಗೆ ವಸಂತಕಾಲವಾಗಿತ್ತು. ಉಳಿದ ಕಾಲಗಳ ಅರಿವೇ ಅವರಿಗಿರಲಿಲ್ಲ. ಅಮವಾಸೆಯ ಕತ್ತಲು ಆಗ ಅವರಿಗೆ ಗೊತ್ತೇ ಇರಲಿಲ್ಲ. ಪ್ರತಿ ದಿನಗಳು ಹುಣ್ಣಿಮೆಯ ಬೆಳದಿಂಗಳಾಗಿದ್ದವು. ಶ್ರೀಧರ ಅವರಿಗೆ ಆಗಾಗ ಮಧ್ಯಪಾನದ ಹವ್ಯಾಸವೂ ಇತ್ತು. ಆದರೆ ಅದೇನೋ ಅವರ ಬದುಕಿನಲ್ಲಿ ಬಂದ ಸ್ನೇಹಿತೆಯರು ಬಹುಕಾಲ ಅವರಲ್ಲಿ ಉಳಿಯಲಿಲ್ಲ. ಹೊರ ಹೋಗಲು ಅವರಿಗಾಗ ಬಲವಾದ ಕಾರಣನೂ ಬೇಕಿರಲಿಲ್ಲ.

ಶ್ರೀಧರ ಅವರ ವೈಯಕ್ತಿಕ ಬದುಕನ್ನು, ತಿಳಿಯುತ್ತ ಹೋದಾಗ, ಉರ್ದು ಕವಿ ಗಾಲಿಬ್ ನೆನಪಾಗುತ್ತಾನೆ. ಗಾಲಿಬ್ ಈ ದೇಶ ಕಂಡ ಅದ್ಭುತ ಕವಿ. ಗಜಲ್‌ಗಳು ಸಾರಸ್ವತ ಪ್ರಪಂಚದಲ್ಲಿ ಇಂದಿಗೂ ಗಟ್ಟಿಯಾಗಿ ನಿಂತಿವೆ. ಗಾಲಿಬ್ ಬದುಕು ರಸಿಕತೆಯಷ್ಟೇ ದರುಂತ. ಗಾಲಿಬ್ ಪ್ರೇಮಿಯಾಗಿದ್ದ, ಉದಾರಿಯಾಗಿದ್ದ, ಆತ್ಮಾಭಿಮಾನಿಯಾಗಿದ್ದ, ಸ್ನೇಹ ಜೀವಿಯಾಗಿದ್ದ ತನ್ನ ಮನೆತನದ ಬಗ್ಗೆ, ತನ್ನ ಪೂರ್ವಿಕರ ಬಗ್ಗೆ ಅಭಿಮಾನಿಯಾಗಿದ್ದ. ಈ ಎಲ್ಲಾ ಗುಣಗಳು ಶ್ರೀಧರ ಅವರಲ್ಲಿಯೂ ಕಾಣಲು ಸಾಧ್ಯ.

ಶ್ರೀಧರ ಅವರಲ್ಲಿದ್ದ ಪ್ರತಿಭೆ ಅದ್ಭುತ. ಒಂದೊಂದು ಪಾತ್ರವೂ ರಸಿಕರ ಮನ ಸೂರೆಗೊಳ್ಳುತ್ತಿತ್ತು. ಈ ಪ್ರತಿಭೆ. ಈ ಪಾತ್ರಗಳು ಹೆಗಡೆಯವರ ದೌರ್ಬಲ್ಯಗಳನ್ನು ಮುಚ್ಚಿಬಿಡುತ್ತಿದ್ದವು. ಅವರೊಬ್ಬ ಶ್ರೇಷ್ಠ ನಟರಾಗಿನೇ ಪ್ರೇಕ್ಷಕರೆದುರು ಕಾಣುತಿದ್ದರು. ನಾವಿಲ್ಲಿ ಗುರುತಿಸಬಾಕಾದದ್ದೂ ಅದನ್ನೇ. ಪ್ರತಿಭೆ, ಪಾತ್ರ, ರಂಗಸಾಧನೆ, ರಂಗಭೂಮಿಗೆ ಕೊಟ್ಟ ಕೊಡಿಗೆ ಇವುಗಳಿಂದಲೇ ಅವರ ವ್ಯಕ್ತಿತ್ವ ಅಳೆಯಬೇಕೇ ವಿನಃ ಅವರ ದೌರ್ಭಲ್ಯಗಳಿಂದಲ್ಲ. ಶ್ರೀಧರ ಅವರಲ್ಲಿ ಏನೇ ದೌರ್ಬಲ್ಯಗಳಿರಲಿ, ಯಾರಿಗೂ ಮೋಸ ಮಾಡಿದವರಲ್ಲ, ಯಾರಿಗೂ ಅನ್ಯಾಯ ಮಾಡಿದವರಲ್ಲ, ಯಾರ ಹಣವನ್ನು ಆಶೆ ಮಾಡಿದವರಲ್ಲ, ಈ ಎಲ್ಲ ಗುಣಗಳು ತಂದೆಯವರು ಬಾಲ್ಯದಲ್ಲಿಯೇ ಹೇಳಿಕೊಟ್ಟ ಪಾಠಗಳು. ಅವುಗಳನ್ನು ಗಟ್ಟಿಯಾಗಿ ಹಿಡಿದುಕೊಂಡೇ ಬೆಳದ ಶ್ರೀಧರ ಇಂದಿಗೂ ತಂದೆಯವರ ಆ ಮಾತುಗಳಲ್ಲ ವೇದವಾಕ್ಯ. ಅವರು ವ್ಯೆಯಕ್ತಿಕವಾಗಿ ಹಾಳಾಗಿದ್ದಾರೆ. ವೈಯಕ್ತಿಕವಾಗಿ ಕಳೆದುಕೊಂಡಿದ್ದಾರೆ. ಅವರ ರಸಿಕತೆಯ ಜೊತೆಯೂ, ಅವರ ವೈಚಾರಿಕತೆಯ ಮಾತುಗಳು ಅಚ್ಚರಿ ಗೊಳಿಸುತ್ತಿವೆ. ಒಂದೊಂದು ಸಲ ತತ್ವಜ್ಞಾನಿಯಾಗಿ ಕಾಣುತ್ತಾರೆ.

ಶ್ರೀಧರ ಅವರನ್ನು ಸಮರ್ಥಿಸಬೇಕೆಂದು ಈ ಎಲ್ಲ ಮಾತುಗಳಲ್ಲ. ಏನಿದ್ದರೂ ಅವರದು ತೆರೆದ ಬದುಕು. ಆದರ್ಶವಾದಿಗಳೆಂದು ಹೇಳಿಕೊಂಡು ಸಾಗಿರುವ ಕೆಲವು ದೊಡ್ಡ ದೊಡ್ಡ ಕಲಾವಿದರ ಮುಖವಾಡ ಕಿತ್ತೆಸೆದಾಗ, ಹೀಗೂ ಇರುತ್ತಾರೆಯೇ ಎನ್ನುವ ಆಶ್ಚರ್ಯ ಮೂಡುತ್ತದೆ ನಮಗೆ. ಶ್ರೀಧರ ಅಂಥ ಕವಚ, ಅಂಥ ಮುಖವಾಡ ಹಾಕಿ ಕೊಂಡು ಬರಲಿಲ್ಲ. ತೆರೆದ ಮನಸ್ಸು, ತೆರೆದ ಪುಸ್ತಕದಂತೆ, ಇವರ ಬದುಕು ಯಾರಾದರೂ ಓದಿಕೊಳ್ಳಬಹುದು. ಎಷು ಜನ ಕಲಾವಿದರಿಗೆ, ಎಷ್ಟು ಜನ ಮಾಲೀಕರಿಗೆ ತಮ್ಮ ದೌರ್ಭಲ್ಯಗಳನ್ನು ಹೇಳಿಕೊಳ್ಳುವ ಈ ಧೈರ್ಯವಿದೆ ಹೇಳಿ? ಇಲ್ಲಿ ಆತ್ಮವಂಚನೆಯಿಲ್ಲ ಇಲ್ಲಿ ಮೋಸವಿಲ್ಲ. ಇಲ್ಲಿ ಮುಖವಾಡವಿಲ್ಲ. ಇಲ್ಲಿ ಮುಚ್ಚು ಮರೆಯಿಲ್ಲ. ಶ್ರೀಧರ ತಮ್ಮೆಲ್ಲ ಬದುಕಿನ ಪುಟಗಳನ್ನು ಬಿಚ್ಚಿಕೊಳ್ಳುತ್ತ ಸಾಗಿದಾಗ ಇನ್ನೂ ಎತ್ತರದ ವ್ಯಕ್ತಿಯಾಗಿ ಕಾಣುತ್ತಾರೆ.

ಶ್ರೀಧರ ಅವರ ದುರ್ದೈವವೆಂದರೆ ಅವರ ಬದುಕಿನಲ್ಲಿ ಸ್ನೇಹ ಬಯಸಿ ಬಂದ ಸ್ನೇಹಿತೆಯರು ಯಾರೂ ಗಟ್ಟಿಯಾಗಿ ಉಳಿಯಲಿಲ್ಲ. ರಾಜಮ್ಮ ಹೆಗಡೆ ಮಾತ್ರ ನಿಲ್ಲುವ ಧೈರ್ಯ ಮಾಡಿದರು. ಶ್ರೀಧರ ಅವರ ಸ್ನೇಹದಲ್ಲಿ ಬಂದ ರಾಜಮ್ಮ ಕಲಾಪತ್ನಿಯಾಗಿ ಶ್ರೀಧರ ಅವರ ಬದುಕಿಗೊಂದು ಅರ್ಥ ಬರೆದರು.

"ಆ ಬಾನು ಈ ಭೂಮಿ ಒಂದಾಯ್ತು ಪ್ರಿಯ
ನೀ ನುಡಿದ ನುಡಿಯ ಕೇಳಿ
ಸಾಗರದ ಅಲೆಗಳ ಮೇಲೆ ಸಾವಿರ ಮಿಂಚು
ಸಾಗಿದವು ತೇಲಿ"

ಡಿ. ನಾದೆ ನರಸಿಂಹ ಕವಿಗಳು ರಚಿಸಿದ **"ಛಲ ತೀರಿಸಿದ ಹೆಣ್ಣು"** ನಾಟಕದಲ್ಲಿಯ ಅವಿನಾಶ, ಪುಷ್ಪಾ ಹಾಡುವ ಪ್ರೇಮಿಗಳ ಹಾಡಿದು. ಈ ಪಾತ್ರಗಳಲ್ಲಿ ಶ್ರೀಧರ ಹೆಗಡೆ ರಾಜಮ್ಮ ಅಭಿನಯಿಸಿ ಹಾಡಿದಾಗ ಅವರ ವೈಯಕ್ತಿಕ ಬದುಕುನೂ ಹಾಗೆನೇ ಎನಿಸಿತು. ಅವಿನಾಶ ಸಿಟ್ಟು, ಸೆಡವು, ಕೊಪ, ತಿರಸ್ಕಾರ ಗುಣಗಳಲ್ಲ, ಕ್ರಮೇಣ ಮಾಯವಾಗಿ ಪುಷ್ಪಾಳನ್ನು ಅವಳ ಮನಸ್ಸನ್ನು ಅರಿತು ಅಪ್ಪಿಕೊಳ್ಳುವ ಗುಣ ಸ್ವಭಾವಗಳೇ ಶ್ರೀಧರ ಅವರಲ್ಲಿ. ಕೊನೆಗೆ ಒಂದಾಗುವ, ಪ್ರೀತಿಸುವ, ಪತ್ನಿಯನ್ನಾಗಿ ಪುಷ್ಪಾಳನ್ನು ಸ್ವೀಕರಿಸುವ ಅವಿನಾಶ ಆದರಣೀಯವಾಗಿ ಪ್ರೇಕ್ಷಕರಿಗೆ ಆದರ್ಶವಾಗುತ್ತಾನೆ. ಪುಷ್ಪಾ-ಅವಿನಾಶ್ ಪಾತ್ರಗಳಂತೆ ಇವರೀರ್ವರ ಬದುಕು ಕೂಡ.

ರಾಜಮ್ಮ ಕಲಾ ಕುಟುಂಬದಿಂದಲೇ ಬಂದವರು. ತಂದೆ, ತಾಯಿ, ತಂಗಿ ಎಲ್ಲರೂ ಕಲಾವಿದರು. ಬದುಕಿನಲ್ಲಿ ನೊಂದು ಬೆಂದು ಸೋತು ಬಂದಿದ್ದ ರಾಜಮ್ಮನವರನ್ನು ಕಲಾ ಪತ್ನಿಯನ್ನಾಗಿ ಸ್ವೀಕರಿಸಿ ಬದುಕು ಕೊಟ್ಟು ಹೊಸ ಬೆಳಕಾದ ಶ್ರೀಧರ ಮಾನವೀಯತೆಯ ಪ್ರತೀಕ. ರಾಜಮ್ಮನಿಗೆ ಓದು – ಬರಹ ಬರಲಿಕ್ಕಿಲ್ಲ, ಶಾಲೆ – ಕಾಲೇಜು – ಕಟ್ಟೆ ಹತ್ತರಿಲಿಕ್ಕಿಲ್ಲ ಆದರೆ ಹೃದಯವಂತೆ ಹಿರಿಯರನ್ನು ಗೌರವಿಸುತ್ತ ಕಿರಿಯರನ್ನು ಪ್ರೀತಿಸುತ್ತ ಗೌರವದಿಂದ ಬದುಕುವವರು ತಾಳ್ಮೆ, ಸಹನೆಗಳಂಥ ಗುಣಗಳಿಂದ ಶ್ರೀಧರ ನಂಥ ಸಿಡುಕು ಮನುಷ್ಯನ ಜೊತೆ ಸಮಾಧಾನದಿಂದ ಸಂಸಾರ ಮಾಡುತ್ತ ಬಂದುದು ಸಾಮಾನ್ಯವಲ್ಲ.

ರಾಜಮ್ಮ ಸರಳ ಸೀದಾ-ಸಾದಾ ಕಲಾವಿದೆ. ಆಡಂಬರವಿಲ್ಲ, ಅಹಂಕಾರವಿಲ್ಲ, ಸ್ವಾಭಿಮಾನಿ ಕಷ್ಟ ಅಂತ ಚಿಂತಿಸಿದವರಲ್ಲ ಎಲ್ಲವೂ ಅಚ್ಚುಕಟ್ಟು ತನ್ನ ವೇತನದೊಂದಿಗೆ, ಶ್ರೀಧರ ಹೆಗಡೆಯವರೂ ಕೊಟ್ಟ ಹಣ ಕೂಡಿಡುತ್ತ ವಿಜಯಪುರದ ಯೋಗಾಪುರದಲ್ಲಿ ಚಿಕ್ಕದೊಂದು ಮನೆಕಟ್ಟಿಕೊಂಡು ಇಬ್ಬರು ಮಕ್ಕಳೊಂದಿಗೆ ತೃಪ್ತಿಯ ಬದುಕು ಬದುಕುತ್ತಿದ್ದಾರೆ. ಶ್ರೀಧರ ಅವರು ಕಂಪನಿಯ ಜೊತೆ ಜೊತೆ ಇದ್ದರೂ ಬಿಡುವು ಸಿಕ್ಕಾಗಲೆಲ್ಲ ವಿಜಯಪುರಕ್ಕೆ ಬಂದು ಮನೆಯತ್ತ ಕಾಲಜಿವಹಿಸುತ್ತಾರೆ. ಶ್ರೀಧರ ರಾಜಮ್ಮನವರ ರಂಗದ ಬದುಕು, ಕೌಟುಂಬಿಕ ಬದುಕು ಅನೇಕ ಸಮಸ್ಯೆಗಳೊಂದಿಗೂ ಖುಷಿಕೊಟ್ಟಿದೆ.

ರಾಜಮ್ಮನನ್ನು, ಮಗಳು ಸುನಂದಾಳನ್ನು ಪ್ರಪ್ರಥಮವಾಗಿ ಹೆಗಡೆಯವರು ಕೆರೆಹೊಂಡ ಗ್ರಾಮಕ್ಕೆ ತುಂಬ ಆಳುಕಿನಿಂದಲೇ ಕರೆದುಕೊಂಡು ಹೋದಾಗ ರಾಜಮ್ಮನನ್ನು ಯಾರು, ಯಾವ, ಜಾತಿ, ಯಾವ, ಕುಲ, ಎಂದು ವಿಚಾರಿಸದೆ ಮನೆಯ ಯಜಮಾನರು ಮುಕ್ತ ಪ್ರವೇಶ ನೀಡಿದಾಗ ಶ್ರೀಧರ ಅವರಿಗೆ ಸಂತಸವಾಯಿತು. ಈ ವಿಷಯದಲ್ಲಿ ಒಂದಡೆ ಅವರೇ ಬರೆದು ಕೊಂಡದ್ದು.........

"ನಾನು ನನ್ನ ಪತ್ನಿ ರಾಜೇಶ್ವರಿ (ರಾಜಮ್ಮ) ಮಗಳು ಸುನಂದಾಳನ್ನು ನನ್ನೂರಿಗೆ ಕರೆದುಕೊಂಡು ಹೋದೆ. ನನ್ನ ಮನೆಯವರು ಸಂಪ್ರದಾಯಸ್ಥರು. ನನ್ನ ಹೆಂಡತಿ, ಮಗಳನ್ನು ಯಾವ ರೀತಿ ಸ್ವೀಕರಿಸುತ್ತಾರೆನ್ನುವುದೇ ಆತಂಕವಾಗಿತ್ತು. ನನ್ನ ಸೋದರರೆಲ್ಲರೂ ವಿದ್ಯಾವಂತರು ಅವರ ಪತ್ನಿಯರೂ ಓದಿಕೊಂಡವರು ನನ್ನ ತಂದೆ–ತಾಯಿ ಕಲಾಕ್ಕೆ ತಕ್ಕಂತೆ ಬದಲಾಗಿದ್ದರು. ನನ್ನ ಸಂಸಾರವನ್ನು ಸಂತೋಷದಿಂದಲೇ ಸ್ವೀಕರಿಸಿದಾಗ ಮತ್ತೆ ಮನೆ, ಬಂಧು–ಬಳಗದ ನಂಟು ಬೆಳೆಯಿತು"

**ಉಪಸಂಹಾರ:**

ಶ್ರೀಧರ ಅವರಿಗೆ ದೀರ್ಘ ರಂಗ ಬದುಕಿನ ತೃಪ್ತಿ ಇದೆ ತಮ್ಮ ಕನಸುಗಳನ್ನು ನನಸು ಮಾಡಿಕೊಂಡಿದ್ದಾರೆ. ತಮ್ಮ ಗುರಿ ತಲುಪಿದ್ದಾರೆ. ನಿರ್ದೇಶನದಿಂದ ಉತ್ತಮ ನಾಟಕ ಪ್ರದರ್ಶನಗಳಿಗೆ ಕಾರಣರಾಗಿದ್ದಾರೆ. ನಾಡಿನ ನೂರಾರು ಜನರ ಪ್ರೀತಿ, ವಿಶ್ವಾಸ ಇಂದಿಗೂ ಇದೆ. ಅಭಿಮಾನಿಗಳ ಬಳಗ ಸಾಕಷ್ಟಿದೆ. ಅರವತ್ತು ದಾಟಿದರೂ ಹುಮ್ಮಸ್ಸು ಉತ್ಸಾಹ ಕಡಿಮೆಯಾಗಿಲ್ಲ.

ಶ್ರೀಧರ ಅವರ ಎಲ್ಲ ಕೆಲಸಗಳ ಹಿಂದೆ ಬಲವಾದ ಆಸಕ್ತಿಯಿದೆ. ಆಸಕ್ತಿಯಿದ್ದಲ್ಲಿ ಉತ್ಸಾಹವಿರುತ್ತೆ ಈ ಉತ್ಸಾಹ ಈ ಆಸಕ್ತಿಯಿಂದಲೇ ಅವರು ತಮ್ಮನ್ನು ಸಂಪೂರ್ಣ ರಂಗಕ್ಕರ್ಪಿಸಿಕೊಂಡು ದುಡಿದಿದ್ದಾರೆ. ಅವರು ನಡೆದ ದಾರಿಗನೇ ದಣಿವಾಯಿತೇ ವಿನಃ ಅವರಿಗೆ ದಣಿವಾಗಲಿಲ್ಲ. ಉನ್ನತವಾದ ಆಸಕ್ತಿಯಲಿ, ಪ್ರಮಾಣಿಕ ಪ್ರಯತ್ನದಲ್ಲಿ ಸಾಗಿದಾಗ ದಾರಿಸರಿದದ್ದೇ ಗೊತ್ತಾಗುವುದಿಲ್ಲ. ಈ ಅರವತ್ತು ಅವರ ಯಾವ ಉತ್ಸಾವನ್ನೂ ಕುಗ್ಗಿಸಿಲ್ಲ.

"ನಿನ್ನ ಇರುವಿಕೆ ಈಗ ಎಲ್ಲೆಲೂ ಕಂಡು ಬರುತ್ತಿದೆ
ನನಗೆ ಪ್ರತಿ ಸಂಜೆಯಲ್ಲಿ ಜೀವನದ ಮುಂಜಾವು ಕಾಣುತ್ತಿದೆ."

ಎನ್ನುವ ಕವಿಯ ಸಾಲುಗಳಂತೆ ಬದುಕಿನ ಈ ಸಂಜೆಯ ದಿನಗಳೂ ಅವರಿಗೆ ಮುಂಜಾವಾಗಿ ಕಾಣುತ್ತಿವೆ. ಅವರಲ್ಲಿ ಜೀವನೋತ್ಸಾಹ ಕುಂದಿಲ್ಲ. ಆ ಲವಲವಿಕೆ, ಆ ಉತ್ಸಾಹ ಇನ್ನೂ ಹೆಚ್ಚು ಹೆಚ್ಚು ರಂಗದಲ್ಲಿ ತೊಡಗಿಸಿಕೊಳ್ಳುಂತೆ ಮಾಡಿದೆ ಅವರ ಸೃಜನ ಶೀಲ ಬದುಕು ರಂಗದಲ್ಲಿ ಮುಕ್ತವಾಗಿ ಗೋಚರಿಸುತ್ತಿದೆ.

ಶ್ರೀಧರ ಅವರು ಕಳೆದ ಮೂವತ್ತು ವರ್ಷಗಳಿಂದ ಶೇಖಮಾಸ್ತರರ ಸ್ನೇಹ ವಲಯದಲ್ಲಿ ಬಂದು ಅವರ **"ಶ್ರೀಗುರು ಕುಮಾರೇಶ್ವರ ನಾಟ್ಯ ಸಂಘ"** ಹಾನಗಲ್ ಕಂಪನಿ ಸಂಚಾಲಕರಾಗಿ ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದಾರೆ. ಶೇಖಮಾಸ್ತರ ಹಾಗೂ ಶ್ರೀಧರ ಅವರ ಸ್ನೇಹ ಮಾತ್ರ ಎಲ್ಲರ ಮೆಚ್ಚುಗೆ ಪಡೆದಿದೆ ಅವರೀರ್ವರಲ್ಲಿ ಏನೇ ಭಿನ್ನಾಭಿಪ್ರಾಯವಿರಲಿ, ಏನೇ ತಪ್ಪುಗಳಿರಲಿ ಅವುಗಳನ್ನು ಗಮನಿಸುವುದಿಲ್ಲ ಅವುಗಳಿಂದ ಸ್ನೇಹಕ್ಕೆ ಧಕ್ಕೆ ಬಂದಿಲ್ಲ. ಅವರು ಒಬ್ಬರಿಗೊಬ್ಬರು ತಪ್ಪುಗಳ ಸಮೇತವಾಗಿ ಪ್ರೀತಿಸುತ್ತಾರೆ. ಇದೇ ನಿಜವಾದ ಸ್ನೇಹ.

ಶ್ರೀಧರ ಹೆಗಡೆಯವರನ್ನು ಅನೇಕ ನಾಟಕ ಕಂಪನಿಗಳ ಮಾಲಿಕರು, ನಾಟಕಕಾರರು ಮೆಚ್ಚಿಕೊಂಡಿದ್ದಾರೆ ಅವರನ್ನು ರಂಗ ಸಂಘಟಕರೆಂದು, ರಂಗ ನಿರ್ದೇಶಕರೆಂದು ಗೌರವಿಸುತ್ತಾರೆ. ವೃತ್ತಿರಂಗ ಭೂಮಿಯ ಉತ್ತಮ ನಿರ್ದೇಶಕರ ಸಾಲಿನಲ್ಲಿ ಬಹುಬೇಗ ಗುರುತಿಸಿಕೊಳ್ಳುತ್ತಾರೆ. ಸಂಕೀರ್ಣ ರಂಗ ಬದುಕಿನಲ್ಲಿ ಅತ್ಯಂತ ಸ್ಪಷ್ಟ ಮತ್ತು ಶಕ್ತಿಯುತ ಅಭಿವ್ಯಕ್ತಿಯ ಶ್ರೀಧರ ಸಾಕಷ್ಟು ಹೆಸರು ಮಾಡಿದ್ದಾರೆ.

ಶ್ರೀಧರ ಹೆಗಡೆ ಈ ನಾಡಿನ ವೃತ್ತಿರಂಗ ವಿಚಾರವಂತರಲ್ಲೊಬ್ಬರು. ಎಷ್ಟು ತೀಕ್ಷ್ಣ ಮತಿಗಳೋ ಅಷ್ಟೇ ಸೂಕ್ಷ್ಮ ಸಂವೇದಿ. ಅನೇಕ ವಿದ್ವಾಂಸರನ್ನು ಎದುರು ಹಾಕಿಕೊಂಡು ತಮ್ಮದೇ ವಿಚಾರನ್ನು ಪ್ರತಿಪಾದಿಸಿದವರು. ಯಾರನ್ನೂ ಲೆಕ್ಕಿಸದೇ ತಮ್ಮ ನಿಲುವನ್ನು ಸಿದ್ಧಾಂತವನ್ನು ಬಿಂಬಿಸುವವರು ಯಾರು ಒಪ್ಪಲಿ ಬಿಡಲಿ ತಮ್ಮ ಅನಿಸಿಕೆಗಳನ್ನು ಸ್ಪಷ್ಟಪಡಿಸುವ ನಿಷ್ಠುರವಾದಿ. ವೃತ್ತಿರಂಗದ ವಿಷಯದಷ್ಟೇ ರಾಜಕೀಯದಲ್ಲಿ, ಸಾಹಿತ್ಯದಲ್ಲಿ ಮಾತನಾಡುವ ಶಕ್ತಿಯೂ ಅವರಲ್ಲಿದೆ.

ಶ್ರೀಧರ ಅವರ ಇನ್ನೊಂದು ಬಹು ಮುಖ್ಯಗುಣವೆಂದರೆ ರಂಗಭೂಮಿಯಲ್ಲಿ, ಸಾಹಿತ್ಯದಲ್ಲಿ ಯಾರಿಗನೇ ಪ್ರಶಸ್ತಿ ಬಂದಾಗ ಅವರಿಗೆ ಅಭಿನಂದಿಸಿ ಸಂತೋಷ ಹಂಚಿಕೊಳ್ಳುತ್ತಾರೆ. ತಮ್ಮ ರಂಗಭೂಮಿಗೆ ಕರೆಯಿಸಿ ಸನ್ಮಾನಿಸಿ, ಗೌರವಿಸಿ ಅವರ ಪ್ರತಿಭೆಯ ಬಗ್ಗೆ ಬಂದ ಪ್ರೇಕ್ಷಕರಿಗೆ ಪರಿಚಯಸುತ್ತಾರೆ.

ಇಂಥ ತಿಳುವಳಿಕೆಯ ಕಂಪನಿಯ ಒಡೆಯರು ಬಹು ಅಪರೂಪ. ಇತರನ್ನು ಪ್ರೀತಿಸುವ, ಗೌರವಿಸುವ, ಅವರ ಸಾಧನೆಗೆ ತಾವು ಖುಷಿಪಡುವ ಗುಣ ಎಷ್ಟು ಜನಕ್ಕಿದೆ? ಶ್ರೀಧರ ಹೆಗಡೆ ರಂಗಭೂಮಿಗೆ ತಮ್ಮನ್ನು ಅರ್ಪಿಸಿಕೊಂಡು ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ದುಡಿದು ಯಶಸ್ಸು ಪಡೆದರು ಈ ಯಶಸ್ಸಿನ ಹಿಂದೆ ಹೋರಾಟ, ಶ್ರಮ, ಶ್ರದ್ಧೆ, ಪ್ರಾಂಜಲ ಮನಸ್ಸಿದೆ. ಅವರ ಸುಂದರ ಬದುಕಿನ ಹಂದರದ ಮೇಲೆ ಸಂಸ್ಕೃತಿ – ಸಂಸ್ಕಾರಗಳ ಬಳ್ಳಿ ಹರಡಿಧೆ. ಅದುವೇ ಅವರ ಜೀವನ ಸಾಕ್ಷಾತ್ಕಾರ ಶ್ರೀಧರ ಅವರಿಗೆ ರಂಗಭೂಮಿ ಧರ್ಮವೂ ಹೌದು ಜ್ಞಾನವೂ ಹೌದು, ಜೀವನವೂ ಹೌದು ಜೀವಾಳವೂ ಹೌದು.

# ಅನುಬಂಧ

# BIO-DATA (ಪರಿಚಯ ಪತ್ರ)

| | | |
|---|---|---|
| ಹೆಸರು | : | ಶ್ರೀಧರ ಹೆಗಡೆ |
| ತಂದೆ ಹೆಸರು | : | ಶ್ರೀ ಗಣಪತಿ ಹೆಗಡೆ |
| ತಾಯಿಯ ಹೆಸರು | : | ಶ್ರೀಮತಿ ಗಂಗಾ ಹೆಗಡೆ |
| ಜನ್ಮ ದಿನಾಂಕ | : | 03–08–1955 |
| ಜನ್ಮ ಸ್ಥಳ | : | ಕೆರೆಹೊಂಡ, ತಾ:ಸಿದ್ದಾಪೂರ, ಜಿ:ಕಾರವಾರ |
| ಶಿಕ್ಷಣ | : | ಎಸ್.ಎಸ್.ಎಲ್.ಸಿ. |
| ಸಂಪರ್ಕ ಮೊಬೈಲ್ ನಂ. | : | 9480927016 |
| ಹವ್ಯಾಸ | : | ಸಾಹಿತ್ಯ, ರಂಗಭೂಮಿ, ಬರಹ |
| ಸೇವೆ | : | ವೃತ್ತಿ ಕಲಾವಿದನಾಗಿ, ಕಂಪನಿ ಮಾಲಕನಾಗಿ, ಸಂಚಾಲಕನಾಗಿ, ನಿರ್ದೇಶಕನಾಗಿ ನಿರಂತರ 40 ವರ್ಷಗಳ ಸೇವೆ, ಪ್ರಚಲಿತವಾಗಿ ಸಂಚಾಲಕ, ನಿರ್ದೇಶಕ ಶ್ರೀ ಕುಮಾರೇಶ್ವರ ನಾಟ್ಯ ಸಂಘ, ಹಾನಗಲ್ |
| ಸಾಧನೆ | : | ಗುಲಬರ್ಗಾ ಮಹಾನಗರದಲ್ಲಿ 12 ವರ್ಷಗಳಿಂದ ನಿರಂತರವಾಗಿ ಶ್ರೀ ಗುರುಕುಮಾರೇಶ್ವರ ನಾಟ್ಯ ಸಂಘ ಹಾನಗಲ್ ಕಂಪನಿಯ ಸಂಚಾಲಕರಾಗಿ ನಿರ್ದೇಶಕರಾಗಿ ಸಂಘಟಿಕರಾಗಿ 23 ನಾಟಕಕಾರರ 7000ಕ್ಕೂ ಹೆಚ್ಚು ಪ್ರಯೋಗಗಳನ್ನು ಪ್ರಯೋಗಿಸಿ ವೃತ್ತಿ ರಂಗಭೂಮಿ ಇತಿಹಾಸದಲ್ಲಿ ಹೊಸ ದಾಖಲೆಯನ್ನು ಬರೆದದ್ದು. |
| ಪ್ರಶಸ್ತಿ ಪುರಸ್ಕಾರಗಳು | : | 1) 2001 ರಲ್ಲಿ ಕರ್ನಾಟಕ ನಾಟಕ ಅಕಾಡಮಿಯಿಂದ (ವಾರ್ಷಿಕ ಪ್ರಶಸ್ತಿ)<br>2) 2005ರಲ್ಲಿ ಕಲ್ಬುರ್ಗಿ "ಮೇಘಮಲ್ಹಾರ" ಪ್ರಶಸ್ತಿ.<br>3) 2016ರಲ್ಲಿ ಕಲ್ಬುರ್ಗಿ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ್ ಸಂಸ್ಥೆ ಹಾಗೂ ಜಾನಪದ ಅಕಾಡೆಮಿಯಿಂದ ಸನ್ಮಾನ.<br>4) 2007ರಲ್ಲಿ ಗುಲಬರ್ಗಾ ಅಭಿನಂದನಾ ಸಂಸ್ಥೆಯಿಂದ ಮಾಜಿ ಮುಖ್ಯಮಂತ್ರಿ |

ಶ್ರೀ ಧರ್ಮಸಿಂಗ ಹಾಗೂ
ಶ್ರೀ ಮಲ್ಲಿಕಾರ್ಜುನ ಖರ್ಗೆ, ವಿರೋಧ
ಪಕ್ಷದ ನಾಯಕರು, ವಿಧಾನ ಪರಿಷತ್ತು
ಸದಸ್ಯೆ ಶ್ರೀಮತಿ ಉಮಾಶ್ರೀ
ಹಾಗೂ ಅಭಿನಂದನಾ ಸಮಿತಿಯ
ಅಧ್ಯಕ್ಷರಾದ ಶ್ರೀ ಅಲ್ಲಮಪ್ರಭು ಪಾಟೀಲ್
ಇವರಿಂದ "ಬೆಳ್ಳಿ ಕಿರಿಟ" ಧಾರಣೆ
ಯೊಂದಿಗೆ ಪ್ರಶಸ್ತಿ ಪುರಸ್ಕಾರ.

5) ಮಹಾಂತಜ್ಯೋತಿ ಪ್ರತಿಷ್ಠಾನ ಗುಲಬರ್ಗಾ
ಕಲಾಜ್ಯೋತಿ ಎಂಬ ಬಿರುದು
ನೀಡಿ ಸನ್ಮಾನ.

6) ಹಾರಕೂಡ ಷ.ಬ್ರ. ಚೆನ್ನವೀರ
ಶಿವಾಚಾರ್ಯರಿಂದ ಚಿನ್ನದ ಉಂಗುರ
ಮೈಸೂರ ಪೇಟಾ ತೊಡಿಸಿ ಸನ್ಮಾನ.

7) ಗುಲಬರ್ಗಾ ನಗರದಲ್ಲಿ ಸಂಸ್ಥೆಯ
ದಶಮಾನೋತ್ಸವ ಸಂದರ್ಭದಲ್ಲಿ
ಷ.ಬ್ರ ಚೆನ್ನವೀರ ಶಿವಚಾರ್ಯರು ಹಾಗೂ
ಎಮ್.ಎಲ್.ಸಿ. ಶ್ರೀ ಅಲ್ಲಮಪ್ರಭು
ಪಾಟೀಲರಿಂದ ಚಿನ್ನದುಂಗರ ತೊಡಿಸಿ
ಸನ್ಮಾನ.

8) ಗುಲಬರ್ಗಾ ಜಿಲ್ಲಾ 13ನೇ ಕನ್ನಡ ಸಾಹಿತ್ಯ
ಸಮ್ಮೇಳನದಲ್ಲಿ ಸಮ್ಮೇಳನದ ಸರ್ವಾಧ್ಯಕ್ಷರು
ಹಾಗೂ ಜಿಲ್ಲಾ ಸಾಹಿತ್ಯ ಪರಿಷತ್
ಅಧ್ಯಕ್ಷರಿಂದ ಸನ್ಮಾನ.

9) ಇನ್ನೂ ನಾಡಿನ ಅನೇಖ ಸಂಘ
ಸಂಸ್ಥೆಗಳಿಂದ ಸನ್ಮಾನ ಹಾಗೂ ಬಿರುದು.

10) 2016 ನವೆಂಬರ ಶ್ರೀ ಚೆನ್ನ ಬಸವೇಶ್ವರ
ಮಠದಿಂದ "ಚೆನ್ನ ರತ್ನ" ಪ್ರಶಸ್ತಿ
ನೀಡಿ ಸನ್ಮಾನ.

ಖಾಯಂ ವಿಳಾಸ : **ಶ್ರೀಧರ ಹೆಗಡೆ, ರಂಗ ಕಲಾವಿದರು**
**ಯೋಗಾಪುರ, ವಾರ್ಡ್ ನಂ.16**
**ವಿಜಯಪುರ.**
**ಮೊ. 9480927016**

## ಶ್ರೀಧರ ಹೆಗಡೆಯವರು ನಿರ್ದೇಶಿಸಿ ಅಭಿನಯಿಸಿದ ಪ್ರಮುಖ ನಾಟಕದ ಪಾತ್ರಗಳು

| ಕ್ರ. | ನಾಟಕದ ಹೆಸರು | ನಾಟಕ ಕರ್ತೃ | ಅಭಿನಯಿಸಿದ ಪಾತ್ರ |
|---|---|---|---|
| 1. | ಮಾತಂಗಕನ್ಯ | ಕಂದಗಲ್ ಹನುಮಂತರಾಯ | – |
| 2. | ಮನೆ ಮಗಳು | ಮಹಂತೇಶ ಶಾಸ್ತ್ರಿ | ವಿದ್ಯಾಧರ |
| 3. | ಸಿಂಧೂರ ಲಕ್ಷ್ಮಣ | | ಗಾರಮಾನ್ |
| 4. | ಬಹದ್ದೂರ ಮಗ | ಶಂಕರಯ್ಯ ಕಟಪಟ್ಟಿ | ರಾಜೇಶ್ |
| 5. | ಭಲೇ ಮಗಳೆ | ಪ್ರಕಾಶ ಕಡಪಟ್ಟಿ (ನಿರ್ದೇಶನ) | ಪ್ರವೀಣ (ನಾಯಕ) |
| 6. | ಬಂಗಾರದ ಮನುಷ್ಯ | ಪ್ರಕಾಶ ಕಡಪಟ್ಟಿ (ನಿರ್ದೇಶನ) | ಆನಂದ (ನಾಯಕ) |
| 7. | ಸಂಗಮ | ಶಂಕರಯ್ಯ ಕಡಪಟ್ಟಿ | ರಾಜೇಶ (ನಾಯಕ) |
| 8. | ಮದನ ಮೋಹನ | ಶಂಕರಯ್ಯ ಕಡಪಟ್ಟಿ (ನಿರ್ದೇಶನ) | ಮದನ (ನಾಯಕ) |
| 9. | ಪಾಪದ ದೇಹ ಪುಣ್ಯದ ಜೀವ | ಎಸ್.ಎಂ.ಖೇಡಗಿ | ರಾಜೇಶ (ನಾಯಕ) |
| 10. | ಮದು ಮಗಳು | ಡಿ.ಪಿ.ಬಿ.ಧೊತ್ತರಗಿ | – |
| 11. | ಸತ್ಯ ಹರಿಶ್ಚಂದ್ರ | ಜಿ.ಜಿ.ಹೆಗಡೆ | ವಿಶ್ವಾಮಿತ್ರ |
| 12. | ರೇಣುಕಾ ಎಲ್ಲಮ್ಮ | ಬಸವಲಿಂಗ ಶಾಸ್ತ್ರೀ ಫಕೀರಪ್ಪ ವರವಿ (ನಿ) | ಪರಶುರಾಮ |
| 13. | ಹೇಮರಡ್ಡಿ ಮಲ್ಲಮ್ಮ | ಶ್ರೀಕಂಠ ಶಾಸ್ತ್ರೀ | ವೇಮಣ್ಣ |
| 14. | ಚಿತ್ರಾಂಗದಾ | ಕಂದಗಲ್ ಹನುಮಂತರಾಯ | ಕೌಂಟೇನ್ಯ |
| 15. | ದೇವರ ಆಟ ತಿಳಿದಿಲ್ಲ | ಎಸ್. ಎಂ.ಖೇಡಗಿ | ನಾಯಕ |
| 16. | ನಿಮ್ಮ ಹೆಂಡತಿ ನಾನಲ್ಲ | ಎಸ್. ಎಂ.ಖೇಡಗಿ | ನಾಯಕ |
| 17. | ಕಿವುಡ ಮಾಡಿದ ಕಿತಾಪತಿ | ಕೆ.ಎನ್. ಸಾಳುಂಕೆ | ಪಾರ್ಥ ಸಾರಥಿ (ಹಾಸ್ಯ) |
| 18. | ಕಣ್ಣಿದ್ದರೂ ಬುದ್ಧಿ ಬೇಕು | ಕೆ.ಎನ್. ಸಾಳುಂಕೆ | ಪೋಲೀಸ್ (ಹಾಸ್ಯ) |

| | | |
|---|---|---|
| 19. ಬದುಕು ಬಂಗರವಾಯ್ತು | ಕೆ.ಎನ್. ಸಾಳುಂಕೆ | ಮುಕ್ಕಣ್ಣಾ (ಹಾಸ್ಯ) |
| 20. ಮಿ॥ ಗುಂಡುರಾವ್ | ಮಾರುತೇಶ ಮಾಂಡ್ರೆ | ಗುಂಡು (ಹಾಸ್ಯ) |
| 21. ಎಚ್ಚರ ತಂಗಿ ಎಚ್ಚರ | ನಾದೆ ನರಸಿಂಹ | ಶರಭಯ್ಯ (ವಿಲನ್) |
| 22. ಮುದುಕನ ಮದುವೆ | ಪಿ.ಬಿ. ದುತ್ತರಗಿ | ರಂಗಣ್ಣ (ಹಾಸ್ಯ) |
| 23. ಭಗವಂತ ಕೊಟ್ಟ ಭಾಗ್ಯ | ಎನ್.ಎಸ್. ಕಣವಿ | ಅನುಕುಲ (ಹಾಸ್ಯ) |
| 24. ಚನ್ನಪ್ಪ ಚನ್ನಗೌಡ | ಎನ್.ಎಸ್.ಜೋಶಿ | ಚನ್ನಪ್ಪ (ನಾಯಕ) |
| 25. ಮರಳಿ ಪಡೆದ ಮಾಂಗಲ್ಯ | ಪ್ರಕಾಶ ಕಡಪಟ್ಟಿ | ಕುರಟ್ಟಿ ಮಾಸ್ತರ (ಹಾಸ್ಯ) |
| 26. ಗಡಿಬಿಡಿ ಅಳಿಯ | ಎಚ್.ಎನ್.ಹೂಗಾರ | ಉಡುಪಿಮಾಣಿ (ಹಾಸ್ಯ) |
| 27. ಛಲ ತೀರಿಸಿದ ಹೆಣ್ಣು | ನಾದೇ ನರಸಿಂಹ | ಆನಂದ (ನಾಯಕ್) |
| 28. ನೀನೂ ಸಾಹುಕಾರನಾಗು | ಕೆ.ಎನ್.ಸಾಳುಂಕೆ | ಪರಮೇಶಿ (ನಾಯಕ್) |
| 29. ಭೂಮಿ ತೂಕದ ಹೆಣ್ಣು | ಪ್ರಕಾಶ ಕಡಪಟ್ಟಿ | ರಾಚೋಟೆಪ್ಪಾ (ಹಾಸ್ಯ) |
| 30. ಬಸ್. ಹಮಾಲ | ಎಚ್.ಎಸ್.ತಾರನಾಳ | ರಂಗ (ಹಾಸ್ಯ) |
| 31. ಮೋಜಿನ ಮದುವೆ | ಫಕೀರಪ್ಪ ವರವಿ | ವಿರುಪಾಕ್ಷ |
| 32. ಕಲಿಯುಗದ ಕೌರವ | ಕೆ.ಮಹಾದೇವಯ್ಯಾ | ಚಂದು (ನಾಯಕ) |
| 33. ಸಾಕ್ಷಿಗೆ ಬಂದ ಸಾವಿತ್ರಿ | ಎಚ್.ಎನ್.ಹೂಗಾರ | ತಲಾಟಿ (ಹಾಸ್ಯ) |
| 34. ಬಸ್. ಕಂಡಕ್ಟರ್ | ಬಿ.ಆರ್.ಅರಶಿಣಗೋಡಿ | ಕಂಡಕ್ಟರ್ (ಹಾಸ್ಯ) |
| 35. ನಂಬ್ರಿ, ಬಿಡ್ರಿ ಇದು ನಿಜ | ಶಿವಶಂಕರ ಬ್ಯಾಳಿ (ನಿರ್ದೇಶನ) | ಶಶಿಧರ (ನಾಯಕ) |

| | | |
|---|---|---|
| 36. ಮಾನವಂತರ ಮಕ್ಕಳು | ಮಾರುತೇಶ ಮಾಂಡ್ರೆ | ಮೋಹನ (ನಾಯಕ) |
| 37. ಕಾಳಿಂಗ ಸರ್ಪ | ಈರಣ್ಣಾ ಹಂಸನೂರ | ಬಿಕುಸಾ (ಹಾಸ್ಯ) |
| 38. ತ್ಯಾಗಜೀವಿ | ಎನ್.ಎಸ್.ಜೋಶಿ | ಶೆಟ್ಟಿ (ಹಾಸ್ಯ) |
| 39. ಹಸಿರು ಬಳೆ | ಎಂ.ಎಸ್.ಕಣವಿ | ಗುರುಸಿದ್ದ (ಹಾಸ್ಯ) |
| 40. ಕಳ್ಳ ಗುರು ಸುಳ್ಳ ಶಿಷ್ಯ | ಎನ್.ಎಸ್.ಜೋಶಿ | ಸಿದ್ಧ (ಹಾಸ್ಯ) |
| 41. ಗೌಡ್ರ ಗದ್ಲ | ಬಿ.ವಿ.ಈಶ | ಮಲ್ಲೇಶ (ಹಾಸ್ಯ) |
| 42. ದ್ಯಾಮಣ್ಣ ಶ್ಯಾಮಣ | ಮಾರುತೇಶ ಮಾಂಡ್ರೆ | ಶೇಖರ (ನಾಯಕ) |
| 43. ವರನೋಡಿ ಹೆಣ್ಣುಕೊಡು | ಕೆ.ಎನ್.ಸಾಳುಂಕೆ | ಶಿವು (ನಾಯಕ) |
| 44. ಕೊರವಂಜಿ | ಎಚ್.ಎನ್.ಹೂಗಾರ | ರುದ್ರ (ಹಾಸ್ಯ) |
| 45. ನನ್ನ ಗಂಡನ ಹೆಂಡತಿ | ಎಸ್.ಎಂ.ಖೇಡಗಿ | ಹುಚ್ಚ (ಹಾಸ್ಯ) |
| 46. ಮಂತ್ರಿ ಮಗಳು | ಬಿ.ಆರ್.ಅರಶಿಣಗೋಡಿ | ಶೇಖರ (ನಾಯಕ) |
| 47. ರೈತನ ಮಕ್ಕಳು | ಎನ್. ಬಸವರಾಜು | ಶಿವರುದ್ರ (ನಾಯಕ) |
| 48. ತವರು ಬಿಟ್ಟ ತಂಗಿ | ಪ್ರಕಾಶ ಕಡಪಟ್ಟಿ (ನಿರ್ದೇಶನ) | ಪೈಲವಾನ (ಹಾಸ್ಯ) |
| 49. ಸತಿ ಸಂಸಾರದ ಜ್ಯೋತಿ | ಪ್ರಕಾಶ ಕಡಪಟ್ಟಿ (ನಿರ್ದೇಶನ) | ಡಾಕ್ಟರ್ (ನಾಯಕ) |
| 50. ಧರ್ಮಾಧಿಕಾರಿ | ಬಸವರಾಜು ಪಂಚಗಲ್ (ನಿರ್ದೇಶನ) | ಮುನಿಮ (ಹಾಸ್ಯ) |
| 51. ವಿಧಿಯ ಕೈವಾಡ | ಎನ್. ಬಸವರಾಜ | ಈಶ್ವರಪ್ಪಾ (ಹಾಸ್ಯ) |
| 52. ಗೌರಿ ಹೋದಳು ಗಂಗೆ ಬಂದಳು | ಎಸ್.ಎಂ.ಖೇಡಗಿ | ಮಲ್ಲನ ನೌಕ (ಯಜಮಾನ) |

| | | |
|---|---|---|
| 53. ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ | ಎಸ್.ಎಂ.ಕಣವಿ | ಬಸ್ಯಾ (ಹಾಸ್ಯ) |
| 54. ಮಗಳಾಗಿ ಬಂದಳು ಸೊಸೆಯಾಗಿ ನಿಂತಳು | ಬಸವರಾಜ ಪಂಕಲ | ಶ್ರೀಧರ (ಹಾಸ್ಯ) |
| 55. ಇದು ಹಿಂಗ್ಯಾಕ ಆತು ಯಕಿಂಗ ಆತು | ಕೆ.ಮಹಾದೇವಯ್ಯ | ಕಂಪೌಂಡರ (ಹಾಸ್ಯ) |
| 56. ಹಾರಕೂಡ ಚನ್ನಬಸವೇಶ್ವರ ಮಹಾತ್ಮೆ | ಎಲ್.ಬಿ.ಕೆ. ಅಲ್ದಾಳ | ಬಿಂದು ಮಾಧವ (ಖಳ ನಾಯಕ) |
| 57. ಹೆಣ್ಣಿಗೆ ಹಟ ಗಂಡಿಗೆ ಚಟ | ಅರಗೋಳ ಪಕ್ಕಣ್ಣ | ವಿಜಯ (ನಾಯಕ) |
| 58. ಯಾರ ತಾಳಿ ಯಾರಿಗೆ | ಎಲ್.ಬಿ.ಕೆ.ಅಲ್ದಾಳ | ಯಂಕಪ್ಪಾ (ಹಾಸ್ಯ) |
| 59. ನಾಯಿಗಳಿವೆ ಎಚ್ಚರಿಕೆ | ಕೆ.ಮಹಾದೇವಯ್ಯ | ನಾಗಪ್ಪ (ಖಳ ನಾಯಕ) |
| 60. ಗೆದ್ದ ಸೊಸೆ ಬಿದ್ದ ಮಾವ | ಎಚ್. ವಡಗೇರಿ | ಲಂಕೇಶ (ಹಾಸ್ಯ) |
| 61. ಗುಣವಂತ ಗಂಡ | ಕೆ.ಮಹೇಶ | ಪುಟ್ಟಣ್ಣ (ನಾಯಕ) |
| 62. ಹೂವಿನ ಅಂಗಡಿ | ಕೆ.ಎನ್.ಸಾಳುಂಕೆ | ಕೋವಿದ (ಹಾಸ್ಯ) |
| 63. ನೀ ಸುಮ್ನಿರಾಕ ಏನ ತಗೋಂತಿ | ಬಸವರಾಜ ಪಂಚಗಲ್ (ನಿರ್ದೇಶನ) | ಮಲ್ಯಾ (ಹಾಸ್ಯ) |
| 64. ಮಡದಿ ಕೊಟ್ಟ ಮತು | ಮಾರುತೇಶ ಮಾಂಡ್ರೆ | ಶೇಖರ (ನಾಯಕ) |
| 65. ಗುಣವಿದ್ದರೆ ಗಂಡ ಋಣವಿದ್ದರೆ ಹೆಂಡತಿ | ಬಸವರಾಜ ಪಂಚಗಲ್ (ನಿರ್ದೇಶನ) | ಕ್ವಾಟರ್ ಕೃಷ್ಣಪ್ಪ (ಹಾಸ್ಯ) |
| 66. ಮಾಡಿದುಣ್ಣೊ ಮಹಾರಾಯ | ಕೆ. ಮಹೇಶ | ಚನ್ನಯ್ಯಸ್ವಾಮಿ (ಹಾಸ್ಯ) |
| 67. ಹಿಂಗೈತಿ ನಮ್ಮೂರ ನ್ಯಾಯ | ಬಸವರಾಜ ಪಂಚಗಲ್ (ನಿರ್ದೇಶನ) | ಸೂರಪ್ಪದೇಸಾಯಿ (ನಾಯಕ) |
| 68. ನಕ್ಕಿದ್ದು ಅರಮನೆ ಸಿಕ್ಕಿದ್ದು ಸೆರೆಮನೆ | ಬಸವರಾಜ ಪಂಚಗಲ್ | ಮಹೇಶ (ಸಹನಾಯಕ) |
| 69. ಗ್ರಾಮ ಪಂಚಾಯತಿ ಗಂಗವ್ವ | ಕೃಷ್ಣಮೂರ್ತಿ | ಧನರಾಜ (ಖಳನಾಯಕ) |

| | | |
|---|---|---|
| **70.** ದೊಸ್ತಿ ಆಸ್ತಿಗಿಂತಲೂ ದೊಡ್ಡದು | ಪ್ರಕಾಶ ಕಡಪಟ್ಟಿ (ನಿರ್ದೇಶನ) | ರಾಮು (ನಾಯಕ) |
| **71.** ಒಂದೇ ಗೂಡಿನ ಹಕ್ಕಿಗಳು | ಪ್ರಕಾಶ ಕಡಪಟ್ಟಿ (ನಿರ್ದೇಶನ) | ಡಾ. ಮಹೇಶ (ನಾಯಕ) |
| **72.** ಮನಗೆ ತಕ್ಕ ಮಗ | ಪ್ರಕಾಶ ಕಡಪಟ್ಟಿ (ನಿರ್ದೇಶನ) | ರಾಮು (ನಾಯಕ) |
| **73.** ಮುರಿಯದ ಮನೆ | ರಾಜ ಮಹ್ಮದ | ಮಹೇಂದ್ರ (ಖಳನಾಯಕ) |
| 74. ರಂಗ ನಾಯಕಿ | ಬಸವರಾಜ ಪಂಚಗಲ್ (ನಿರ್ದೇಶನ) | ವಿದ್ಯಾಧರ (ಸಹನಾಯಕ) |

ಪ್ರಜಾವಾಣಿ ಸಾಪ್ತಾಹಿಕ ಪುರವಣಿ

05

ಭಾನುವಾರ 13 ಜನವರಿ 2013

# ಕುಮಾರೇಶ್ವರ ನಾಟ್ಯಸಂಘದ ವಿಶಿಷ್ಟ ದಶಕ

ರಂಗಬಿನ್ನಹ

ಶಿವರಂಜನ್ ಸತ್ಯಂಪೇಟೆ



ಎಲ್.ಬಿ. ಶೇಖ್ ಮಾಸ್ತರ್



ಶ್ರೀಧರ ಹೆಗಡೆ

ವೃತ್ತಿ ರಂಗಭೂಮಿ ಕಂಪನಿಯೊಂದು ಒಂದೇ ಸ್ಥಳದಲ್ಲಿ ಹತ್ತು ವರ್ಷಗಳಷ್ಟು ದೀರ್ಘ ಕಾಲ ನಾಟಕ ಪ್ರದರ್ಶನ ನೀಡುತ್ತದೆ ಎಂದರೆ ನಂಬುತ್ತೀರಾ? ಕೋಟ್ಯಂತರ ರೂಪಾಯಿ ಬಂಡವಾಳ ಹೂಡಿದ, ಹಾಗೂ ಖ್ಯಾತನಾಮ ಕಲಾವಿದರನ್ನು ಒಳಗೊಂಡು ತಯಾರಿಸಿದ ಸಿನಿಮಾಗಳೇ ಹತ್ತು ದಿನ ಪ್ರದರ್ಶನ ಕಾಣುವುದು ಕಷ್ಟವಾಗಿರುವ ಸಂದರ್ಭದಲ್ಲಿ ನಾಟಕ ಕಂಪನಿಯೊಂದು ಹತ್ತು ವರ್ಷಗಳ ಕಾಲ ಒಂದೇ ಸ್ಥಳದಲ್ಲಿ ಪ್ರದರ್ಶನ ನೀಡಿದೆ ಎನ್ನುವುದನ್ನು ನಂಬುವುದು ಕಷ್ಟ. ನಂಬಲಿಕ್ಕೆ ಕಷ್ಟ ಎನ್ನಿಸುವ ಅಪರೂಪದ ಸಾಧನೆ **'ಶ್ರೀ ಗುರು ಕುಮಾರೇಶ್ವರ ನಾಟ್ಯ ಸಂಘ'ದ್ದು.**

ಗುಲ್ಬರ್ಗ ನಗರದ 'ಸಂಗಮ' ಚಿತ್ರಮಂದಿರದ ಎದುರಿಗೆ ಜೈಲ್ ಗಾರ್ಡನ್ ಇದೆ. ಅಲ್ಲಿ 'ಶ್ರೀ ಗುರು ಕುಮಾರೇಶ್ವರ ನಾಟ್ಯಸಂಘ' ನಿರಂತರವಾಗಿ ಪ್ರದರ್ಶನಗಳನ್ನು ನೀಡುತ್ತಾ ಬಂದಿದೆ. ನಾಟಕ ಕಂಪನಿಯ ಎದುರಿಗೇ ಚಿತ್ರಮಂದಿರ ಇದ್ದರೂ, ಸಿನಿಮಾಗಳಿಗೆ ಸವಾಲು ಎನ್ನುವಂತೆ ನಾಟಕ ಕಂಪನಿಯ ಪ್ರದರ್ಶನಗಳಿಗೆ ಜನ ಮುಗಿಬೀಳುತ್ತಿದ್ದಾರೆ.

'ಕಿವುಡ ಮಾಡಿದ ಕಿತಾಪತಿ', 'ನಾಯಿಗಳಿವೆ ಎಚ್ಚರಿಕೆ', 'ಹಣ್ಣಿಗೆ ಹಾಕು ಗಂಡಿಗೆ ಬೀಳು' ಸೇರಿದಂತೆ ನಾಟ್ಯಸಂಘದ ಕೆಲವು ನಾಟಕಗಳು ನೂರು ಪ್ರದರ್ಶನಗಳನ್ನು ಕಂಡಿವೆ. 'ಗುಣವಿದ್ದರೆ ಗಂಡ – ಋಣವಿದ್ದರೆ ಹೆಂಡತಿ', 'ಬದುಕು ಬಂಗಾರವಾಯ್ತು', 'ಹಾರಕೂಡ ಶ್ರೀ ಚನ್ನಬಸವೇಶ್ವರ ಮಹಾತ್ಮೆ', 'ಭೂಮಿ ತೂಕದ ಹೆಣ್ಣು' ಸೇರಿದಂತೆ ಐವತ್ತು ಪ್ರಯೋಗಗಳನ್ನು ಕಂಡ ನಾಟಕಗಳ ಸಂಖ್ಯೆ ಐವತ್ತರಷ್ಟಿದೆ.

ನಾಟ್ಯಸಂಘದ ಪ್ರದರ್ಶನಗಳ ಯಶಸ್ಸಿನ ಗುಟ್ಟಾದರೂ ಏನು? ಎಷ್ಟೇ ಪರಿಣತ ಕಲಾವಿದರಿರಲಿ, ವಿಭಿನ್ನ ರಂಗ ಪ್ರಯೋಗಗಳಿರಲಿ ಮನರಂಜನೆಯ ಮಾಧ್ಯಮದ ಬೆನ್ನತ್ತಿರುವ ಪ್ರೇಕ್ಷಕನನ್ನು ನಾಟಕಗಳತ್ತ ಆಕರ್ಷಿಸುವುದು ಈಗಿನ ಕಾಲಘಟ್ಟದಲ್ಲಿ ಸುಲಭದ ಮಾತಲ್ಲ. ಆದರಿಲ್ಲಿನ ಚಿತ್ರಣ ಬೇರೆಯದೇ ಆಗಿದೆ. ಹೆಸರಾಂತ ರಂಗಭೂಮಿ ಕಲಾವಿದ ಶ್ರೀಧರ ಹೆಗಡೆಯವರ ಮನೋಜ್ಞ ನಟನೆ ನೋಡುಗರನ್ನು ಚುಂಬಕದಂತೆ ಸೆಳೆಯುತ್ತಿದೆ. ಇವರ ಜೊತೆಗೆ ನಾಟಕಕಾರ ಬಸವರಾಜ ಪಂಚಗಲ್, ರಾಜಾಸಾಬ ಅಮೀನಗಡ, ಸಿದ್ದು ಬೇಗಿ, ವಿಶಾಲಾಕ್ಷಿ, ಹಫೀಜಾ ಬೇಗಂ, ಉಮಾ ಬೀಳಗಿ, ಸದಾಶಿವಯ್ಯ, ಸಾಹೇಬಗೌಡ, ಜಾಹಗೀರದಾರ, ಪ್ರಿಯಾ ಮುಂಡಾದವರ ಅಭಿನಯವೂ ಪ್ರೇಕ್ಷಕರನ್ನು ಸುಮಾರು ಮೂರೂವರೆ ತಾಸು ಹಿಡಿದುಕೊಳ್ಳುವಂತೆ ಮಾಡುತ್ತದೆ.

ಪ್ರಸಕ್ತ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ವಿದ್ಯಮಾನಗಳನ್ನು ನಾಟಕದ ಕಥನಕ್ಕೆ ಪೂರಕವಾಗಿ ಬಳಸಿಕೊಳ್ಳುವ ತಂತ್ರವೂ ಪ್ರೇಕ್ಷಕರನ್ನು ರಂಜಿಸುತ್ತಿದೆ.

"ಈ ಭಾಗದ ಜನರು ನಮ್ಮ ನಾಟಕಗಳನ್ನು ನೋಡಿ ಪ್ರೋತ್ಸಾಹ ನೀಡುತ್ತಿರುವುದರಿಂದಲೇ ಹತ್ತು ವರ್ಷಗಳಿಂದ ಇಲ್ಲಿಯೇ ತಳವೂರಿದ್ದೇವೆ. ಕಲಾವಿದರಿಗೆ ಪ್ರೇಕ್ಷಕರ ಪ್ರೋತ್ಸಾಹವೇ ಶ್ರೀರಕ್ಷೆ" ಎಂದು ಕಂಪನಿ ಮಾಲೀಕ ಎಲ್.ಬಿ. ಶೇಖ್ ಮಾಸ್ತರ್, ಸಂಚಾಲಕ ಶ್ರೀಧರ ಹೆಗಡೆ ಹೇಳುತ್ತಾರೆ.

ಈ ನಾಟ್ಯಸಂಘದ ಗುಲ್ಬರ್ಗ ಕ್ಯಾಂಪಿನ ದಶಮಾನೋತ್ಸವ ಹಾಗೂ 50 ನಾಟಕಗಳ ಸುವರ್ಣ ಮಹೋತ್ಸವದ 5501ನೇ ಪ್ರದರ್ಶನ ಸಮಾರಂಭ ಇತ್ತೀಚೆಗಷ್ಟೇ ನಡೆದಿದೆ. ಈ ಪ್ರದರ್ಶನದ ಜೊತೆಗೆ ನಾಟಕಕಾರರು, ಕಲಾವಿದರು ಮತ್ತು ಪ್ರೇಕ್ಷಕರನ್ನು ಅಭಿನಂದಿಸುವ ಕಾರ್ಯಕ್ರಮವೂ ನಡೆದದ್ದು ವಿಶೇಷ.

36



ಗುಣವಿದ್ದರೆ ಗಂಡ-ಋಣವಿದ್ದರೆ ಹೆಂಡತಿ ನಾಟಕದ ಒಂದು ದೃಶ್ಯ

# ಹಾಸ್ಯ ಬ್ರಹ್ಮ ಶ್ರೀಧರ ಹೆಗ್ಡೆ

ಯಾವುದೇ ನಾಟಕ ಪ್ರಯೋಗ ಯಶಸ್ವಿಯಾಗಬೇಕಾದರೆ ಅದರ ರಂಗಪ್ರತಿ ಸತ್ವಶಾಲಿ ಆಗಿರಬೇಕು. ನಾಟಕಕಾರ ಸರಿಯಾಗಿ ಬದುಕಿನ ಘಟನೆಗಳನ್ನು ಗ್ರಹಿಸಿ ಅದಕ್ಕೆ ಅನುಗುಣವಾಗಿ ಸನ್ನಿವೇಶಗಳನ್ನು ನಿರ್ಮಾಣ ಮಾಡಿ, ಜೀವನಕ್ಕೆ ಹತ್ತಿರ ಇರುವಂತೆ ಪಾತ್ರ ಪೋಷಣೆಯನ್ನು ನಿರ್ವಹಿಸಿ ನಾಟಕೀಯ ವ್ಯಂಗ್ಯ ಸಾಧಿಸಿ ಕಾವ್ಯಕ್ಕೆ, ಕ್ರಿಯೆಗೆ, ಸ್ಥಳಕ್ಕೆಗಳ ಕಡೆಗೆ ಗಮನ ಕೊಟ್ಟು ಕ್ರಿಯಾತ್ಮಕ ಅಭಿವ್ಯಕ್ತಿಯನ್ನು ಮೂಡಿಸಿದ್ದರೆ ಆಗ ನಾಟಕ ಜಯಭೇರಿ ಹೊಡೆಯುತ್ತದೆ.

ಆದರೆ ಕೇವಲ ನಾಟಕ ರಚನೆ ಕ್ರಿಯಾತ್ಮಕ ಅಭಿವ್ಯಕ್ತಿ ಮೂಡಿಸಿದರೆ ಸಾಲದು ಪಾತ್ರಧಾರಿಯೂ ಪ್ರಬುದ್ಧನಾಗಿರಬೇಕು. ಸಂಭಾಷಣೆಯ ಉಚ್ಚಾರಣೆ ಸ್ಪಷ್ಟವಾಗಿದ್ದು ಪ್ರೇಕ್ಷಕರನ್ನು ಮನ ಮುಟ್ಟುವಂತಿರಬೇಕು ಅಂದಾಗ ಮಾತ್ರ ನಾಟಕ ಯಶಸ್ಸು ಕಾಣುತ್ತದೆ.



ಗುಲಬರ್ಗಾದಲ್ಲಿ ಕ್ಯಾಂಪ್ ಹಾಕಿರುವ ಶ್ರೀ ಕುಮಾರ ಸ್ವಾಮಿ ನಾಟ್ಯ ಸಂಘ ಹಾವನಗಲ್ಲ ಸುಮಾರು ಹದಿನೇಳು ತಿಂಗಳುಗಳಿಂದ ನಾಟಕಗಳನ್ನು ಪ್ರಯೋಗಿಸುತ್ತಿದ್ದು ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಟಿ.ವಿ., ಸಿನೇಮಾಗಳಿಂದಾಗಿ ನಾಟಕ ಕಂಪನಿಗಳೇ ಅಪರೂಪವಾಗಿರುವ ಈ ದಿನಗಳಲ್ಲಿ ಕೆಲವೊಂದು ಬೆರಳೆಣಿಕೆಯ ನಾಟ್ಯ ಕಂಪನಿಗಳು ಪ್ರದರ್ಶನ ನೀಡುತ್ತ ಕಲಾವಿದರ ಬದುಕಿಗೆ ಆಶ್ರಯ ನೀಡುತ್ತಿವೆ.

ಶ್ರೀ ಕುಮಾರ ಸ್ವಾಮಿ ನಾಟ್ಯ ಸಂಘದವರು ಹತ್ತಾರು ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸುತ್ತಿದ್ದಾರೆ. ಯಶಸ್ಸಿಗೆ ಕಂಪನಿಯ ಸಂಚಾಲಕ ಶ್ರೀಧರ ಹೆಗ್ಡೆಯವರ ಹಾಸ್ಯ ಪಾತ್ರಗಳೇ ಮುಖ್ಯ ಕಾರಣವಾಗಿವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಅವರು ಹೇಳುವ ಸಂಭಾಷಣೆ ರೀತಿ ಮತ್ತು ನಟನೆಯಿಂದಾಗಿ ಹಾಸ್ಯ ಉಕ್ಕಿಸುವಲ್ಲಿ ಪರಿಣತರಾಗಿದ್ದಾರೆ. ಅಂತೆಯೇ ಅವರು ಅಭಿನಯಿಸಿದ ಎಲ್ಲಾ ಹಾಸ್ಯ ಪಾತ್ರಗಳು ತನ್ನದೇ ಆದ ವೈಶಿಷ್ಟ್ಯದಿಂದ, ಅಚ್ಚುಕಟ್ಟುತನದಿಂದ ಪ್ರೇಕ್ಷಕರ ಮೆಚ್ಚುಗೆ ಪಡೆದಿದೆ.

'ಭೂಮಿ ತೂಕದ ಹೆಣ್ಣು' 'ಕಿವುಡ ಮಾಡಿದ ಕಿತಾಪತಿ' ಯಾವುದೇ ನಾಟಕವಲ್ಲಾಗಲಿ ಹೆಗ್ಡೆಯವರು ತಮ್ಮ ದೈವದತ್ತವಾದ ವಿಶಿಷ್ಟ ಶೈಲಿಯಲ್ಲಿ ಭಾಷೆಯನ್ನು ಬಳಕೆ ಮಾಡಿಕೊಂಡಿದ್ದಾರಲ್ಲದೆ ಆ ಮುಖಾಂತರ ಪ್ರೇಕ್ಷಕರನ್ನು ನಗಿಸಬಲ್ಲರು.

ತಮ್ಮ ಸಹ ಕಲಾವಿದರೊಂದಿಗೆ ಸೌಜನ್ಯದಿಂದ ನಡೆದುಕೊಳ್ಳುವ ಹೆಗ್ಡೆಯವರು ಕಂಪನಿಯ ಸಂಚಾಲಕರಾಗಿದ್ದಾರೆ. ಯಾರೇ ಆಗಲಿ ಹೆಗ್ಡೆಯವರನ್ನು ಮಾತಾಡಿಸಿದರೆ ಸಾಕು ಆತ್ಮೀಯತೆಯಿಂದ ಮಾತಾಡಿ ಅವರ ಮನಸ್ಸನ್ನು ಗೆಲ್ಲುವ ಕಲೆ ಹೊಂದಿದ್ದಾರೆ. ಅಂತೆಯೇ ಗುಲಬರ್ಗಾಕ್ಕೆ ಬಂದ ಕೆಲವೇ ತಿಂಗಳುಗಳಲ್ಲಿ ಅನೇಕ ಮಿತ್ರರನ್ನು, ಅಭಿಮಾನಿಗಳನ್ನು ಗಳಿಸಿದ್ದಾರೆ.

ಶ್ರೀಧರ ಹೆಗ್ಡೆಯವರ ಕಲೆಯನ್ನು ಗುರುತಿಸಿ ನಾಟಕ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಅನೇಕ ಸಂಘ-ಸಂಸ್ಥೆಗಳು ಸನ್ಮಾನಿಸಿವೆ. ಕಲಾ ಪ್ರತಿಭೆ ಎನ್ನುವದು. ದೈವದತ್ತವಾಗಿ ಬಂದಿದ್ದಾಗಿರುತ್ತದೆ. ವೃತ್ತಿ ರಂಗದ ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತಿರುವ ಶ್ರೀಧರ ಹೆಗ್ಡೆಯವರಂತಹವರಿಂದಲೇ ನಾಟಕಗಳು ಮರೆತು ಹೋಗುತ್ತಿರುವ ಇಂದಿನ ದಿನ ಮಾನಗಳಲ್ಲಿ ಜೀವಂತವಾಗಿದೆ.

-ಸಜ್ಜನ್

ಪ್ರಜಾವಾಣಿ, ಭಾನುವಾರ, 28ನೇ ಜನವರಿ 2007

# ದಾಖಲೆವೀರರಿಗೆ ಬೆಳ್ಳಿ ಕಿರೀಟ

ವರ್ಷಗಟ್ಟಲೆ ಒಂದೇ ಊರಿನಲ್ಲಿ ನಾಟಕ ಪ್ರದರ್ಶಿಸುತ್ತ ಕ್ಯಾಂಪ್ ಮಾಡುವುದು ನಾಟಕ ಕಂಪನಿಗಳಿಗೆ ಹೊಸ ಸಂಗತಿಯಾಗಿರಲಿಲ್ಲ. ಆದರೆ ಟಿವಿ ಧಾರಾವಾಹಿಯ ಈ ದಿನಗಳಲ್ಲೂ ಗುಲ್ಬರ್ಗ ಮಹಾನಗರದಲ್ಲಿ ನಾಟಕ ಕಂಪನಿಯೊಂದು ಸತತ ಮೂರೂವರೆ ವರ್ಷ ಕ್ಯಾಂಪ್ ಮಾಡಿ ಇನ್ನೂ ಮುಂದುವರಿದಿರುವುದು ಗತ ವೈಭವವನ್ನು ಹೊಸ ಪೀಳಿಗೆಗೆ ಎತ್ತಿ ಸಾರಿದಂತಾಗಿದೆ.

ಶೇಬು ಮಾಸ್ತರ್ ಮತ್ತು ಶ್ರೀಧರ ಹೆಗಡೆ ಜಂಟಿ ಒಡೆತನದ 'ಶ್ರೀ ಗುರು ಕುಮಾರೇಶ್ವರ ನಾಟ್ಯ ಸಂಘ ಹಾನಗಲ್' ಈ ಸಾಧನೆಮಾಡಿದೆ. ಗುಲ್ಬರ್ಗ ನಗರದ ಹೃದಯ ಭಾಗದಲ್ಲಿ 2003ರ ಆಗಸ್ಟ್ ತಿಂಗಳಲ್ಲಿ 'ಕಿವುಡ ಮಾಡಿದ ಕಿತಾಪತಿ' ನಾಟಕ ಪ್ರದರ್ಶನದೊಂದಿಗೆ ತನ್ನ ಕ್ಯಾಂಪ್ ಆರಂಭಿಸಿದ ಈ ನಾಟಕ ಕಂಪನಿ ಕ್ರಮೇಣ ರಂಗ ರಸಿಕರ ಮನಗೆದ್ದು ಜನಪ್ರಿಯವಾಗುತ್ತ ನಡೆಯಿತು. ಮಧ್ಯಾಹ್ನ 3ಕ್ಕೆ ಮ್ಯಾಟ್ನಿ ಮತ್ತು ಸಂಜೆ 6ಕ್ಕೆ 2ನೇ ಪ್ರದರ್ಶನ ಎಂಬ ಹೊಸ ವೇಳಾ ಪಟ್ಟಿಯ ನಿರ್ಧಾರಕ್ಕೆ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿತು.



ಬಾಬಾಸಾಬ ಶೇ.ಪಿ



ಶ್ರೀಧರ ಹೆಗಡೆ

ಮಹಿಳಾ ಪ್ರೇಕ್ಷಕರ ಸಂಖ್ಯೆಯೂ ಹೆಚ್ಚಿತು. ಮಧ್ಯಮ ವರ್ಗದ ಕುಟುಂಬಗಳ ಎಲ್ಲ ವಯೋಮಾನದ ಪ್ರೇಕ್ಷಕರನ್ನು ನೊಳಗೆ ನಿರ್ಮಿಸಿದ ಸಾಂಸ್ಕೃತಿಕ ವ್ಯವಸ್ಥೆಗಳು ಎಲ್ಲ ವರ್ಗದ ಪ್ರೇಕ್ಷಕರಿಗೆ ಹಿಡಿಸುತ್ತಿದ್ದವು. ಆಗಾಗ ಶಾಲೆ-ಕಾಲೇಜು, ಸಂಘ- ಸಂಸ್ಥೆ, ಮಹಿಳಾ ಮಂಡಳ ಸದಸ್ಯರುಗಳಿಗಾಗಿ ನಾಟಕ ಪ್ರದರ್ಶನದ ವ್ಯವಸ್ಥೆ ಇರುತ್ತಿತ್ತು. ಹತ್ತರಿಂದ ಹದಿನೈದು ಸಿದ್ಧ ನಾಟಕಗಳಿದ್ದಾಗ ಒಂದು ನಾಟಕದ 50... 100 ಪ್ರದರ್ಶನಗಳ ನಂತರ ಮತ್ತೊಂದು ಆರಂಭವಾಗುತ್ತಿತ್ತು.

ನೋಡ ನೋಡುತ್ತ ವರ್ಷವಾಯಿತು. 2ವರ್ಷ ಸಂದಿತು. ಜನಪ್ರಿಯತೆ ಹೆಚ್ಚುತ್ತ ಹೋಗಿ ದಾಖಲೆ ಮಾಡಲಾಯಿತು. ಗುಲ್ಬರ್ಗದ ವೃತ್ತಿ ರಂಗಪ್ರಿಯರು ಇದನ್ನು ಸ್ಮರಣೀಯವಾಗಿಸಬೇಕೆಂದು ಸನ್ಮಾನಕ್ಕೆ ಸಿದ್ಧತೆ ಮಾಡಿಕೊಂಡರು. ಖ್ಯಾತ ಕಲಾವಿದೆ, ಎಂಎಲ್‌ಸಿ ಉಮಾಶ್ರೀಯವರ ಒತ್ತಾಸೆಯೂ ಇತ್ತು. ಗದಗ ಹಿರೇಮಠದ ಸಂಪಾದಕತ್ವದಲ್ಲಿ 'ರಂಗಾಂತರಂಗ' ಎಂಬ ಸ್ಮರಣ ಸಂಚಿಕೆಯೂ ಸಿದ್ಧವಾಯಿತು. ಗುಲ್ಬರ್ಗದವರೇ ಮುಖ್ಯಮಂತ್ರಿಯೂ ಆಗಿದ್ದರಿಂದ ಸಿದ್ಧತೆಗಳು ಭರದಿಂದ ಸಾಗಿದ್ದವು. ಆದರೆ [illegible] ರಿಯಲ್ಲಿ ನಾಟಕ ಪ್ರದರ್ಶನಕ್ಕೆ ಸಮಯ ಸಿಗದೇ ಹೋಯಿತು!

ಕ್ಯಾಂಪ್ 3ನೇ ವರ್ಷ ಪೂರೈಸಿ 4ನೇ ವರ್ಷಕ್ಕೆ ಕಾಲಿಟ್ಟಿತು. ಜೊತೆಯಾಗಿಯೇ ಸಮಾರಂಭ ಆಗಲೇಬೇಕೆಂದು [illegible] ಹೊತ್ತು ಎಂಎಲ್‌ಸಿ ಅಲ್ಲಮಪ್ರಭುವರು ಭಾವಿ- ಮಾಜಿ ಮುಖ್ಯಮಂತ್ರಿಗಳನ್ನು ಸಮಾರಂಭಕ್ಕೆ ಕರೆತಂದರು. ಆ ದಿನ ಜನವರಿ 4. ಅಲ್ಲಮಪ್ರಭು ಪಾಟೀಲ ಅಧ್ಯಕ್ಷತೆಯ ಅಭಿನಂದನಾ ಸಮಿತಿ ಗುಲ್ಬರ್ಗ ಗುತ್ತಿಗೆದಾರರ ಸಂಘದ ಸಹಕಾರದೊಂದಿಗೆ ಇಡೀ ಒಂದು ದಿನದ ಅದ್ದೂರಿ ಸಮಾರಂಭ, ವಿಚಾರ ಸಂಕಿರಣ, ರಂಗಗೀತೆಗಳ ಗಾಯನ ಮುಂತಾದ ಕಾರ್ಯಕ್ರಮ ಏರ್ಪಡಿಸಿತು. ನಾಟಕ ಕಂಪನಿಯ ಮಾಲೀಕರು ಹಾಗೂ ಪ್ರಖ್ಯಾತ ಕಲಾವಿದರೂ ಆದ ಶ್ರೀಧರ ಹೆಗಡೆ ಹಾಗೂ ಶೇಬು ಮಾಸ್ತರ್ ಅವರಿಗೆ ಬೆಳ್ಳಿಯ ಕಿರೀಟ ತೊಡಿಸಿ ಸನ್ಮಾನಿಸಲಾಯಿತು.

3ವರ್ಷ ಆರು 5ನೇ ತಿಂಗಳು ಮುಗಿಸುವ ಜ.4ಕ್ಕೆ ಸುಮಾರು ಸತತ 2420 ನಾಟಕಗಳನ್ನು ಪ್ರದರ್ಶಿಸಿತ್ತು. 35 ವೈವಿಧ್ಯಮಯ ನಾಟಕಗಳು ನೂರಾರು ಪ್ರದರ್ಶನ ಕಂಡಿದ್ದವು. 'ಬಸ್ ಕಂಡಕ್ಟರ್', 'ನಾಕ್ಕಿಗೆ ಬಂದ ಸಾವಿತ್ರಿ', 'ಚಿಕ್ಕಸೊಸೆ'- ಮುಂತಾದ ನಾಟಕಗಳು ಹಲವು ನೂರು ಪ್ರದರ್ಶನ ನೀಡಿದ್ದವು. 'ಕಿವುಡ ಮಾಡಿದ ಕಿತಾಪತಿ'ಯಂತೂ 5ನೇ ಮತ್ತು ಪ್ರದರ್ಶನ ಮುಗಿಸಿತ್ತು. ಅಂತೂ ವೃತ್ತಿ ರಂಗಭೂಮಿಯ ಇತಿಹಾಸದಲ್ಲಿ ಜನವರಿ 4 ಒಂದು ಪ್ರಮುಖ ಮೈಲಿಗಲ್ಲಾಗಿ ದಾಖಲಾಯಿತು.

ಹಾಗೆ ನೋಡಿದರೆ ಗುಲ್ಬರ್ಗ ನಗರಕ್ಕೆ ಇಂತಹ ದಾಖಲೆಗಳು ಹೊಸತಲ್ಲ. 70- 80ರ ದಶಕಗಳಲ್ಲಿ ಬಿ.ಆರ್., ಅರಿಷಿಣಗೋಡಿಯವರ ನಾಟಕ ಕಂಪನಿಗಳು ವರ್ಷಗಟ್ಟಲೆ ಕ್ಯಾಂಪ್ ಮಾಡಿದ ದಾಖಲೆ ನಿರ್ಮಿಸಿವೆ. ಆದರೆ ಈ ದಿನಗಳಲ್ಲಿ ಅಪರೂಪದ ಘಟನೆ. ಇಷ್ಟರೂ ದುಡ್ಡು ಹಾಕಿ ಲಾಭ ತೆಗೆಯುವ ಮಾಲೀಕರಲ್ಲ. ಅಪ್ಪಟ ಕಲಾವಿದರು. ಸಂಗೀತದ ಮಾಸ್ತರ್ ಅಲ್ಲದಿದ್ದರೂ ಹಾಡು ಬಾಬಾಸಾಬ ಶೇಬು ಅವರಿಗೆ 'ಶೇಬು ಮಾಸ್ತರ್' ಎಂಬ ಅಭಿದಾನವಿತ್ತು... ಸರಳವಾಗಿ ವರ್ತಿಸುವ ಗುಣದಿಂದಾಗಿ 'ಸಿ ಬಯ್ಯಾ' ಎಂಬ ಬಿರುದಾವಳಿಯೂ... ಆ ವರ್ಗಕ್ಕೆ ಇವರೆ. ಇನ್ನು ಶ್ರೀಧರ ಹೆಗಡೆ ಅಪ್ಪಟ ನಟ. ಹಾಸ್ಯ ನಟರ ಪೈಕಿ ಎತ್ತರದ ಸ್ಥಾನದಲ್ಲಿರುವವರು. ಅಂತೆಯೇ ಪ್ರೇಕ್ಷಕರ ನಾಡಿ ಮಿಡಿತ ಚೆನ್ನಾಗಿ ಗೊತ್ತು.

ಸಂಗಮೇಶ, ಬಾಬಣ್ಣ, ವೃಷಭರು, ಕಾಮದೇವ ನೂಲಿ, ಶೇವಡಿ ಬಸವರಾಜ, ರಾಜಮ್ಮ ಹೆಗಡೆ ಅವರಂತಹ ಹಿರಿಯ ಕಲಾವಿದರ ಜತೆ ಮಲ್ಲೇಶಿ ಕಲ್ಲೂರು, ಖಾಜಾ ನಾವಡ ಅಮೀನಗಡ, ದಯಾನಂದ ಬೀಳಗಿ, ಹನುಮಂತಪ್ಪ ಬೆಳಕರಾಗಿ, ಜ್ಯೋತಿ ಮಂಗಳೂರು, ರತ್ನಾಬಾಯಿ ಬೀಳಗಿ, ಭಾರತಿ ಸತ್ತರಿ, ಮುಂತಾದ ಯುವ ಕಲಾವಿದರ ಸಾಮೂಹಿಕ ನಾಟಕಗಳ ಯಶಸ್ಸಿಗೆ ಕಾರಣರಾಗಿದ್ದಾರೆ. ಅತಿಥಿ ಕಲಾವಿದರಾಗಿ ಶ್ರೀದೇವಿ ಶಿರಹಟ್ಟಿ, ಅನ್ನಪೂರ್ಣಾ ಸಾಗರ, ಗಿರಿ ದಾವಣಗೆರೆ, ಆಯಿರಾದರ ಇವರೆಲ್ಲ ಆಗಾಗ್ಗೆ ನಾಟಕಗಳನ್ನು ಕಳೆಗಟ್ಟಿಸಿದ್ದಾರೆ. ಕಳಕಪ್ಪ, ಹಡಪದ, ಬಸವರಾಜ ಸೊನ್ನದ, ಅಶೋಕ ಸಿಂಗೆ, ಅಶೋಕ ಹಿರೇಮಠ ರಂಗಗೀತೆ, ಸಂಗೀತಗಳ ಮಿಮಿಕ್ರಿಯ ಛಾಪು ಮೂಡಿಸಿದ್ದಾರೆ.

ವೃತ್ತಿ ರಂಗಭೂಮಿಯ ಭವಿಷ್ಯಕ್ಕೆ ಎದುರಾಗುವ ಎರಡು ಸವಾಲುಗಳನ್ನು ಈ ಐತಿಹಾಸಿಕ ಸಮಾರಂಭ ಎತ್ತಿ ತೋರಿಸಿದೆ. ಮುಖ್ಯ ಅತಿಥಿಯಾಗಿದ್ದ ಹಿರಿಯ ನಟ- ನಾಟಕಕಾರ ಬಿ.ಆರ್. ಅರಿಷಿಣಗೋಡಿ ಒಂದು ಗಂಭೀರ ಸಮಸ್ಯೆಯನ್ನು ಪ್ರಸ್ತಾಪಿಸಿದರು. ಗುಲ್ಬರ್ಗ ನಗರದ ಕೇಂದ್ರ ಭಾಗದಲ್ಲಿ ಕಾಂಪ್ಲೆಕ್ಸ್ ಕಟ್ಟಲು ಕಡಿಮೆ ಬಾಡಿಗೆಗೆ ತಮ್ಮ ಜಾಗೆಯನ್ನು ಬಿಟ್ಟು ಕೊಟ್ಟರಾಗುವುದು. ನಾಳೆ ಅವರ ಈ ಉದಾರ ಕೊಡುಗೆ ಇಲ್ಲದಿದ್ದರೆ ಏನಾದೀತು? ರಾಜ್ಯದ ಬಹುತೇಕ ಊರುಗಳಲ್ಲಿ ಥಿಯೇಟರ್ ಹಾಕಿಕೊಳ್ಳಲು ವೃತ್ತಿ ನಾಟಕ ಕಂಪನಿಗಳಿಗೆ ಜಾಗ ಸಿಗುವುದಿಲ್ಲ. ಸರ್ಕಾರವೇ ಪ್ರಮುಖ ನಗರಗಳಲ್ಲಿ ಜಾಗ ನೀಡಿ ಸಹಕರಿಸಬೇಕು. ಇದು ಸರ್ಕಾರದ ಕರ್ತವ್ಯ.

ಮೂರೂವರೆ ವರ್ಷಗಳಲ್ಲಿ ಪ್ರದರ್ಶನಗೊಂಡ 35 ವೈವಿಧ್ಯ ನಾಟಕಗಳ ಪೈಕಿ 8-10 ನಾಟಕಗಳು ಮತ್ತೆ ಮತ್ತೆ ಪ್ರದರ್ಶನ ಕಂಡವು. ಶೇಬು ಮಾಸ್ತರರ ಕ್ಯಾಂಪ್ ಮುಂದುವರಿಸುವ ಯೋಜನೆ ಬಂದಿದ್ದರೆ ಅದಕ್ಕೆ ಹೊಸ ನಾಟಕಗಳ ಕೊರತೆಯೂ ಒಂದು ಕಾರಣ. ಮಾಲೀಕರು ನಾಟಕಕಾರರು ಇತ್ತ ಗಮನ ಹರಿಸಬೇಕು.

□ ಗುಡಿಹಳ್ಳಿ ನಾಗರಾಜ

ವಿಜಯ

30 ಏಪ್ರಿಲ್ 2004

## ಅಂತರಂಗ

# 'ಗುಕ್ಕು' ಮಾತಿನ ಶ್ರೀಧರ ಹೆಗಡೆ



ರಂಗಭೂಮಿಯ ದೀರ್ಘ ಸೇವೆಯಲ್ಲಿ ಹೆಗಡೆಯವರು ಎಲ್ಲ ಮಜಲುಗಳನ್ನು ಕಂಡಿದ್ದಾರೆ. ಸುಖ-ದುಃಖ, ನೋವು-ನಲಿವುಗಳನ್ನು ಸಮನಾಗಿ ಸ್ವೀಕರಿಸಿದ್ದಾರೆ. ಒಮ್ಮೆ ಕಾರಿನಲ್ಲಿ ಓಡಾಡಿದರೆ ಮಗದೊಮ್ಮೆ ಬಸ್ ಚಾರ್ಜ್‌ಗೆ ಹಣವಿಲ್ಲದೆ ತಡವರಿಸಿದ್ದಾರೆ.

# 'ಕೀಳು ಅಭಿರುಚಿಯ ಸಿನೆಮಾಗಳಿಂದ ವೃತ್ತಿರಂಗಭೂಮಿಗೆ ಹೊಡೆತ'

## ಶ್ರೀಧರ ಹೆಗಡೆ ತರಾಟೆಗೆ

ಕಲಬುರ್ಗಿ, 27- ದ್ವಂದ್ವಾರ್ಥ ಸಂಭಾಷಣೆ, ಅಶ್ಲೀಲ ನಟನೆ, ಸನ್ನಿವೇಶದ ಕೀಳು ಅಭಿರುಚಿಯ ಸಿನೆಮಾಗಳಿಂದ ವೃತ್ತಿರಂಗಭೂಮಿ ಬೆಳವಣಿಗೆಗೆ ದೊಡ್ಡ ಹೊಡೆತ ಬಿದ್ದಿದೆ ಎಂದು ಶ್ರೀಗುರು ಹಾನಗಲ್ಲ ಕುಮಾರೇಶ್ವರ ನಾಟ್ಯ ಸಂಘದ ವ್ಯವಸ್ಥಾಪಕ, ಕಲಾವಿದ ಶ್ರೀಧರ ಹೆಗಡೆ ತರಾಟೆಗೆ ತೆಗೆದುಕೊಂಡರು.

ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಕರ್ನಾಟಕ ನಾಟಕ ಅಕಾಡೆಮಿ ನಗರದ ನೂತನ ವಿದ್ಯಾಲಯದಲ್ಲಿ ಹಮ್ಮಿಕೊಂಡ 'ಸಂವಾದ' ಕಾರ್ಯಕ್ರಮದ ಮುಖ್ಯ ಅತಿಥಿ ಸ್ಥಾನದಿಂದ 'ವೃತ್ತಿ ನಾಟಕ ಕಂಪನಿಗಳ ಸ್ಥಿತಿಗತಿ' ವಿಷಯವಾಗಿ ಅವರು ಮಾತನಾಡುತ್ತಿದ್ದರು.

ಹಾವು-ಹಗ್ಗ ನುಗ್ಗೆಕಾಯಿ ಇತ್ಯಾದಿ ಅಶ್ಲೀಲ ಮತ್ತು ಅಸಹ್ಯಕರ ಸಂಭಾಷಣೆಯ ಸನ್ನಿವೇಶ ಚಿತ್ರಿಸಿ, ಪ್ರೇಕ್ಷಕರನ್ನು ಕೀಳು ಅಭಿರುಚಿಯತ್ತ ದೂಡುವ ಪ್ರವೃತ್ತಿ ಇತ್ತೀಚಿನ ಸಿನೆಮಾಗಳಲ್ಲಿ ಹೆಚ್ಚುತ್ತಿದೆ. ಪರಿಣಾಮವಾಗಿ, ವೃತ್ತಿರಂಗಭೂಮಿಯಲ್ಲಿಯೂ ಈ ಸನ್ನಿವೇಶಗಳ ಬಲವಂತದ ಪ್ರದರ್ಶನ ನೀಡುವ ಅನಿವಾರ್ಯತೆ ಸೃಷ್ಟಿಸಿದೆ ಎಂದು ದೂರಿದರು.

ವೃತ್ತಿರಂಗಭೂಮಿಯ ಉದ್ದೇಶ ಕೇವಲ ಮನರಂಜನೆ ನೀಡುವುದಲ್ಲ, ಸಮಾಜದ ಲೋಪದೋಷಗಳ ತಿದ್ದುವ ದಿಗೆ ಬದ್ಧವಾಗಿದೆ. ಇದರಿಂದ, ಸಿನೆಮಾ ಮತ್ತು ಕಿರುತೆರೆಯ ಧಾರಾವಾಹಿಗಳೂ ಹೊರತಲ್ಲ ಎಂದು ಹೇಳಿದರು.

ಕಲೆ ಅರಿಯದ ವ್ಯಕ್ತಿಗಳಿಂದ ಸಿನೆಮಾ ಇಲ್ಲವೇ ನಾಟಕ ಕಂಪನಿಗಳು ನಿರ್ದೇಶಿತವಾದರೆ ಹಣ ಮಾಡುವುದಷ್ಟೇ ಅವರ ಉದ್ದೇಶ. ಕಲೆ ಬೆಳೆಸುವುದಕ್ಕಲ್ಲ. ಹೀಗಾಗಿ ಕಲೆ ಸಾಯುತ್ತಿದೆ. ವೃತ್ತಿ ರಂಗಭೂಮಿಯಲ್ಲಿ ಕಲಾಕಾರರಿಗೆ ಜೀವನ ಭದ್ರತೆ ಇಲ್ಲ, ಕಲಾಕಾರರು ಬರುತ್ತಿಲ್ಲ. ಈ ಪರಿಸ್ಥಿತಿಯಲ್ಲಿ ವೃತ್ತಿರಂಗಭೂಮಿಯಿದ್ದು, ಈ ಕಲೆಯ ಭವಿಷ್ಯ ಮಸುಕಾಗಿದೆ ಎಂದು ವಿಷಾದಿಸಿದರು.


**ರಂಗಮಂದಿರಗಳ ಅವಶ್ಯಕತೆ:**

ಸಮಾರಂಭವನ್ನು ಉದ್ಘಾಟಿಸಿದ ಖ್ಯಾತ ರಂಗಕರ್ಮಿ ಪ್ರೊ. ಪ್ರಭಾಕರ ಸಾತಖೇಡ, 'ರಂಗಭೂಮಿ'ಯ ಪರಿಕಲ್ಪನೆ 'ನಾಟಕ'ಕ್ಕಿಂತ ವಿಸ್ತಾರ ಮತ್ತು ಚಲನಶೀಲವಾಗಿದೆ. ರಂಗಭೂಮಿಯ ಸಮಗ್ರ ಅಭಿವೃದ್ಧಿಗಾಗಿ ಜಿಲ್ಲಾಮಟ್ಟದಲ್ಲಿ ಸುಸಜ್ಜಿತ ರಂಗಮಂದಿರ, ತಾಲೂಕು ಮಟ್ಟದಲ್ಲಿ ಮಿನಿ ರಂಗಮಂದಿರ ಮತ್ತು ಹೋಬಳಿಯಲ್ಲಿ ಬಯಲು ರಂಗಮಂದಿರ ನಿರ್ಮಾಣ ಆವಶ್ಯಕತೆ ಇದೆ. ಮಾಜಿ ಮುಖ್ಯಮಂತ್ರಿ ಗುಂಡುರಾವ್‌ರ ಸರ್ಕಾರದಲ್ಲಿ ಈ ಪ್ರಸ್ತಾವನೆ ಇದ್ದರೂ ಕಾರಣಾಂತರದಿಂದ ಜಾರಿಯಾಗಲಿಲ್ಲ ಎಂದು ವಿಷಾದಿಸಿದರು.

ರಂಗಭೂಮಿ ಇಂದು ತೆರಿಗೆ, ಕಲಾಕಾರರ ವಿಮೆ, ಮಳೆಗಾಲದ ತೊಂದರೆ ಇತ್ಯಾದಿ ಸಂಕಷ್ಟಗಳನ್ನು ಎದುರಿಸುತ್ತಿದ್ದು, ಕಲೆ ಬೆಳೆಸಲು ರಕ್ಷಣಾತ್ಮಕವಾಗಿ ಸಿದ್ಧತೆ ಕೈಗೊಳ್ಳಬೇಕಿದೆ ಎಂದರು.

ಸಮುದಾಯ ಸಂಘಟನೆಯ ಶ್ರೀಶೈಲ ಘೂಳಿ ಅವರು 'ಹವ್ಯಾಸಿ ರಂಗಭೂಮಿ' ಕುರಿತು ಮಾತನಾಡಿ, ಹೆಚ್ಚು ಖರ್ಚು-ವೆಚ್ಚಗಳಿಲ್ಲದೆ ಕಡಿಮೆ ಅವಧಿಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಮನ ತಟ್ಟುವಲ್ಲಿ ಬೀದಿ ನಾಟಕಗಳು ಸಮರ್ಥವಾಗಿದ್ದು, ಇಂದು ಸಂಘಟನೆ ಮತ್ತು ಕಲಾಕಾರರ ಕೊರತೆಯಿಂದ ನರಳುತ್ತಿದೆ. ಆದರೂ, ಹವ್ಯಾಸಿ ರಂಗಭೂಮಿ ತನ್ನದೇ ಆದ ಗತಿಯಲ್ಲಿ ಪ್ರಭಾವ ಬೀರುತ್ತಿದ್ದು, ಪ್ರೋತ್ಸಾಹದ ಅಗತ್ಯವಿದೆ ಎಂದರು.

ನಾಟಕ ಅಕಾಡೆಮಿ ಸದಸ್ಯ ಪ್ರೊ.ಹೇಮಂತ ಕೊಲ್ಹಾಪುರೆ, ವಿಶ್ವ ರಂಗಭೂಮಿ ದಿನಾಚರಣೆಯಲ್ಲಿ ಇಂಡಿಯನ್ ಥಿಯೇಟರ್ ಇನ್‌ಸ್ಟಿಟ್ಯೂಟ್ ಪಾತ್ರವನ್ನು ವಿವರಿಸಿ, ಖ್ಯಾತ ನಾಟಕಕಾರ ಮೆಕ್ಸಿಕೋದ ವಿಕ್ಟರ್ ಹ್ಯೂಗೋ ರಸ್ಕಿನ್ ಬಾಂಡ್ ಅವರು ಪ್ರಸ್ತುತ ವರ್ಷ ವಿಶ್ವ ರಂಗಭೂಮಿ ಕುರಿತು ನೀಡಿರುವ ಸಂದೇಶವನ್ನು ತಮ್ಮ ಪ್ರಾಸ್ತಾವಿಕ ಮಾತುಗಳಲ್ಲಿ ಪ್ರಸ್ತುತಿಸಿದರು. ಮಹೇಶಕುಮಾರ ಬಡಿಗೇರ ಪ್ರಾರ್ಥಿಸಿದರು. ಪ್ರಹ್ಲಾದ ಕಡೆಚೂರ ನಿರೂಪಿಸಿದರು.



(ಶ್ರೀಧರ ಹೆಗಡೆಯವರ ಹಸ್ತಪ್ರತಿ)



ಕರ್ನಾಟಕ ನಾಟಕ ಅಕಾಡೆಮಿ

ಬೆಂಗಳೂರು


ಶ್ರೀ/ಶ್ರೀಮತಿ ........................ ಇವರು

ದಿನಾಂಕ 20-12-1999 ರಿಂದ 26-12-1999 ರವರೆಗೆ ಏರ್ಪಡಿಸಿದ

........................ ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ.

ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಬೆಂಗಳೂರು

ಸಿ. ಕೆ. ಕೃಷ್ಣಸ್ವಾಮಿ
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ
ಬೆಂಗಳೂರು



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಹಾಗೂ

ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಇವುಗಳ ಸಂಯುಕ್ತ ಆಶ್ರಯದಲ್ಲಿ ಜರುಗಿದ ವಿಚಾರ ಸಂಕಿರಣ ಸಂದರ್ಭದಲ್ಲಿ ಗೌರವಿಸಿ ಸಲ್ಲಿಸಿದ


# ಗೌರವ ಪತ್ರ

ಶ್ರೀ / ಶ್ರೀಮತಿ ಶ್ರೀಧರ ಹೆಗಡೆ ಇವರ

ದೀರ್ಘ ಜಾನಪದ ರಂಗಭೂಮಿ / ವೃತ್ತಿ ರಂಗಭೂಮಿ / ಹವ್ಯಾಸಿ ರಂಗಭೂಮಿ ಸೇವೆ ಪರಿಗಣಿಸಿ

ದಿನಾಂಕ 31 ಡಿಸೆಂಬರ್ 2005 ರಂದು ಸನ್ಮಾನಿಸಿ ಅರ್ಪಿಸಿದ ಗೌರವ ಪತ್ರ

| | | |
|---|---|---|
| ಎಂ.ಮುನಿರಾಜು | ವ್ಹಿ.ಜಿ.ಪೂಜಾರ | ಕೆರೆಮನೆ ಶಂಭು ಹೆಗಡೆ |
| ರಿಜಿಸ್ಟ್ರಾರ್ | ಅಧ್ಯಕ್ಷರು | ಅಧ್ಯಕ್ಷರು |
| ಜಾನಪದ ಮತ್ತು ಯಕ್ಷಗಾನ ಅಕಾಡೆಮಿ | ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ | ಜಾನಪದ ಮತ್ತು ಯಕ್ಷಗಾನ ಅಕಾಡೆಮಿ |
| ಬೆಂಗಳೂರು | ಗುಲಬರ್ಗಾ | ಬೆಂಗಳೂರು |



॥ ಸಿರಿಗನ್ನಡಂ ಗೆಲ್ಗೆ ॥

# ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಭವನ, ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತ, ಕಲಬುರ್ಗಿ - ೫೮೫ ೧೦೩

## ಪ್ರಮಾಣ ಪತ್ರ

೨೦೧೬ರ ಜೂನ್ ೧೫ ಮತ್ತು ೧೬ ರಂದು ಜರುಗಿದ ಕಲಬುರ್ಗಿ ಜಿಲ್ಲಾ ೧೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀಮತಿ/ಶ್ರೀ...ಶ್ರೀಧರ್...ಹೆಗಡೆ.....................................ಇವರು ಗೋಷ್ಠಿ/ಕವಿಗೋಷ್ಠಿ/ಸಂಪನ್ಮೂಲ ವ್ಯಕ್ತಿ/ಕಲಾವಿದ/ಸನ್ಮಾನಿತರಾಗಿ ಭಾಗವಹಿಸಿ ಯಶಸ್ವಿಗೊಳಿಸಿದ್ದಕ್ಕೆ ಈ ಪ್ರಮಾಣ ಪತ್ರ ನೀಡಿ ಗೌರವಿಸಲಾಗಿದೆ.

| | | |
|---|---|---|
| **ಶ್ರೀ [illegible]** | **ಶ್ರೀ ಎಲ್. ಬಿ. ಕೆ. ಆಲ್ದಾಳ** | **ಶ್ರೀ ಮಹಿಪಾಲರೆಡ್ಡಿ ಮುನ್ನೂರು** |
| ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಅಧ್ಯಕ್ಷರು ಸ್ವಾಗತ ಸಮಿತಿ | ಸಮ್ಮೇಳನಾಧ್ಯಕ್ಷರು ಜಿಲ್ಲಾ ೧೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ | ಜಿಲ್ಲಾಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ತು ಕಲಬುರ್ಗಿ |



# ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

## "ವೃತ್ತಿ ರಂಗಭೂಮಿ" ನಾಟಕೋತ್ಸವ
ಮತ್ತು
ಚಿಂತನ ಸಂಕಿರಣ
ಬೆಳಗಾವಿ 2003


## ಪ್ರಮಾಣ ಪತ್ರ

ಶ್ರೀ/ಶ್ರೀಮತಿ ಶ್ರೀಧರ ಹೆಗಡೆ

ಇವರು ದಿನಾಂಕ 14-6-2003 ರಿಂದ 16-6-2003ರ ವರೆಗೆ ಬೆಳಗಾವಿಯ ಕೆ.ಬಿ.ಆರ್. ಕನ್ನಡ ಸಂಸ್ಕೃತಿ ಕಲಾ ಕೇಂದ್ರದಲ್ಲಿ ನಡೆದ ವೃತ್ತಿ ರಂಗಭೂಮಿ ನಾಟಕೋತ್ಸವ ಮತ್ತು ಚಿಂತನ ಸಂಕಿರಣ ಬೆಳಗಾವಿ 2003 ದಲ್ಲಿನ "[illegible]" ಎಂಬ ನಾಟಕದಲ್ಲಿ ಭಾಗವಹಿಸಿರುತ್ತಾರೆ.

| | | |
|---|---|---|
| ಆರ್. ಎಸ್. ದಳವಾಯಿ | ಆರ್. ನಾಗೇಶ | ರವಿ ಕೋಟಾರಗಸ್ತಿ |
| ರಜಿಸ್ಟ್ರಾರ್ | ಅಧ್ಯಕ್ಷರು | ಸದಸ್ಯ ಸಂಚಾಲಕರು |
| ಕರ್ನಾಟಕ ನಾಟಕ ಅಕಾಡೆಮಿ. | ಕರ್ನಾಟಕ ನಾಟಕ ಅಕಾಡೆಮಿ. | ಕರ್ನಾಟಕ ನಾಟಕ ಅಕಾಡೆಮಿ. |


ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಬೆಂಗಳೂರು
ಗೌರವ ಪ್ರಶಸ್ತಿ - ೨೦೦೧
ಶ್ರೀ ಶ್ರೀಧರ ಗಣಪತಿ ಹೆಗಡೆ
ಅವರು
ಕನ್ನಡ ರಂಗಭೂಮಿಗೆ ಸಲ್ಲಿಸಿರುವ
ಅನುಪಮ ಸೇವೆಯನ್ನು ಗೌರವಿಸಿ
ಕರ್ನಾಟಕ ನಾಟಕ ಅಕಾಡೆಮಿ
ನೀಡಿದ ಗೌರವ ಪ್ರಶಸ್ತಿ ಫಲಕ



ಕಂದಗಲ್ ಹನುಮಂತರಾಯ ಸ್ಮೃತಿ ನಾಟಕೋತ್ಸವ

ವಿಜಾಪುರ.

ಪ್ರಮಾಣ ಪತ್ರ

ಶ್ರೀಮತಿ/ಶ್ರೀ ಶ್ರೀಧರ ಹೆಗಡೆ ಅವರು

ವಿಜಾಪುರದಲ್ಲಿ ದಿನಾಂಕ 11-1-1995 ರಿಂದ 14-1-1995 ರ ವರೆಗೆ ಜರುಗಿದ ಕಂದಗಲ್ ಹನುಮಂತರಾಯ ಸ್ಮೃತಿ ನಾಟಕೋತ್ಸವದಲ್ಲಿ ಪ್ರದರ್ಶನಗೊಂಡ ಚಿತ್ರಾಂಗದಾ ನಾಟಕದಲ್ಲಿ ಯಶಸ್ವಿಯಾಗಿ ಭಾಗವಹಿಸಿದರು.

ಜಿಲ್ಲಾಧಿಕಾರಿಗಳು
ಹಾಗೂ ಅಧ್ಯಕ್ಷರು,
ಕಂದಗಲ್ ಹನುಮಂತರಾಯ ಸ್ಮೃತಿ ನಾಟಕೋತ್ಸವ ಸಮಿತಿ,
ವಿಜಾಪುರ.

ವಿಜಾಪುರ.

ದಿನಾಂಕ:- ೧೩-೧-೧೯೯೫



ಜಿಲ್ಲಾ ಆಡಳಿತ ಬಾಗಲಕೋಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ರನ್ನ ಪ್ರತಿಷ್ಠಾನ, ಮುಧೋಳ

ರನ್ನ ವೈಭವ-೨೦೧೧

ಅಭಿನಂದನಾ ಪತ್ರ

ಶ್ರೀಮತಿ/ಶ್ರೀ ಶ್ರೀಧರ ಹೆಗಡೆ ಇವರು

೨೦೧೧ ಜುಲೈ, ೨೯ ಹಾಗೂ ೩೦, ರಂದು ಬಾಗಲಕೋಟ ಜಿಲ್ಲೆಯ ಮುಧೋಳ ನಗರದಲ್ಲಿ ನಡೆದ 'ರನ್ನ ವೈಭವ' ಸಾಂಸ್ಕೃತಿಕ ಉತ್ಸವದಲ್ಲಿ [illegible] ಕಾರ್ಯಕ್ರಮವನ್ನು ನೀಡಿದ್ದಕ್ಕಾಗಿ ಅಭಿನಂದನೆಗಳೊಂದಿಗೆ ಈ ಪ್ರಶಸ್ತಿ ಪತ್ರ ನೀಡಲಾಗಿದೆ.

ಜಿಲ್ಲಾಧಿಕಾರಿಗಳು ಬಾಗಲಕೋಟ
ಹಾಗೂ ಅಧ್ಯಕ್ಷರು, ರನ್ನ ಪ್ರತಿಷ್ಠಾನ
ಮುಧೋಳ



ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

ಗುಲಬರ್ಗಾ ಜಿಲ್ಲಾ ನಾಟಕೋತ್ಸವ-2011

ಪ್ರಮಾಣ ಪತ್ರ

ದಿನಾಂಕ 07-02-2011 ರಿಂದ 09-02-2011ರವರೆಗೆ
ದಿ. ಮೋಹನಚಂದ ಕಿರಣಗಿಯವರ ಸ್ಮರಣಾರ್ಥ ಮೂರು ದಿನಗಳ ಕಾಲ
ಗುಲಬರ್ಗಾದಲ್ಲಿ ಜಿಲ್ಲಾ ನಾಟಕೋತ್ಸವ ಆಯೋಜಿಸಲಾಗಿತ್ತು.
ಈ ನಾಟಕೋತ್ಸವದಲ್ಲಿ ಶ್ರೀ/ಶ್ರೀಮತಿ/ಕುಮಾರಿ ..ಶ್ರೀಧರ್.....ಹೆಗಡೆ.............
ಇವರು ನಟ/ನಿರ್ದೇಶಕ/ನೇಪಥ್ಯ ಕಲಾವಿದರಾಗಿ ಸಕ್ರಿಯವಾಗಿ ಭಾಗವಹಿಸಿರುತ್ತಾರೆ.
ಇವರ ರಂಗ ಬದುಕಿಗೆ ಶುಭ ಹಾರೈಸುತ್ತೇವೆ.

| | | |
|---|---|---|
| ಡಾ. ಬಿ. ವಿ. ರಾಜಾರಾಂ | ಡಾ. ಸುಜಾತಾ ಜಂಗಮಶೆಟ್ಟಿ | ಶ್ರೀ ಟಿ. ಜಿ. ನರಸಿಂಹಮೂರ್ತಿ |
| ಅಧ್ಯಕ್ಷರು | ಸದಸ್ಯರು | ರಿಜಿಸ್ಟ್ರಾರ್ |
| ಕರ್ನಾಟಕ ನಾಟಕ ಅಕಾಡೆಮಿ | ಕರ್ನಾಟಕ ನಾಟಕ ಅಕಾಡೆಮಿ | ಕರ್ನಾಟಕ ನಾಟಕ ಅಕಾಡೆಮಿ |
| ಬೆಂಗಳೂರು | ಬೆಂಗಳೂರು | ಬೆಂಗಳೂರು |




ಶ್ರೀಧರ ಅವರು ಜನಿಸಿದ ಮನೆ




ಶ್ರೀಧರ ಹೆಗಡೆ ಅವರ ತಂದೆ ಶ್ರೀ ಗಣಪತಿ ಹೆಗಡೆ, ತಾಯಿ ಗಂಗಮ್ಮ




ಶ್ರೀಧರ ಹೆಗಡೆ ಸಹೋದರರೊಂದಿಗೆ
ರಾಮಚಂದ್ರ, ಪ್ರಭಾಕರ, ಮಹಾಬಲೇಶ್ವರ, ಶ್ರೀಧರ, ದಿವಾಕರ



ಶ್ರೀಧರ, ಪತ್ನಿ ರಾಜೇಶ್ವರಿ (ರಾಜಮ್ಮ), ಮಗು ಸುನಂದಾ



ಹದಿನಾರರ ಹರೆಯದಲ್ಲಿ: ಶ್ರೀಧರ ಹೆಗಡೆ



ಶ್ರೀಧರ ಹೆಗಡೆ (2007)



ಬೆಳ್ಳಿ ಕಿರೀಟದೊಂದಿಗೆ
ಶ್ರೀಧರ ಹೆಗಡೆ
(2007)



ಶ್ರೀಧರ ಹೆಗಡೆ (2015)



ಸ್ತ್ರೀ ಪಾತ್ರದಲ್ಲಿ ಶ್ರೀಧರ ಹೆಗಡೆ



'ಛಲ ತೀರಿಸಿದ ಹೆಣ್ಣು' ನಾಟಕದಲ್ಲಿ ಅವಿನಾಶ್ ಪಾತ್ರದಲ್ಲಿ ಶ್ರೀಧರ ಹೆಗಡೆ,
ಮುಷ್ಟಾಳ ಪಾತ್ರದಲ್ಲಿ ಶ್ರೀಮತಿ ರಾಜಮ್ಮ ಹೆಗಡೆ



ಹರಿಶ್ಚಂದ್ರ ನಾಟಕದ
ವಿಶ್ವಾಮಿತ್ರ ಪಾತ್ರದಲ್ಲಿ
ಶ್ರೀಧರ ಹೆಗಡೆ



'ನಾಯಿಗಳಿವೆ ಎಚ್ಚರಿಕೆ'
ನಾಟಕದ ಧರ್ಮರಾಜ ಪಾತ್ರದಲ್ಲಿ
ಶ್ರೀಧರ ಹೆಗಡೆ



'ಆಸ್ತಿಗಿಂತ ದೋಸ್ತಿ ದೊಡ್ಡದು'
ನಾಟಕದ ರಾಮುನ ಪಾತ್ರದಲ್ಲಿ
ಶ್ರೀಧರ ಹೆಗಡೆ



'ಹೇಮರಡ್ಡಿ ಮಲ್ಲಮ್ಮ'
ನಾಟಕದ ಭರಮರಡ್ಡಿ ಪಾತ್ರದಲ್ಲಿ
ಶ್ರೀಧರ ಹೆಗಡೆ



'ಶ್ರೀ ಗುರು ಕುಮಾರೇಶ್ವರ ನಾಟ್ಯ ಸಂಘ' ಪ್ರಯೋಗಿಸಿದ ಕಿವುಡ ಮಾಡಿದ ಕಿತಾಪತಿ ನಾಟಕದ 101ನೇ ಪ್ರಯೋಗದ ಕಾರ್ಯಕ್ರಮದಲ್ಲಿ ಮಾಡನಾಡುತ್ತಿರುವ ಶ್ರೀಧರ ಹೆಗಡೆ




ಕನ್ನಡ ಸಾಹಿತ್ಯ ಪರಿಷತ್ತು, ಜಿಲಾ ಆಸ್ಪತ್ರೆ ಏರ್ಪಡಿಸಿದ್ದ 'ನಗುತ್ತೇವೆ ನಾವು ನಮ್ಮ ಆರೋಗ್ಯಕ್ಕಾಗಿ' ವಿಚಾರ ಸಂಕಿರಣದಲ್ಲಿ ಮಾತನಾಡುತ್ತಿರುವ ಶ್ರೀಧರ ಹೆಗಡೆ



2007ರಲ್ಲಿ ಕಲ್ಬುರ್ಗಿಯ ಅಭಿನಂದನಾ ಸಮಿತಿಯಿಂದ ಶ್ರೀ ಶ್ರೀಧರ ಹೆಗಡೆ,
ಶ್ರೀ ಎಲ್.ಬಿ.ಕೆ. ಶೇಖ್ (ಮಾಸ್ತರ) ಅವರನ್ನು, ಹಾರಕೂಡು ಶ್ರೀ ಚೆನ್ನಬಸವೇಶ್ವರ
ಮಠದ ಪೂಜ್ಯ ಡಾ. ಚನ್ನವೀರ ಶಿವಾಚಾರ್ಯರು ಬಂಗಾರದ ಉಂಗುರ ತೊಡಿಸಿ
ಸನ್ಮಾನಿಸುತ್ತಿರುವುದು ಚಿತ್ರದಲ್ಲಿ, ಡಾ. ಮಲ್ಲಿಕಾರ್ಜುನ ಖರ್ಗೆ, ಡಾ. ಧರ್ಮಸಿಂಗ್,
ಶ್ರೀ ಅಲ್ಲಮಪ್ರಭು ಪಾಟೀಲ್ ಅವರನ್ನು ಕಾಣಬಹುದು.



2001ರ ಸಾಲಿನ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಸ್ವೀಕರಿಸುತ್ತಿರುವ ಶ್ರೀಧರ ಹೆಗಡೆ.
ಪ್ರಶಸ್ತಿ ಪ್ರದಾನ: ನಾಟಕ ಅಕಾಡೆಮಿ ಅಧ್ಯಕ್ಷರಾದ ಶ್ರೀ ನಾಗೇಶರವರಿಂದ



ಕಲಬುರಗಿ 13ನೇ ಜಿಲ್ಲಾ  ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಶ್ರೀಧರ ಹೆಗಡೆ,
ಶ್ರೀ ಎಲ್.ಬಿ. ಶೇಖ (ಮಾಸ್ತರ) ಅವರನ್ನು ಸನ್ಮಾನಿಸುತ್ತಿರುವ ಪರಿಷತ್ ಅಧ್ಯಕ್ಷರಾದ
ಶ್ರೀ ಮಹಿಪಾಲ ರಡ್ಡಿ ಮುನ್ನೂರು, ಕಾರ್ಯದರ್ಶಿ ಬಿ.ಹೆಚ್. ನೀರುಗುಡಿ ಹಾಗೂ
ಪೂಜ್ಯ ಡಾ. ತೋಟೇದ್ರ ಶ್ರೀಗಳು ಸನ್ಮಾನಿಸುತ್ತಿರುವುದು.



ಶ್ರೀ ಸಿದ್ದೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಶ್ರೀಧರ ಹೆಗಡೆಯವರನ್ನು ಸನ್ಮಾನಿಸುತ್ತಿರುವುದು.
ಶ್ರೀಮತಿ ಅರುಣಾ ಪಾಟೀಲ್ ಶಾಸಕರು ಹಾಗೂ ಗಣ್ಯರು.



ಹಾರಕೂಡ ಶ್ರೀ ಚನ್ನಬಸವೇಶ್ವರ ಮಠದಿಂದ 'ಚನ್ನರತ್ನ' ಪ್ರಶಸ್ತಿ ನೀಡಿ ಸನ್ಮಾನಿಸುತ್ತಿರುವ
ಶ್ರೀಮಠದ ಪೂಜ್ಯ ಡಾ. ಚನ್ನವೀರ ಶಿವಾಚಾರ್ಯರು
ಹಾಗೂ ಶಿಕ್ಷಣ ಸಚಿವರಾದ ಶ್ರೀ ತನ್ವೀರ್ ಸೇಠ್ (ನವೆಂಬರ್ 2016)



'ವಿಶ್ವ ಜ್ಯೋತಿ ಪಂಚಾಕ್ಷರ ನಾಟ್ಯ ಸಂಘ' ಜೇವರ್ಗಿ ಕಲಾವಿದರಿಂದ ಶಿರ್ಸಿ ಕ್ಯಾಂಪಿನಲ್ಲಿ
ಶ್ರೀಧರ ಹೆಗಡೆಯವರಿಗೆ ಸನ್ಮಾನ. ಸನ್ಮಾನಿಸುತ್ತಿರುವವರು
ಮಾನ್ಯ ಸಚಿವರು ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ಕಲಾವಿದರು.



ಶ್ರೀಮತಿ ಉಮಾಶ್ರೀ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿ ಕಲಬುರಗಿಗೆ ಪ್ರಥಮ ಬಾರಿ ಬಂದಾಗ 'ಶ್ರೀ ಗುರುಕುಮಾರೇಶ್ವರ ನಾಟ್ಯ ಸಂಘ' ಹಾನಗಲ್ ಕಲಾವಿದರಿಂದ ಸನ್ಮಾನ. ಸನ್ಮಾನಿಸುತ್ತಿರುವವರು ಶ್ರೀಧರ ಹೆಗಡೆ.



2007ರಲ್ಲಿ ಶ್ರೀ ಗುರುಕುಮಾರೇಶ್ವರ ನಾಟ್ಯ ಸಂಘ' ಹಾನಗಲ್ (ಕ್ಯಾಂಪ್ ಕಲಬುರಗಿ) ಶ್ರೀಮತಿ ಉಮಾಶ್ರೀ ಅವರು ರಂಗಭೂಮಿಗೆ ಭೇಟಿ ಕೊಟ್ಟಾಗ ಚಿತ್ರದಲ್ಲಿ ಶ್ರೀಧರ ಹೆಗಡೆ, ಶ್ರೀ ಎಲ್.ಬಿ. ಶೇಖ್ (ಮಾಸ್ತರ), ಸಾಹಿತಿ ಶ್ರೀ ಗವೀಶ್ ಹಿರೇಮಠ, ಕುಮಾರಿ ಸುನಂದಾ, ಕುಮಾರಿ ಉಮಾ.



'ಶ್ರೀ ಗುರುಕುಮಾರೇಶ್ವರ ನಾಟ್ಯ ಸಂಘ' ಹಾನಗಲ್ ಕಂಪನಿಗೆ ಚಲನಚಿತ್ರ ಕಲಾವಿದ ಶ್ರೀ ದೊಡ್ಡಣ್ಣ ಭೇಟಿ ನೀಡಿದಾಗ ಕಂಪನಿಯ ಒಡೆಯರಾದ ಶ್ರೀ ಎಲ್.ಬಿ ಶೇಖ್ (ಮಾಸ್ತರ) ಹಾಗೂ ಸಂಚಾಲಕರಾದ ಶ್ರೀಧರ ಹೆಗಡೆ ಸನ್ಮಾನಿಸುತ್ತಿರುವುದು. ಶ್ರೀ ಅಲ್ಲಮಪ್ರಭು ಪಾಟೀಲ್ ಎಂ.ಎಲ್.ಸಿ ಅವರನ್ನು ಕಾಣಬಹುದು



ಹಾರಕೂಡ ಶ್ರೀ ಚನ್ನಬಸವೇಶ್ವರ ಮಠದ ಚನ್ನರತ್ನ ಪ್ರಶಸ್ತಿ ಪಡೆದ ಐವರಲ್ಲಿ ಶ್ರೀಧರ ಹೆಗಡೆ (ಕುಳಿತವರಲ್ಲಿ ಮೊದಲನೆಯವರು)